೧. ಪೂರ್ಣಹೆಸರು : **ಡಾ. ಶಿವಾನಂದ ಎಸ್. ವಿರಕ್ತಮಠ**
೨. ವಿಳಾಸ : ಪ್ರಾಧ್ಯಾಪಕ
ಮಹಿಳಾ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
೩. ಜನ್ಮದಿನಾಂಕ : ೧-೬-೧೯೬೫
೪. ಧಾರಣೆ ಮಾಡಿದ ಹುದ್ದೆ : ಪ್ರಾಧ್ಯಾಪಕ
೫. ನೇಮಕಾತಿಯ ದಿನಾಂಕ : ೮-೬-೧೯೯೫ (ಉಪನ್ಯಾಸಕ)

## ಶೈಕ್ಷಣಿಕ ಅರ್ಹತೆ

೧. ಎಂ ಎ – ಗುಲಬರ್ಗಾ ವಿ.ವಿ. ಗುಲಬರ್ಗಾ, ಏಪ್ರಿಲ್ ೧೯೮೮–ಪ್ರಥಮ ದರ್ಜೆ, ಕನ್ನಡ
೨. ಎನ್ ಇ ಟಿ ಯು.ಜಿ.ಸಿ, ನವದೆಹಲಿ, ಡಿಸೆಂಬರ್ ೧೯೮೯, ಕನ್ನಡ ಉಪನ್ಯಾಸಕ ವೃತ್ತಿ ಅರ್ಹತೆ
೩. ಎಂ ಫಿಲ್ – ಗುಲಬರ್ಗಾ ವಿ.ವಿ. ಗುಲಬರ್ಗಾ, ಫೆಬ್ರವರಿ ೧೯೯೦, ಪ್ರಥಮ ದರ್ಜೆ, ಕನ್ನಡ
೪. ಪಿಎಚ್ ಡಿ – ಕನ್ನಡ ವಿಶ್ವವಿದ್ಯಾಲಯ, ಹಂಪಿ, ಮಾರ್ಚ ೨೦೦೨, ಉನ್ನತ ಶ್ರೇಣಿ, ಕನ್ನಡ

೫. ವಿಶೇಷ ಪರಿಣತಿಯ ಕ್ಷೇತ್ರ : **ಮಹಿಳಾ ಅಧ್ಯಯನ ಹಾಗೂ**
**ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿ ಅಧ್ಯಯನ ವಲಯಗಳು**

## ಬೋಧನಾ ಅನುಭವ

೧. ಸ್ನಾತಕ :ಬಿ.ಎ. ಸರಕಾರಿ ಪ್ರಥಮ ದರ್ಜೆ ಕಾಲೇಜು, ಸೇಡಂ, ೧೯೮೮–೧೯೯೦–(ಎರಡು ವರ್ಷ)
೨. ಸ್ನಾತಕೋತ್ತರ : ಕನ್ನಡ ಎಂ ಎ ಸ್ನಾತಕೋತ್ತರ ಕೇಂದ್ರ, ಸೊಂಡೂರು, ೧೯೯೦–೧೯೯೨(ಎರಡು ವರ್ಷ)
೩. ಎಂ.ಎ, ಪಿಎಚ್.ಡಿ ಸಂಯೋಜಿತ ಪದವಿ (ಕನ್ನಡ) ಭಾಷಾ ನಿಕಾಯ, ಕನ್ನಡ ವಿ.ವಿ,ಹಂಪಿ, ೨೦೦೨ ರಿಂದ ೨೦೧೭(ಹದಿನೈದು ವರ್ಷ)
೪. ಮಹಿಳಾ ಅಧ್ಯಯನ ಎಂ ಎ, ಮಹಿಳಾ ಅಧ್ಯಯನ ಕೇಂದ್ರ ಕನ್ನಡ ವಿವಿಹಂ, ೨೦೦೭ ರಿಂದ ೨೦೦೯(ಎರಡು ವರ್ಷ)
೫. ಮಹಿಳಾ ಅಧ್ಯಯನ ಡಿಪ್ಲೊಮಾ, ಮಹಿಳಾ ಅಧ್ಯಯನ ಕೇಂದ್ರ ಕನ್ನಡ ವಿ.ವಿ,ಹಂಪಿ, ೨೦೦೫ ರಿಂದ ೨೦೦೭ (ಎರಡು ವರ್ಷ)
೬. ಎಂ.ಫಿಲ್, ಮಹಿಳಾ ಅಧ್ಯಯನ, ಮಹಿಳಾ ಅಧ್ಯಯನ ವಿಭಾಗ ಕವಿಹಂಪಿ, ೨೦೦೬ ರಿಂದ ೨೦೧೧ (ಎಂಟು ವರ್ಷ)
೭. ಪಿಎಚ್ ಡಿ ಕೋರ್ಸವರ್ಕ, ಮಹಿಳಾ ಅಧ್ಯಯನ ವಿಭಾಗ ಕನ್ನಡ ವಿವಿಹಂ ೨೦೦೯ ರಿಂದ ೨೦೧೪, ಮಹಿಳಾ ಅಧ್ಯಯನ, (ಆರು ವರ್ಷ)
೮. ಕನ್ನಡ ಎಂ ಎ, ದೂರಶಿಕ್ಷಣ ಕೇಂದ್ರ ಕನ್ನಡ ವಿ.ವಿ. ಹಂಪಿ, ೨೦೦೫ ರಿಂದ ೨೦೧೭
೯. ಸ್ನಾತಕೋತ್ತರ ಡಿಪ್ಲೊಮಾ ಕನ್ನಡ ಸಾಹಿತ್ಯ, ದೂರಶಿಕ್ಷಣ ಕೇಂದ್ರ ಕನ್ನಡ ವಿ.ವಿ. ಹಂಪಿ, ೨೦೦೫ ರಿಂದ ೨೦೧೭
೧೦. ಮಹಿಳಾ ಅಧ್ಯಯನ ಎಂ ಎ, ಪಿಎಚ್.ಡಿ,ಕೋರ್ಸ್, ಮಹಿಳಾ ಅಧ್ಯಯನ ವಿಭಾಗ ಕನ್ನಡ ವಿವಿಹಂ, ೨೦೧೬ ರಿಂದ ೨೦೧೭

## ಸಂಶೋಧನೆಯಲ್ಲಿನ ಅನುಭವ ಮತ್ತು ಪ್ರಕಟಣೆ

## ಸಂಶೋಧನೆಗೆ ಮಾರ್ಗದರ್ಶನ (ಎಂ.ಫಿಲ್)

೧. ಕಾವೇರಿ ಪಿ ಸಾಗರ ಪೂರ್ಣಕಾಲಿಕ ಗುಲಬರ್ಗಾ ಕೊಳಚೆ ಪ್ರದೇಶದ ಮಹಿಳಾ ಬದುಕು ೨೦೦೬-೦೭, ೩೦-೭-೨೦೦೭
೨. ಉಮೇಶ ಬಸಪ್ಪ ಕಾತರಕಿ ಪೂರ್ಣಕಾಲಿಕ ಬಿಸರಳ್ಳಿಯ ದೇವದಾಸಿ ಪದ್ಧತಿ : ಒಂದು ಅಧ್ಯಯನ ೨೦೦೬-೦೭ ೩೦-೭-೨೦೦೭
೩. ಬಾಣಗಾರ ಗೌರಮ್ಮ ಪೂರ್ಣಕಾಲಿಕ ಮಹಿಳಾ ಕಂಡಕ್ಟರ್‌ಗಳ ಸ್ಥಿತಿಗತಿ ಹಾಗೂ ಸಮಸ್ಯೆಗಳು ೨೦೦೬-೦೭ ೩೦-೭-೨೦೦೭
೪. ರಜಿಯಾಬಾನು ಕೆ ಎಸ್ ಪೂರ್ಣಕಾಲಿಕ ಮುಸ್ಲಿಂ ಮಹಿಳೆಯ ಸಾಮಾಜಿಕ ಬದುಕು ೨೦೦೭-೦೮ ೩೧-೧೦-೨೦೦೮
೫. ವೀಣಾ ಕುಲಕರ್ಣಿ ಪೂರ್ಣಕಾಲಿಕ ಬ್ರಾಹ್ಮಣ ಧರ್ಮದಲ್ಲಿನ ಮಹಿಳಾ ಚಹರೆ ೨೦೦೭-೦೮ ೩೧-೧೦-೨೦೦೮
೬. ಭುವನೇಶ್ವರಿ ಗುನ್ನಳ್ಳಿ ಪೂರ್ಣಕಾಲಿಕ ಕೊರವ ಮಹಿಳೆಯರ ಬದುಕು ಮತ್ತು ಬವಣೆ ೨೦೦೮-೦೯ ೭-೧೦-೨೦೦೯
೭. ಲೋಕೇಶ ಎಸ್ ಎನ್ ಪೂರ್ಣಕಾಲಿಕ ಉನ್ನತ ಶಿಕ್ಷಣದಲ್ಲಿ ಪರಿಶಿಷ್ಟ ಜಾತಿಯ ಮಹಿಳಾ ವಿದ್ಯಾರ್ಥಿನಿಯರು: ಒಂದು ಅಧ್ಯಯನ ೨೦೦೮-೦೯ ೨೫-೭-೨೦೦೯
೮. ಹನುಮೇಶ ಪೂರ್ಣಕಾಲಿಕ ನಾಟಿ ವೈದ್ಯ ಪದ್ಧತಿ ಮತ್ತು ಮಹಿಳೆಯರು ೨೦೦೯-೧೦ ೧೪-೯-೨೦೧೦
೯. ಗುರುಪ್ರಸಾದ ಪೂರ್ಣಕಾಲಿಕ ಗುಡಿ ಕೈಗಾರಿಕೆಗಳಲ್ಲಿ ಮಹಿಳಾ ಬದುಕು ೨೦೦೯-೧೦ ೧೫-೯-೨೦೧೦

## ಸಂಶೋಧನೆಗೆ ಮಾರ್ಗದರ್ಶನ (ಪಿಎಚ್.ಡಿ)ಪಡೆದಿರುವವರ ವಿವರ

೧. ಚಂದ್ರಕಲಾ ಬಿದರಿ, ಪೂರ್ಣಕಾಲಿಕ, ಹೈದರಾಬಾದ ಕರ್ನಾಟಕ ಸಾಹಿತ್ಯದಲ್ಲಿ ಮಹಿಳಾ ಬದುಕಿನ ಪ್ರತಿನಿಧೀಕರಣ, ೩೯೯/೩೦-೮-೦೩, ೧-೧-೦೮
೨. ಕಲಾವತಿ ಬಿ ಜಿ, ಪೂರ್ಣಕಾಲಿಕ, ಜಾಹೀರಾತುಗಳಲ್ಲಿ ಮಹಿಳಾ ಪ್ರತಿನಿಧೀಕರಣ, ಕೆ೨೦೪/೫-೮-೦೨ ೨-೧-೦೮
೩. ನಾಗರಾಜ ಎಸ್, ಅರೆಕಾಲಿಕ, ಇಪ್ಪತ್ತನೆಯ ಶತಮಾನದ ಕೊನೆಯ ದಶಕಗಳಲ್ಲಿ ಸಂಸ್ಕೃತಿಯ ಪ್ರಶ್ನೆ, ೩೯೭/೨೫-೮-೦೩, ೨೧-೧-೦೮
೪. ಮಲ್ಲಿಕಾರ್ಜುನ ಎಂ ಸಿ, ಅರೆಕಾಲಿಕ, ಆಧುನಿಕ ಕಥನ ಸಾಹಿತ್ಯದಲ್ಲಿ ಭೂ ಹೋರಾಟದ ಪ್ರತಿನಿಧೀಕರಣ, ೩೯೮/೨೫-೮-೦೩, ೨೧-೧-೦೮
೫. ರಾಮ ಕಲಾಲ, ಪೂರ್ಣಕಾಲಿಕ, ಪಂಚಾಯತ್‌ರಾಜ್ ವ್ಯವಸ್ಥೆಯಲ್ಲಿ ದಲಿತ ಮಹಿಳಾ ಪ್ರತಿನಿಧೀಕರಣ, ಎಮ್೩೦೩/೨೮-೨-೦೯, ೧೯-೧೧-೦೯
೬. ಉಮಾದೇವಿ ಒಡೆಯರ, ಅರೆಕಾಲಿಕ, ಗ್ರಾಮೀಣ ಮಹಿಳೆಯ ಸಬಲೀಕರಣ: ಒಂದು ಸ್ತ್ರೀವಾದಿ ಅಧ್ಯಯನ, (ಹೈದರಾಬಾದ ಕರ್ನಾಟಕವನ್ನು ಅನುಲಕ್ಷಿಸಿ), ೫೨೧/೯-೯-೦೪, ೫-೧-೧೦
೭. ಸುಕನ್ಯಾ ಎಸ್ ಹಾವನೂರ, ಪೂರ್ಣಕಾಲಿಕ, ದಲಿತ ಬಂಡಾಯ ಸಾಹಿತ್ಯದಲ್ಲಿ ಮಹಿಳಾ ಪ್ರತಿನಿಧೀಕರಣ, ೪೦೩/೪-೯-೦೩, ೫-೧-೧೦
೮. ಅಕ್ಕಮ್ಮ ಟಿ., ಪೂರ್ಣಕಾಲಿಕ, ಅಸಂಘಟಿತ ವಲಯದಲ್ಲಿ ಮಹಿಳಾ ಕೆಲಸಗಾರರು: ಒಂದು ಅಧ್ಯಯನ, ಎಮ್೪೦೮/೧೭-೮-೦೯, ೨೩-೧೧-೧೦
೯. ಕಾವೇರಿ ಪಿ ಸಾಗರ, ಪೂರ್ಣಕಾಲಿಕ, ದೂರದರ್ಶನ ಧಾರವಾಹಿಗಳಲ್ಲಿ ಮಹಿಳಾ ಪ್ರತಿನಿಧೀಕರಣ, ೬೮೮/೬-೧೧-೦೭, ೧೭-೭-೧೩
೧೦. ಶಶಿಕಲಾ ಎಸ್., ಅರೆಕಾಲಿಕ, ದಾದಿಯರು ಲಿಂಗಸಂಬಂಧಿ ಅಧ್ಯಯನ (ಬೆಂಗಳೂರು ನಗರವನ್ನು ಅನುಲಕ್ಷಿಸಿ) ೮೪೪/೩೦-೧೧-೦೯, ೧-೩-೧೪

೧೧. ಲೋಕೇಶ ಎಸ್ ಎನ್, ಅರೆಕಾಲಿಕ, ಮಹಿಳಾ ದೌರ್ಜನ್ಯಗಳು : ಲಿಂಗ ಸಂಬಂಧಿ ಅಧ್ಯಯನ, (ಬೆಂಗಳೂರು ನಗರದ ಪೋಲೀಸ್ ದಾಖಲಾತಿಗಳನ್ನು ಅನುಲಕ್ಷಿಸಿ),೩೦-೧೦-೨೦೧೦,೪-೧೧-೧೫

೧೨. ಭುವನೇಶ್ವರಿ ಗುನ್ನಳ್ಳಿ., ಅರೆಕಾಲಿಕ, ಮಹಿಳೆಯರ ಮೇಲಿನ ಕೌಟುಂಬಿಕ ದೌರ್ಜನ್ಯ : ಲಿಂಗೀಯ ಅಧ್ಯಯನ (ಕೊಪ್ಪಳ ಜಿಲ್ಲೆಯನ್ನು ಅನುಲಕ್ಷಿಸಿ) ೮೪೯/೩೦-೧೧-೦೯, ೧೧-೨-೧

೧೩. ಈ. ನಾಗರತ್ನ. ಕನ್ನಡ ಮತ್ತು ಹಿಂದಿ ರಾಮಾಯಣಗಳಲ್ಲಿ ನಿರ್ಲಕ್ಷಿತ ಸ್ತ್ರೀಪಾತ್ರಗಳು, ೨೭-೧-೨೦೦೭

## ಸಂಶೋಧನೆಗೆ ಮಾರ್ಗದರ್ಶನ (ಪಿಎಚ್.ಡಿ)ಪಡೆಯುತ್ತಿರುವವರ ವಿವರ

1. ಉಮಾ ಎಚ್ ಎಂ, ಮಹಿಳಾ ದಶಕದಲ್ಲಿ ಲೇಖಕಿಯರ ಕಥನ ಸಾಹಿತ್ಯದಲ್ಲಿ ಮಹಿಳಾ ಪ್ರತಿನಿಧೀಕರಣ–2014
2. ಸಂಧ್ಯಾ ಎಚ್.ಎಸ್, ಹೆಣ್ಣುಮಕ್ಕಳ ಅನೈತಿಕ ಸಾಗಾಣಿಕೆ : ಸ್ತ್ರೀವಾದಿ ಅಧ್ಯಯನ (ಬೆಂಗಳೂರು ನಗರ, ಗ್ರಾಮಾಂತರ ಮತ್ತು ಮೈಸೂರು ಜಿಲ್ಲೆಗಳನ್ನು ಅನುಲಕ್ಷಿಸಿ), –2014
3. ವೀರನಗೌಡ, ಕನ್ನಡ ಚಲನ ಚಿತ್ರಗೀತೆಗಳಲ್ಲಿ ಮಹಿಳಾ ಚಿತ್ರಣ,–2014
4. ಶಾರದ.ಟಿ, ಮಹಿಳಾ ಅಭಿವ್ಯಕ್ತಿ: ಕನ್ನಡ ವಿಮರ್ಶೆಯ ಲಿಂಗರಾಜಕಾರಣ (ಆಧುನಿಕ ಕನ್ನಡ ಸಾಹಿತ್ಯವನ್ನು ಅನುಲಕ್ಷಿಸಿ), - 2015

೫. ಸರೋಜಿನಿ ಬಿ ಕೊಟ್ಯಾಳ, ಹರದೇಶಿ–ನಾಗೇಶಿ ಸಾಹಿತ್ಯ: ಸ್ತ್ರೀವಾದಿ ಅಧ್ಯಯನ (ಉತ್ತರ ಕರ್ನಾಟಕವನ್ನು ಅನುಲಕ್ಷಿಸಿ), -2015

6. ತಾಯಶ್ರೀ , ವರದಕ್ಷಿಣ ಸಮಸ್ಯೆ : ಸ್ತ್ರೀವಾದಿ ಅಧ್ಯಯನ, – 2016

೭. ಸುಮಲತ ,ಹೆಣ್ಣು–ಗಂಡು ಮಕ್ಕಳ ಸಾಮಾಜೀಕರಣದ ಸಮಸ್ಯೆ : ಸ್ತ್ರೀವಾದಿ ಅಧ್ಯಯನಅಕ್ಟೋಬರ್– 2016

8. ನಯನ, ಕಾರ್ನಾಡ ಮತ್ತು ಕಂಬಾರರ ನಾಟಕಗಳಲ್ಲಿ ಮಹಿಳಾ ಅಸ್ತಿತ್ವದ ಹುಡುಕಾಟ –2016

**ಮಾರ್ಗದರ್ಶನ/ಪೋಸ್ಟ್ ಡಾಕ್ಟರಲ್ ಫೆಲೋಗಳು:**

೧. ವೀರೇಶ್, ಪೋಸ್ಟ್ ಡಾಕ್ಟರಲ್ ಫೆಲೋ, ವಿಷಯ: ಹೈದರಾಬಾದ್ ಕರ್ನಾಟಕದ ಲಿಂಗಸಂಬಂಧಿ ಅಭಿವೃದ್ಧಿ ಅಧ್ಯಯನ ( ಪ.ಜಾ ಮತ್ತು ಪ.ಪಂ ಮಹಿಳೆಯರನ್ನು ಅನುಲಕ್ಷಿಸಿ)

೨. ಡಾ. ಸರೋಜಾ ಸಂತಿ, ಪೋಸ್ಟ್ ಡಾಕ್ಟರಲ್ ಫೆಲೋ, ಮಹಿಳಾ ಆರೋಗ್ಯ ಸ್ವಚ್ಚಾ ಭಾರತ ಅಭಿಯಾನ ಮಿಷನಿನ ಪ್ರಭಾವ(ಹೈದ್ರಬಾದ್ ಕರ್ನಾಟಕ ಪ್ರದೇಶದ ಬಳ್ಳಾರಿ ಜೀಲ್ಲಾ ಅನುಲಕ್ಷಿಸಿ)

೩.

## ಸಂಶೋಧನಾ ಯೋಜನೆಗಳು

### ಅ. ಸಾಂಸ್ಥಿಕ ಯೋಜನೆಗಳು :

**೧. ಸಂಶೋಧನ ಕರ್ನಾಟಕ ಕನ್ನಡ ವಿವಿಹಂಪಿ ೧೯೯೨-೯೩ ಕೆಳಗಿನ ಫಲಿತ**

ಕರ್ನಾಟಕದ ವಿಷಯಗಳನ್ನು ಕುರಿತಂತೆ ವಿವಿಧ ವಿಶ್ವವಿದ್ಯಾಲಯಗಳಲ್ಲಿ ನಡೆದ ಪಿಎಚ್ ಡಿ ಮಹಾಪ್ರಬಂಧಗಳ ಪರಿಚಯಾತ್ಮಕ ಕೃತಿಯಾಗಿ ಈ ಸಂಪುಟವನ್ನು ರೂಪಿಸಲಾಗಿದ್ದು, ನಾನು ಕರ್ನಾಟಕ ವಿಶ್ವವಿದ್ಯಾಲಯದ ಮಾಹಿತಿಯನ್ನು ಸಂಗ್ರಹಿಸಿ ಒದಗಿಸಿದ್ದೇನೆ. ಭಾಷಿಕ, ಸಾಹಿತ್ಯಿಕ, ಜಾನಪದ, ಮಾನವಿಕ ಹಾಗೂ ವೈಜ್ಞಾನಿಕ ವಿಷಯಗಳ ಅಧ್ಯಯನಗಳ ಸಮಗ್ರ ಮಾಹಿತಿಯನ್ನು ಕ್ರೋಢೀಕರಿಸುವುದು ಇದರ ಆಶಯವಾಗಿದೆ. ಇದನ್ನು ಇತ್ತೀಚೆಗೆ ಸಮಗ್ರವಾಗಿ ಕನ್ನಡ ವಿವಿ ಗ್ರಂಥಾಲಯವು ರೂಪಿಸಿ ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಬಿಡುಗಡೆ ಮಾಡಿದೆ.

**೨. ಪಿಯುಸಿ, ವಿಜ್ಞಾನ ಪಠ್ಯಪುಸ್ತಕಗಳು ಕನ್ನಡ ವಿವಿಹಂಪಿ ೧೯೯೫-೯೬ ಕೆಳಗಿನ ಫಲಿತ**

ಪಿಯುಸಿ ಪಠ್ಯಕ್ರಮದ ಅನುಸಾರ ಕನ್ನಡದಲ್ಲಿ ವಿಜ್ಞಾನ ಪಠ್ಯಪುಸ್ತಕಗಳನ್ನು ಸಿದ್ಧಪಡಿಸುವ ಯೋಜನೆಯನ್ನು ಸಂಕಲನ ವಿಭಾಗವು ಕೈಗೆತ್ತಿಕೊಂಡು ನಿರ್ವಹಿಸಿತು. ಕನ್ನಡದಲ್ಲಿ ವಿಜ್ಞಾನ ವಿಷಯಗಳನ್ನು ಒದಗಿಸುವುದು ಇದರ ಹಿಂದಿನ ಆಶಯವಾಗಿದೆ. ಪಿಯುಸಿ ಎರಡೂ

ವರ್ಷಗಳ ನಾಲ್ಕು ವಿಷಯಗಳಾದ ಭೌತಶಾಸ್ತ್ರ, ರಸಾಯನಶಾಸ್ತ್ರ, ಜೀವಶಾಸ್ತ್ರ ಮತ್ತು ಗಣಿತ ವಿಷಯಗಳ ಪಠ್ಯ ಪುಸ್ತಕಗಳಾಗಿ ಇವುಗಳನ್ನು ಸಿದ್ಧಪಡಿಸಿ ವಿವಿಯಿಂದ ಪ್ರಕಟಿಸಲಾಯಿತು. ಈ ಯೋಜನೆಯ ಮುಖ್ಯಸ್ಥರ ಜೊತೆ ಸೇರಿಕೊಂಡು ಕರಡು ಪರಿಶೀಲನೆ ಹಾಗೂ ಸಂಕಲಗಳ ಕೆಲಸವನ್ನು ನಿರ್ವಹಿಸಲಾಯಿತು. ವಿಜ್ಞಾನ ವಿಷಯಗಳನ್ನು ಕನ್ನಡದಲ್ಲಿ ಅರ್ಥೈಸಿಕೊಳ್ಳಲು ಈ ಪಠ್ಯಪುಸ್ತಕಗಳು ನೆರವಾಗುತ್ತವೆ.

**೩, ಜೀವಜಗತ್ತು ವಿಶ್ವಕೋಶ ಕನ್ನಡ ವಿವಿಹಂಪಿ ೧೯೯೬-೯೮ ಕೆಳಗಿನ ಫಲಿತ**

ಕನ್ನಡ ವಿಶ್ವವಿದ್ಯಾಲಯವು ವಿಷಯ ವಿಶ್ವಕೋಶಗಳ ಯೋಜನೆಯನ್ನು ಕೈಗೆತ್ತಿಕೊಂಡು ನಿರ್ವಹಿಸಲು ಮುಂದಾದಾಗ ನಮಗೆ ವಹಿಸಿಕೊಡಲಾದ ಯೋಜನೆಯಾಗಿ ಜೀವಜಗತ್ತು ವಿಷಯ ವಿಶ್ವಕೋಶವನ್ನು ರೂಪಿಸಲಾಯಿತು. ಈ ವಿಶ್ವಕೋಶವು ಜೀವ ವಿಜ್ಞಾನ ವಿಷಯಕ್ಕೆ ಸಂಬಂಧಪಟ್ಟಿದ್ದು, ಇದು ಕರ್ನಾಟಕದಾದ್ಯಂತ ಸಂಶೋಧನೆ ಮಾಡಿರುವ ಜೀವ ವಿಜ್ಞಾನ ವಿದ್ವಾಂಸರು ಸಿದ್ದಪಡಿಸಿ ಕಳಿಸಿದ ಲೇಖನಗಳನ್ನು ಒಳಗೊಂಡ ಸಂಪುಟವಾಗಿದೆ. ಮೂವರು ವಿಷಯ ತಜ್ಞರು ಇದನ್ನು ಪರಿಷ್ಕರಿಸಿ ಕೊಟ್ಟಿದ್ದಾರೆ. ಪ್ರಧಾನ ಸಂಪಾದಕರು, ಸಂಪಾದಕರು, ಸಹಸಂಪಾದಕರು ಹಾಗೂ ವಿಷಯ ತಜ್ಞರು ಎಂಬ ಸಂಪಾದಕ ಮಂಡಳಿಯಲ್ಲಿ ನಾನು ಸಹ ಸಂಪಾದಕನಾಗಿ ಕರಡು ಪರಿಶೀಲನೆ ಕಾರ್ಯವನ್ನು ನಿರ್ವಹಿಸಿದ್ದೇನೆ. ಈ ಕೃತಿಯನ್ನು ಕನ್ನಡ ವಿಶ್ವವಿದ್ಯಾಲಯವು ಪ್ರಕಟಿಸಿದ್ದು, ಜೀವವಿಜ್ಞಾನ ವಿಷಯವನ್ನು ಕನ್ನಡದಲ್ಲಿ ಓದುವವರಿಗೆ ಇದು ಅಮೂಲ್ಯ ಆಕರಗ್ರಂಥವಾಗಿದೆ.

**೪.ಕರ್ನಾಟಕ ಕನ್ನಡಿ ಕನ್ನಡ ವಿವಿಹಂಪಿ ೧೯೯೮-೯೯ ಕೆಳಗಿನ ಫಲಿತ**

ಕರ್ನಾಟಕದ ಚರಿತ್ರೆ, ಪ್ರಾಗೈತಿಹಾಸಿಕ ನೆಲೆಗಳು ಹಾಗೂ ಇಲ್ಲಿನ ಜನಸಮುದಾಯಗಳ ಸಂಸ್ಕೃತಿ ಹಾಗು ಸಾಹಿತ್ಯ ಕಲೆಗಳ ಒಂದು ಸ್ಥೂಲ ನೋಟವನ್ನು ಕಟ್ಟಿಕೊಡುವ ಉದ್ದೇಶದಿಂದ ಕರ್ನಾಟಕದ ಪರಿಚಯ ಪುಸ್ತಿಕೆಯಾಗಿ ಕರ್ನಾಟಕದ ಕನ್ನಡಿ ಕೃತಿಯನ್ನು ರೂಪಿಸಲಾಗಿದೆ. ಇತರ ಲೇಖಕರೊಡನೆ ಸೇರಿಕೊಂಡು ಈ ಕರ್ನಾಟಕ ಕನ್ನಡಿಯನ್ನು ಸಿದ್ಧಪಡಿಸಿದೆ. ವಿಶ್ವವಿದ್ಯಾಲಯವು ಇದನ್ನು ಪ್ರಕಟಿಸಿದೆ.

**೫.ಕನ್ನಡ ಅಧ್ಯಯನ ಪತ್ರಿಕೆ (ತ್ರೈಮಾಸಿಕ) ಕನ್ನಡ ವಿವಿಹಂಪಿ ೧೯೯೯-೨೦೦೩ ಕೆಳಗಿನ ಫಲಿತ**
**(ಸಹಾಯಕ ಸಂಪಾದಕ)ಪ್ರತಿ ೩ ತಿಂಗಳಿಗೊಂದರಂತೆ ಒಟ್ಟು ೧೪(ಹದಿನಾಲ್ಕು) ಬಿಡಿ ಸಂಚಿಕೆಗಳು**

ಕನ್ನಡ ಅಧ್ಯಯನ ಪತ್ರಿಕೆಯನ್ನು ಮೂರು ತಿಂಗಳಿಗೊಂದು ಸಂಪುಟದಂತೆ ವಿಶ್ವವಿದ್ಯಾಲಯದಿಂದ ಪ್ರಕಟಿಸಲಾಗಿದೆ. ಕರ್ನಾಟಕದಲ್ಲಿ ನಡೆಯುತ್ತಿರುವ ಕನ್ನಡ ಸಾಹಿತ್ಯ, ಸಂಸ್ಕೃತಿ ಮತ್ತು ಸಮಾಜಗಳ ಕುರಿತ ಸಂಶೋಧನ ಲೇಖನಗಳನ್ನು ಪ್ರಕಟಿಸುವ ಅಧ್ಯಯನ ಪತ್ರಕೆಯಾಗಿದೆ. ಪ್ರತಿ ಸಂಪುಟವು ಅನೇಕ ವಿದ್ವಾಂಸರ ಲೇಖನಗಳು, ಸಂವಾದ, ಸಂದರ್ಶನ ಹೀಗೆ ವೈವಿಧ್ಮಯವಾಗಿ ರೂಪಿಸಲಾಗಿದ್ದು, ವಾರ್ಷಿಕ ಚಂದಾದಾರರಿಗೆ ಇವುಗಳನ್ನು ಕಳಿಸಲಾಗಿದೆ. ಇದು ವಿಶ್ವವಿದ್ಯಾಲಯದ ಮಹತ್ವದ ಅಕೆಡೆಮಿಕ ಪತ್ರಿಕೆಯಾಗಿ ಈಗಲೂ ಪ್ರಕಟವಗುತ್ತಿದೆ. ನಾನು ಹದಿನಾಲ್ಕು ಸಂಪುಟಗಳಿಗೆ ಸಹಾಯಕ ಸಂಪಾದಕನಾಗಿ ಕಾರ್ಯ ನಿರ್ವಹಿಸಿದ್ದೇನೆ.

**೬. ಕನ್ನಡ ಸಾಹಿತ್ಯ ಮತ್ತು ಇತರ ಜ್ಞಾನ ಶಿಸ್ತುಗಳು ಕನ್ನಡ ವಿವಿಹಂಪಿ ೨೦೦೨-೦೩ ಕೆಳಗಿನ ಫಲಿತ**

ಕನ್ನಡ ಸಾಹಿತ್ಯವನ್ನು ಇತರ ಜ್ಞಾನ ಶಿಸ್ತುಗಳ ಸಂಬಂಧದಿಂದ ಅಧ್ಯಯನ ಮಾಡುವ ಸಾಧ್ಯತೆಯನ್ನು ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಆರಂಭದಿಂದಲೂ ಗಮನಿಸಿಕೊಂಡು ಬರಲಾಗಿದೆ. ಸಾಹಿತ್ಯ ಎನ್ನುವ ಜ್ಞಾನಶಾಖೆಯು ಆಂತರಿಕವಾಗಿ ಬೇರೆ ಬೇರೆ ಜ್ಞಾನಶಿಸ್ತುಗಳೊದಿಗೆ ನಿಕಟವಾದ ಅಂತರ್ ಸಂಬಂಧವನ್ನು ಹೊಂದಿರುತ್ತದೆ. ಈ ಸಂಬಂಧದ ಸ್ವರೂಪವನ್ನು ಗ್ರಹಿಸುವ ಚಿಂತಕರ ಲೇಖನಗಳನ್ನು ಸಂಗ್ರಹಿಸಿ, ಅವುಗಳ ತುಲನಾತ್ಮಕ ಅದ್ಯಯನದ ಎಳೆಗಳಿಂದ ಸಾಹಿತ್ಯ ಅಧ್ಯಯನದ ಸಾಧ್ಯತೆಯನ್ನು ವಿಸ್ತರಿಸುವುದು ಈ ಸಂಪುಟದ ಆಶಯವಾಗಿದೆ. ಸಾಹಿತ್ಯ ಮತು ತತ್ವಶಾಸ್ತ್ರ, ಸಾಹಿತ್ಯ ಮತ್ತು ಮನಶಾಸ್ತ್ರ, ಸಾಹಿತ್ಯ ಮತ್ತು ಸಮಾಜಶಾಸ್ತ್ರ, ಸಾಹಿತ್ಯ ಮತ್ತು ಪುರಾಣ, ಸಾಹಿತ್ಯ ಮತ್ತು ಚರಿತ್ರೆ, ಸಾಹಿತ್ಯ ಮತ್ತು ವಿಜ್ಞಾನ, ಸಾಹಿತ್ಯ ಮತ್ತು ಕಲೆ ಹೀಗೆ ವಿಭಿನ್ನ ಜ್ಞಾನಶಿಸ್ತುಗಳ ಸಂಬಂಧವನ್ನು ಸಾಹಿತ್ಯ ಅಧ್ಯಯನದ ವಿಸ್ತರಣೆಯಾಗಿ ನೋಡುವ ಬಗೆಯನ್ನು ಇಲ್ಲಿ ಮಾಡಲಾಗಿದೆ.

**೭. ಶತಮಾನದ ಚಿಂತನೆ : ಮಹಿಳೆ ಕನ್ನಡ ವಿವಿಹಂಪಿ ೨೦೦೩-೦೪ ಕೆಳಗಿನ ಫಲಿತ**

ಕನ್ನಡ ಸಾಹಿತ್ಯ ಮತು ಸಾಂಸ್ಕೃತಿಕ ಅಧ್ಯಯನ ವಲಯಗಳಲ್ಲಿ ಮಹಿಳಾ ಚಿಂತನೆ ಎಂಬುದು ಒಂದು ಕೇಂದ್ರ ನೆಲೆಗೆ ಬಂದಿರುವುದು ಎಪ್ಪತ್ತರದಶಕದಿಂದೀಚೆಗೆ ಎಂದು ಹೇಳಬಹುದು. ಅದರೂ ಸಂಸ್ಕೃತಿ ಚಿಂತಕರು ಮಹಿಳಾ ಪ್ರಜ್ಞೆಯನ್ನು ಲಕ್ಷ್ಯವಾಗಿರಿಸಿಕೊಂಡು ನಡೆಸಿದ ಚಿಂತನೆಗಳೆಲ್ಲವನ್ನು ಒಟ್ಟಿಗೆ ಇಟ್ಟು ಅವುಗಳ ಚಾರಿತ್ರಿಕ ಸಂಬಂಧ ಹಾಗೂ ಬೆಳವಣಿಗೆಯನ್ನು ಗುರುತಿಸುವುದು ಈ ಸಂಪುಟದಲ್ಲಿ ಮಾಡಲಾಗಿದೆ. ಇಪ್ಪತ್ತನೆಯ ಶತಮಾನದ ಮುಖ್ಯ ಚಿಂತಕರ ಲೇಖನಗಳನ್ನು ಆಯ್ಕೆಮಾಡಿ ಈ ಸಂಪುಟವನ್ನು ರೂಪಿಸಲಾಗಿದೆ. ಈ ಆಯ್ದ ಲೇಖನಗಳ ಹಿಂದಿರುವ ಮಹಿಳಾ ಚಿಂತನೆಯನ್ನು ಕ್ರೋಢೀಕರಿಸಿ ವಿಶ್ಲೇಷಿಸುವುದು ಈ ಸಂಪುಟದ ಚೌಕಟ್ಟಾಗಿದೆ.

**೮. ಹೆಣ್ಣು ಮತ್ತು ಭಾಷೆ ಕನ್ನಡ ವಿವಿಹಂಪಿ ೨೦೦೬-೦೭ ಕೆಳಗಿನ ಫಲಿತ**

ಕನ್ನಡ ವಿವಿಯ ಯುಜಿಸಿ ಮಹಿಳಾ ಅಧ್ಯಯನ ಕೇಂದ್ರವು ಸಿಐಐಎಲ್ ಮೈಸೂರು ಸಂಸ್ಥೆಯ ಸಹಯೋಗದಲ್ಲಿ ನಡೆಸಿದ ವಿಚಾರ ಸಂಕಿರಣದ ಪರಿಷ್ಕೃತ ರೂಪವಾಗಿ ಈ ಕೃತಿಯನ್ನು ಪ್ರಕಟಿಸಲಾಗಿದೆ. ಮಹಿಳಾ ಅಧ್ಯಯನ ಕ್ಷೇತ್ರವು ವಿವಿಧ ಜ್ಞಾನ ಶಿಸ್ತುಗಳ ಸಂಬಂಧವನ್ನು ಹೊಂದಿರುವುದರಿಂದ ಪ್ರಸ್ತುತ ಕೃತಿಯಲ್ಲಿ ಮಹಿಳೆಯನ್ನು ಕುರಿತಂತೆ ಸ್ತ್ರೀವಾದಿ ಭಾಷಾ ಚಿಂತನೆಯು ಯಾವ ಸ್ವರೂಪದಲ್ಲಿದೆ ಎಂಬುದನ್ನು ಶೋಧಿಸುವುದಾಗಿದೆ. ಕೆ ವಿ ನಾರಾಯಣ, ಎಚ್ ಎಸ್ ರಾಘವೇಂದ್ರರಾವ್, ಲಿಂಗದೇವರು ಹಳೆಮನೆ, ಪಾಂಡುರಂಗಬಾಬು, ಪಿ ಮಹಾದೇವಯ್ಯ, ಅಶೋಕಕುಮಾರ ರಂಜೇರೆ, ಸಾಂಬಮೂರ್ತಿ, ಮಮತಾ ಜಿ ಸಾಗರ್, ಶಿವಾನಂದ ವಿರಕ್ತಮಠ ಮೊದಲಾದ ವಿದ್ವಾಂಸರ ಲೇಖನಗಳನ್ನು ಇಲ್ಲಿ ಸಂಪಾದಿಸಿಕೊಡಲಾಗಿದೆ. ಇತರ ಸಂಪಾದಕ ಸದಸ್ಯರೊಂದಿಗೆ ಸೇರಿ ಈ ಕೃತಿಯನ್ನು ಪ್ರಕಟಿಸಲಾಗಿದೆ.

**೯. ಮಹಿಳಾ ಆರ್ಥಿಕತೆ ಕನ್ನಡ ವಿವಿಹಂಪಿ ೨೦೦೬–೦೭ ಕೆಳಗಿನ ಫಲಿತ**

ಕನ್ನಡ ವಿವಿಯ ಯುಜಿಸಿ ಮಹಿಳಾ ಅಧ್ಯಯನ ಕೇಂದ್ರವು ಎಂ ಎ ಮಹಿಳಾ ಅಧ್ಯಯನ ತರಗತಿಗಳಿಗಾಗಿ ನಡೆಸಿದ ವಿಶೇಷ ಉಪನ್ಯಾಸಗಳನ್ನು ಪರಿಷ್ಕರಿಸಿ ಈ ಕೃತಿಯನ್ನು ಪ್ರಕಟಿಸಲಾಗಿದೆ. ಮಹಿಳಾ ಅಧ್ಯಯನ ಕ್ಷೇತ್ರವು ವಿವಿಧ ಜ್ಞಾನ ಶಿಸ್ತುಗಳ ಸಂಬಂಧವನ್ನು ಹೊಂದಿರುವುದರಿಂದ ಪ್ರಸ್ತುತ ಕೃತಿಯಲ್ಲಿ ಮಹಿಳೆಯನ್ನು ಕುರಿತಂತೆ ಅರ್ಥಶಾಸ್ತ್ರ ಮತ್ತು ಅಭಿವೃದ್ಧಿ ಚಿಂತನೆಯ ವಲಯವನ್ನು ಪರಿಚಯಿಸುವುದಾಗಿದೆ. ವಿಶೇಷ ಉಪನ್ಯಾಸಕರಾಗಿ ಆಗಮಿಸಿದ ವಿದ್ವಾಂಸರ ಲೇಖನಗಳನ್ನು ಇಲ್ಲಿ ಸಂಪಾದಿಸಿಕೊಡಲಾಗಿದೆ. ಇತರ ಸಂಪಾದಕ ಸದಸ್ಯರೊಂದಿಗೆ ಸೇರಿ ಈ ಕೃತಿಯನ್ನು ಪ್ರಕಟಿಸಲಾಗಿದೆ.

**೧೦. ಮಹಿಳೆ: ದುಡಿಮೆ ಮತ್ತು ಬಿಡುವು ಕನ್ನಡ ವಿವಿಹಂಪಿ ೨೦೦೬–೦೭ ಕೆಳಗಿನ ಫಲಿತ**

ಮಹಿಳಾ ಅಧ್ಯಯನ ವಿಭಾಗವು ನಡೆಸಿದ ವಿಚಾರ ಸಂಕಿರಣದ ಲೇಖನಗಳನ್ನು ಪರಿಷ್ಕರಿಸಿ ಈ ಕೃತಿಯನ್ನು ಪ್ರಕಟಿಸಲಾಗಿದೆ. ಮಹಿಳಾ ಅಧ್ಯಯನ ಕ್ಷೇತ್ರವು ವಿವಿಧ ಜ್ಞಾನ ಶಿಸ್ತುಗಳ ಸಂಬಂಧವನ್ನು ಹೊಂದಿರುವುದರಿಂದ ಪ್ರಸ್ತುತ ಕೃತಿಯಲ್ಲಿ ಮಹಿಳೆಯನ್ನು ಕುರಿತಂತೆ ಸಾಂಪ್ರದಾಯಿಕ ಅರ್ಥಶಾಸ್ತ್ರಕ್ಕಿಂತ ಭಿನ್ನವಾದ ರೀತಿಯಲ್ಲಿ ಮಹಿಳಾ ದುಡಿಮೆ ಮತ್ತು ಬಿಡುವು ಪರಿಕಲ್ಪನೆಗಳನ್ನು ಸ್ತ್ರೀವಾದಿ ಚಿಂತನೆಯ ದೃಷ್ಟಿಕೋನದಿಂದ ವಿಶ್ಲೇಷಿಸಲಾಗಿದೆ. ವಿಚಾರ ಸಂಕಿರಣದಲ್ಲಿ ಭಾಗವಹಿಸಿದ ವಿದ್ವಾಂಸರ ಲೇಖನಗಳನ್ನು ಇಲ್ಲಿ ಸಂಪಾದಿಸಿಕೊಡಲಾಗಿದೆ. ಇತರ ಸಂಪಾದಕ ಸದಸ್ಯರೊಂದಿಗೆ ಸೇರಿ ಈ ಕೃತಿಯನ್ನು ಪ್ರಕಟಿಸಲಾಗಿದೆ.

**೧೧. ಹೆಜ್ಜೆ ಗುರುತು ಪತ್ರಿಕೆ ಕನ್ನಡ ವಿವಿಹಂಪಿ ೨೦೦೫–೦೯ ಕೆಳಗಿನ ಫಲಿತ**
**(ಸಲಹಾ ಸಂಪಾದಕ/ ಸಂಪಾದಕ, ಯುಜಿಸಿ ಪ್ರಾಯೋಜಿತ ಮಹಿಳಾ ಅಧ್ಯಯನ ಕೇಂದ್ರದ ತ್ರೈಮಾಸಿಕ ಪತ್ರಿಕೆ)**

ಕನ್ನಡ ವಿಶ್ವವಿದ್ಯಾಲಯದ ಯುಜಿಸಿ ಮಹಿಳಾ ಅಧ್ಯಯನ ಕೇಂದ್ರವು ಪ್ರಕಟಿಸುತ್ತಿರುವ ಕೇಂದ್ರದ ಪರಿಚಯ ಪತ್ರಿಕೆ ಇದಾಗಿದೆ. ಮಹಿಳಾ ಅಧ್ಯಯನ ಕೇಂದ್ರವು ನಡೆಸುತ್ತಿರುವ ಕಾರ್ಯಕ್ರಮಗಳ ಪರಿಚಯ ಮತ್ತು ಈ ಕುರಿತಂತೆ ನಾಡಿನಾದ್ಯಂತ ನಡೆಯುತ್ತಿರುವ ಚಟುವಟಿಕೆಗಳ ಮಾಹಿತಿ ಹಾಗೂ ಮಹಿಳಾ ಅಧ್ಯಯನಕ್ಕೆ ಸಂಬಂಧಿಸಿದಂತೆ ನಡೆಯುವ ವಿದ್ಯಮಾನಗಳನ್ನು ಸಂಕ್ಷಿಪ್ತವಾಗಿ ವಿಮರ್ಶಿಸಿ ಇಲ್ಲಿ ಒದಗಿಸಲಾಗುತ್ತದೆ. ಈ ಚೌಕಟ್ಟಿನಲ್ಲಿ ಅನೇಕ ಸಂಚಿಕೆಗಳನ್ನು ಕೇಂದ್ರಿದಂದ ಪ್ರಕಟಿಸಲಾಗಿದ್ದು, ನಾನು ಸಂಪಾದಕನಾಗಿ ಹಾಗೂ ಸಲಹಾ ಸಂಪಾದಕನಾಗಿ ಕಾರ್ಯ್ ನಿರ್ವವಣೆ ಮಾಡಿದ್ದೇನೆ.

## ಬ. ವೈಯಕ್ತಿಕ ಯೋಜನೆಗಳು :

**೧೨. ರಾಚಪ್ಪಯ್ಯನ ಕೃತಿಗಳು (ಕೊಡೇಕಲ್ಲ ವಚನ ವಾಕ್ಯ ಸಂ–೨) –ಕನ್ನಡ ವಿವಿಹಂಪಿ, ೧೯೯೮–೯೯, ಕೆಳಗಿನ ಫಲಿತ**

ಕೊಡೇಕಲ್ಲ ಕಾಲಜ್ಞಾನ ಪರಂಪರೆಯ ಬಸವಣ್ಣನವರ ಹಿರಿಯ ಮಗನಾದ ರಾಚಪ್ಪಯ್ಯ ಮೈಸೂರು ಪ್ರದೇಶದ ಜನಪದ ಮಹಾಕಾವ್ಯದಲ್ಲಿ ಒಬ್ಬ ನಾಯಕನಾಗಿ ಪ್ರಖ್ಯಾತನಾಗಿದ್ದಾನೆ. ಕೆ.ಆರ್. ನಗರ ತಾಲೂಕಿನ ಕಪ್ಪಡಿಯಲ್ಲಿ ನೆಲೆ ನಿಂತ ಈತ ಜನಮಾನಸದಲ್ಲಿ ಮಂಟೇಸ್ವಾಮಿಯಷ್ಟೇ ಪ್ರಖ್ಯಾತನಾದ ಇನ್ನೊಬ್ಬ ಸಾಂಸ್ಕೃತಿಕ ನಾಯಕನಾಗಿದ್ದಾನೆ. ಈ ರಾಚಪ್ಪಾಜಿಯು ಕೊಡೇಕಲ್ಲಿನಲ್ಲಿದ್ದಾಗ ಬರೆದ ಕಾವ್ಯಗಳಾದ ೧.ಪ್ರಭು ಚರಿತೆ ೨.ಮಾಯಾ ಸಾಂಗತ್ಯ ೩.ಅಕ್ಕಮಹಾದೇವಿ ಸಾಂಗತ್ಯ ೪.ಸೌಂದರ ನಂಬಿಯಣ್ಣನ ಚರಿತೆ ೫.ಗಿರಿಜಾಕಲ್ಯಾಣ ೬.ಕಾಯ ಸಾಂಗತ್ಯ ೭.ಸ್ವರ್ಗಾರೋಹಣ ೮.ಪಿಟ್ಟವ್ವೆ ಸಾಂಗತ್ಯ ೯ಸಂಧಿ ವಚನ ೧೦. ಸುವ್ವಿ ವಚನ ಹಾಗೂ ೪೬ ಬಿಡಿ ಪದ್ಯಗಳನ್ನು ಒಳಗೊಂಡ ಒಟ್ಟು ೪೬೦ ಪುಟಗಳ ಸಂಪಾದನಾ ಕೃತಿಯಾಗಿ ಈ ಗ್ರಂಥವನ್ನು ಪ್ರಕಟಿಸಲಾಗಿದೆ. ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಗುರುತಿಸಬಹುದಾದ ಮಹತ್ವದ ಕವಿಯಾಗಿ ರಾಚಪ್ಪಾಜಿಯನ್ನು ಇಲ್ಲಿ ಮೊದಲಬಾರಿಗೆ ಸಮಗ್ರವಾಗಿ ಶೋಧಿಸಲಾಗಿದೆ. ಲಭ್ಯವಾದ ಆತನ ಎಲ್ಲಾ ಕೃತಿಗಳನ್ನು ಇಲ್ಲಿ ಸುಧೀರ್ಘ ಪ್ರಸ್ತಾವನೆಯೊಂದಿಗೆ ಪ್ರಕಟಿಸಲಾಗಿದೆ.

**೧೩. ವಚನ – ಸ್ವರವಚನ (ಕೊಡೇಕಲ್ಲ ವಚನ ವಾಕ್ಯ ಸಂ–೩)–ಕನ್ನಡ ವಿವಿಹಂಪಿ, ೧೯೯೯–೨೦೦೦, ಕೆಳಗಿನ ಫಲಿತ**

ಕೊಡೇಕಲ್ಲ ಕಾಲಜ್ಞಾನ ಪರಂಪರೆಯ ಸಾಹಿತ್ಯ ಸ್ವರೂಪವನ್ನು ಈಗಾಗಲೇ ಪ್ರಸಿದ್ಧರಾಗಿರುವ ಸಾಹಿತ್ಯ ಪರಂಪರೆಯ ರೂಪಗಳಾದ 'ವಚನ–ಸ್ವರವಚನ' ಎಂಬ ಹೆಸರಿನಿಂದ ಈ ಕೃತಿಯನ್ನು ಸಂಪಾದಿಸಲಾಗಿದೆ. ಕೊಡೇಕಲ್ಲ ಬಸವಣ್ಣನವರ 91 ಕಾಲಜ್ಞಾನಗಳನ್ನು

ಮತ್ತು ಮಂಟೇಸ್ವಾಮಿಯ 13 ಕಾಲಜ್ಞಾನಗಳನ್ನು ಹಾಗೂ ಇದೇ ಪರಂಪರೆಯ ನೀಲಮ್ಮ, ಗುಹೇಶ್ವರ, ಸಂಗಪ್ಪಯ್ಯ, ಈರಪ್ಪಯ್ಯರ ಕಾಲಜ್ಞಾನಗಳಲ್ಲದೆ ಈ ಪರಂಪರೆಯ ಬಿರುದಾವಳಿ,ಸೊಡ್ಡು ಹಾಡುಗಳನ್ನು ಕೂಡಾ ಈ ಕೃತಿಯಲ್ಲಿ ಸಂಪಾದಿಸಲಾಗಿದೆ. ಕೊಡೆಕಲ್ಲ ಪರಂಪರೆಯ ಲೋಕದಲ್ಲಿ ಉಳಿದಿರುವ ಅನೇಕ ಅಜ್ಞಾತ ಕವಿಗಳನ್ನು ಈ ಕೃತಿಯ ಮೂಲಕ ಪರಿಚಯಿಸಲಾಗಿದೆ.

**೧೪. ಗುರುಗುಂಡ ಬಸವನ ಕಾವ್ಯ ಕನ್ನಡ ವಿವಿಹಂಪಿ ೨೦೦೧–೦೩ ಕೆಳಗಿನ ಫಲಿತ**

ಕೊಡೇಕಲ್ಲ ಪರಂಪರೆಯ ಮುಂದುವರಿಕೆಯ ರೂಪವಾಗಿ ನಾಗಾವಿಯ ಧರ್ಮಕಲ್ಯಾಣ ಪರಂಪರೆ ಇದ್ದು ಇದನ್ನು ಈಗಾಗಲೇ ಪ್ರಕಟಪಡಿಸಲಾಗಿದೆ. ಪ್ರಸ್ತುತ ಕಾವ್ಯವು ಈ ನಾಗಾವಿ ಪರಂಪರೆಗೆ ಸಂಬಂಧಿಸಿದುದು ಆಗಿದೆ. ಧರ್ಮಕಲ್ಯಾಣದ ಸಾಂಸ್ಕೃತಿಕ ನಾಯಕನಾದ ಗುರುಗುಂಡ ಬಸವನನ್ನು ಕುರಿತು ಈ ಕಾವ್ಯದಲ್ಲಿ ವರ್ಣಿಸಲಾಗಿದೆ. ಕರ್ತೃವಿನ ಅಜ್ಞಾತದಲ್ಲಿ ಲಭ್ಯವಾಗಿರುವ "ಗುರುಗುಂಡ ಬಸವನ ಕಾವ್ಯ'ವನ್ನು ಇಲ್ಲಿ ಸಂಪಾದಿಸಿಲಾಗಿದೆ. ಪ್ರಸ್ತುತ ಹಸ್ತಪ್ರತಿಯು ವಿವಿ ಪ್ರಸಾರಾಂಗದಿಂದ ಮುದ್ರಣಕ್ಕೆ ಬಾರದ ಕಾರಣವಾಗಿ ಈ ಹಸ್ತಪ್ರತಿಯನ್ನು ಎಂ ಎಂ ಕಲಬುರ್ಗಿಯವರ ಕೋರಿಕೆಯ ಮೇರೆಗೆ ಅವರಿಗೆ ಒಪ್ಪಿಸಲಾಗಿ ಅವರು ಅದನ್ನು ಇತ್ತೀಚೆಗೆ ಪ್ರಕಟಪಡಿಸಿದ್ದಾರೆ.

**೧೫. ಹರಿಹರನ ರಗಳೆಗಳು: ಸಾಂಸ್ಕೃತಿಕ ಮುಖಾಮುಖಿ, ಕನ್ನಡ ವಿವಿಹಂಪಿ ೨೦೦೨–೦೩ ಕೆಳಗಿನ ಫಲಿತ**

ಹರಿಹರನ ರಗಳೆಗಳನ್ನು ಕುರಿತ ವಿಚಾರ ಸಂಕಿರಣದಲ್ಲಿ ಮಂಡಿಸಿದ ಸಂಪ್ರಬಂಧಗಳ ಪರಿಷ್ಕೃತ ಲೇಖನಗಳ ರೂಪವಾಗಿ ಇದನ್ನು ಪ್ರಕಟಿಸಲಾಗಿದೆ. ಸಾಹಿತ್ಯ ಅಧ್ಯಯನ ವಿಭಾಗದ ಸಾಂಸ್ಕೃತಿಕ ಮುಖಾಮುಖಿ ಯೋಜನೆಯ ಭಾಗವಾಗಿ ಇದನ್ನು ಹೊರತರಲಾಗಿದೆ. ಹರಿಹರನ ರಗಳರಗಳನ್ನು ಹೊಸ ಓದಿಗೆ ಒಳಪಡಿಸಿದ ನಾಡಿನ ಖ್ಯಾತ ವಿದ್ವಾಂಸರ ಲೇಖನಗಳನ್ನು ಸಾದರ್ಭಿಕ ಪ್ರಸ್ತಾವನೆಯೊಂದಿಗೆ ಇದನ್ನು ಪ್ರಕಟಿಸಲಾಗಿದೆ.

**೧೬.ಮಹಿಳಾ ಅಧ್ಯಯನ ಪತ್ರಿಕೆ ಸಂ–೬ ಸಂ,೧–೨ ಕನ್ನಡ ವಿವಿಹಂಪಿ ೨೦೦೬–೦೭ ಕೆಳಗಿನ ಫಲಿತ**

ಮಹಿಳಾ ಅಧ್ಯಯನ ವಿಭಾಗವು ಪ್ರಕಟಿಸುತ್ತಿರುವ ಅರ್ಧವಾರ್ಷಿಕ ಪತ್ರಿಕೆಯಾಗಿ ಇದನ್ನು ತರಲಾಗುತ್ತಿದೆ. ಈ ಸಂಪುಟವು ಮಹಿಳಾ ಅಧ್ಯಯನ ದೃಷ್ಟಿಕೋನದಿಂದ ಬರೆದ ವಿವಿಧ ವಿದ್ವಾಂಸರ ವಿವಿಧ ವಿಷಯಗಳನ್ನು ಕರಿತ ಲೇಖನಗಳಲ್ಲದೆ ಖ್ಯಾತ ಲೇಖಕಿಯಾದ ಸಾರಾ ಅಬೂಬಕ್ಕರ್ ಅವರ ಸಂದರ್ಶನವನ್ನು ಮಾಡಿ ನಿರೂಪಿಸಿದ ಸಂಪಾದಕರ ಬರಹವನ್ನೂ ಒಳಗೊಂಡಿದೆ.

**೧೭.ಕರ್ನಾಟಕದ ಅನುಭಾವಿ ಪಂಥಗಳು ಯುಜಿಸಿ/ಎಂಆರ್‌ಪಿ ೧–೭–೦೬ರಿಂದ ೩೧–೬–೦೯ ಕೆಳಗಿನ ಫಲಿತ**
**(ಕೊಡೇಕಲ್ಲ, ತಿಂಥಣಿ, ಶಿರಹಟ್ಟಿ, ಸಾವಳಗಿ ಹಾಗೂ ಅವುಗಳ ಸೂಫಿ ಸಂಬಂಧವನ್ನು ಅನುಲಕ್ಷಿಸಿ)**

ಕರ್ನಾಟಕದ ಅನುಭಾವಿ ಪಂಥಗಳು ಮೂಲತ: ಜಾನಪದ ಹಾಗೂ ಶಿಷ್ಟ ಸಂಸ್ಕೃತಿಗಳ ಸಮ್ಮಿಶ್ರಣ ಸ್ವರೂಪವಾಗಿರುತ್ತವೆ. ಕೊಡೇಕಲ್ಲ ಮತ್ತು ತಿಂಥಣಿ ಪರಂಪರೆಗಳು ಹಾಗೂ ಸಂಪೂರ್ಣ ಮೌಖಿಕ ಸ್ವರೂಪದಲ್ಲಿ ಕಾಣದೊರೆಯುವ ಶಿರಹಟ್ಟಿ ಮತ್ತು ಸಾವಳಗಿ ಪರಂಪರೆಗಳಿಗೆ ಸಂಬಂಧಿಸಿದಂತೆ ಅನೇಕ ಸ್ಥಳೀಯ ಪುರಾಣ, ಐತಿಹ್ಯಗಳು ಲಭ್ಯವಿವೆ. ಆಯಾ ಪರಂಪರೆಗಳ ಅನುಯಾಯಿ ಜನಸಮುದಾಯ ತಮ್ಮದೇ ಆದ ರೀತಿಯಲ್ಲಿ ತಮ್ಮ ತಮ್ಮ ಸಾಂಸ್ಕೃತಿಕ ನಾಯಕರ ಬಗೆಗೆ ಮೌಖಿಕ ಸಂಕಥನವನ್ನು ಇಲ್ಲೆಲ್ಲಾ ಕಟ್ಟಿದ್ದಾರೆ.

ಕೊಡೇಕಲ್ಲ, ತಿಂಥಿಣಿ, ಶಿರಹಟ್ಟಿ ಮತ್ತು ಸಾವಳಗಿ ಪಂಥಗಳಿಗೆ ಸಂಬಂಧಿಸಿದಂತೆ ಭೌಗೋಲಿಕವಾದ ವ್ಯಾಪ್ತಿಯು ಉತ್ತರ ಕರ್ನಾಟಕದ ಎಲ್ಲಾ ಕಡೆ ಹಾಗೂ ದಕ್ಷಿಣ ಕರ್ನಾಟಕದ ಮೈಸೂರು ಮತ್ತು ಚಾಮರಾಜನಗರದ ಜಿಲ್ಲಾ ವ್ಯಾಪ್ತಿಯಲ್ಲಿ ಈ ಪಂಥ ಪರಂಪರೆಗಳ ಆಚರಣಾತ್ಮಕ ಚಹರೆಗಳು ಸ್ಥಿರಗೊಂಡಿವೆ. ಈ ಸ್ಥಳಗಳಲ್ಲಿ ಆಯಾ ಸಾಂಸ್ಕೃತಿಕ ನಾಯಕರನ್ನು ಕುರಿತಂತೆ ದೇವಸ್ಥಾನಗಳಿದ್ದು, ಅಲ್ಲಿನ ಕೇಂದ್ರವನ್ನಾಧರಿಸಿ ಜಾತ್ರೆ, ಉತ್ಸವ, ಆಚರಣಾದಿಗಳನ್ನು ಸಾಮೂಹಿಕವಾಗಿ ಎಲ್ಲಾ ಜಾತಿ ಜನಗಳು ಸಾಮರಸ್ಯದಿಂದ ನಡೆಸಿಕೊಂಡು ಬರುತ್ತಾರೆ. ಇಲ್ಲಿನ ವಿಶಿಷ್ಟ ಸೂಫಿ ಸಮ್ಮಿಶ್ರಣದ ಆಚರಣೆಗಳು, ಇಂಡೊ ಸಾರ್ಸೆನಿಕ್ ಮಾದರಿಯ ದೇವಸ್ಥಾನ ಹಾಗೂ ಮಸೀದಿ ಕಟ್ಟಡಗಳು, ಮಿಶ್ರ ಚಹರೆಯ ವೇಷಭೂಷಣಗಳು, ರೂಢಿ–ರಿವಾಜುಗಳು, ಸಂಪ್ರದಾಯಗಳು ಮೊದಲಾದಗಳು ಕಳೆದ ನಾಲ್ಕು ಶತಮಾನಗಳಲ್ಲಿ ಸೃಷ್ಟಿಗೊಳ್ಳುತ್ತಾ ಬಂದಿವೆ. ಅಲ್ಲಿನ ಸಮುದಾಯಗಳ ಅಗತ್ಯಗಳನ್ನು ಈಡೇರಿಸುವ ಭಾಗವಾಗಿ ರೂಢಿಯಲ್ಲಿರುವ ದೇಶೀಯ ವೈದ್ಯ ಪದ್ಧತಿ ಹಾಗೂ ಜನರ ಮಾನಸಿಕ ಕಾಯಿಲೆಗಳನ್ನು ದೂರ ಮಾಡುವ ಮಂತ್ರ–ತಂತ್ರಗಳನ್ನು ಬಳಸುತ್ತಾ ಬರಲಾಗಿದೆ. ಈ ಎಲ್ಲ ಸಂಗತಿಗಳನ್ನು ಪ್ರಸ್ತುತ ಯುಜಿಸಿ ಪ್ರಧಾನ ಸಂಶೋಧನಾ ಯೋಜನೆಯ ಮೂಲಕ ಪ್ರಕಟಪಡಿಸಲಾಗಿದೆ.

**೧೮. ಮಹಿಳೆ ಮತ್ತು ಧರ್ಮ**

**ಕನ್ನಡ ವಿವಿಹಂಪಿ ೨೦೦೯–೧೦ ಕೆಳಗಿನ ಫಲಿತ**

ಈ ಯೋಜನೆಯನ್ನು ಮಹಿಳಾ ಅಧ್ಯಯನ ವಿಭಾಗದ 'ಪೂರಕ ಸಾಹಿತ್ಯ ನಿರ್ಮಾಣ' ಯೋಜನೆಯ ತಾತ್ವಿಕ ಆಶಯಗಳೀಗೆ ಅನಗುಣವಾಗಿ ರಚಿಸಲು ಉದ್ದೇಶಿಸಿದೆ. ಮಹಿಳಾ ಅಧ್ಯಯನ ಜ್ಞಾನಶಾಖೆಯಲ್ಲಿ ವಿವಿಧ ಧರ್ಮಗಳು ಸೃಷ್ಟಿಸಿಕೊಂಡು ಬಂದಿರುವ

ಸ್ತ್ರೀವಿರೋಧಿ ನೆಲೆಗಳನ್ನು ಶೋಧಿಸಲು ಈ ಯೋಜನೆಯನ್ನು ಕೈಗೊಳ್ಳಲಾಗಿದೆ. ಸ್ಥಾಪಿತ ಧರ್ಮಗಳಲ್ಲದೆ ಭಕ್ತಿ ಚಳುವಳಿಯಲ್ಲಿನ ಮಹಿಳೆಯರ ಸಾಧನೆಗಳನ್ನು ವಿಶ್ಲೇಷಿಸುವುದು ಇದರ ಇನ್ನೊಂದು ಆಯಾಮವಾಗಿದೆ.

**೧೯.ಮಹಿಳಾ ಅಧ್ಯಯನ ಪತ್ರಿಕೆ ಸಂ-೭ ಸಂ,೧-೨ ಕನ್ನಡ ವಿವಿಹಂಪಿ ೨೦೧೦-೧೧ ಕೆಳಗಿನ ಫಲಿತ**

ಮಹಿಳಾ ಅಧ್ಯಯನ ವಿಭಾಗವು ಪ್ರಕಟಿಸುತ್ತಿರುವ ಅರ್ಧವಾರ್ಷಿಕ ಪತ್ರಿಕೆಯಾಗಿ ಇದನ್ನು ತರಲಾಗುತ್ತಿದೆ. ಈ ಸಂಪುಟವು ಮಹಿಳಾ ಅಧ್ಯಯನ ದೃಷ್ಠಿಕೋನದಿಂದ ಬರೆದ ವಿವಿಧ ವಿದ್ವಾಂಸರ ವಿವಿಧ ವಿಷಯಗಳನ್ನು ಕರಿತ ಲೇಖನಗಳಲ್ಲದೆ ಖ್ಯಾತ ಮಹಿಳಾ ಹೋರಾಟಗಾರ್ತಿಯೂ ಲೇಖಕಿಯೂ ಆದ ರಾಜ್ಯ ಜನವಾದಿ ಮಹಿಳಾ ಸಂಘಟನೆಯ ರಾಜ್ಯಾಧ್ಯಕ್ಷೆಯಾಗಿದ್ದ ಕೆ. ನೀಲಾ ಅವರ ಸಂದರ್ಶನವನ್ನು ಮಾಡಿ ನಿರೂಪಿಸಿದ ಸಂಪಾದಕರ ಬರಹವನ್ನೂ ಒಳಗೊಂಡಿದೆ.

**೨೦.ಕನ್ನಡ ಲಿಂಗಸೂಚಕ ಪದಕೋಶ : ಸ್ತ್ರೀವಾದಿ ಅಧ್ಯಯನ, (ವಿವರಣಾತ್ಮಕ ಮಹಿಳಾ ಪದಕೋಶ) ಕರ್ನಾಟಕ ಸರ್ಕಾರದ ಶಾಸ್ತ್ರೀಯ ಭಾಷಾ ಯೋಜನೆ, ೨೦೧೦-೧೧, ಕೆಳಗಿನ ಫಲಿತ**

ಪ್ರಸ್ತುತ ಕನ್ನಡ ವಿವರಣಾತ್ಮಕ ಮಹಿಳಾ ಪದಕೋಶವೆಂಬ ಶಾಸ್ತ್ರೀಯ ಯೋಜನೆಯನ್ನು ಕನ್ನಡ ಭಾಷೆಯಲ್ಲಿ ಸೃಷ್ಟಿಯಾದ ಲಿಂಗ ಸೂಚಕದ ಪದಕೋಶವನ್ನು ಸ್ತ್ರೀವಾದಿ ದೃಷ್ಟಿಕೋನದಿಂದ ಅಧ್ಯಯನ ಮಾಡುವುದು ಆಗಿದೆ. ಈ ಲಿಂಗ ಸ್ವರೂಪವನ್ನು ಭಾಷಾಧ್ಯಯನದ ಚಿಂತನೆಗಳ ಮೂಲಕ ಭಾಷಿಕ ವ್ಯವಸ್ಥೆಯನ್ನು ಆಧರಿಸಿ ಮಾಡಿದೆ. ಈ ಭಾಷಾ ವ್ಯವಸ್ಥೆಯು ಲಿಂಗ ಅಸಮಾನತೆಯ ತತ್ವವನ್ನು ಭಾಷೆಯ ಪದಕೋಶದಲ್ಲಿ ಸಾಮಾಜಿಕರಣದ ಮೂಲಕ ಹೇಗೆ ಕಾಯ್ದುಕೊಂಡು ಬಂದಿದೆ ಎಂಬುದನ್ನು ಅನಾವರಣ ಮಾಡುವುದು ಆಗಿದೆ. ಶೀರ್ಷಿಕೆಯಲ್ಲಿ ಸ್ಪಷ್ಟಪಡಿಸಿದಂತೆ ಕನ್ನಡ ಭಾಷೆಯ ಲಿಂಗ ಸೂಚಕವಾಗಿರುವ ಪದಸಂಪತ್ತನ್ನು (ಕೋಶವನ್ನು) ಸ್ತ್ರೀವಾದಿಗಳು ವ್ಯಾಖ್ಯಾನಿಸುವ ಲಿಂಗ ಸಂಬಂಧಿ ವಿಶ್ಲೇಷಣೆಯ ಮಾದರಿಯಯಂತೆ ನಡೆಸುವುದು ಈ ಕೃತಿಯ ಸ್ವರೂಪವಾಗಿದೆ. ಭಾಷೆಯ ಮೂಲ ರೂಪಗಳಾದ ವಚನ, ನಾಮಗಳಿಂದ ಹಿಡಿದು ಸಂಬೋಧನೆಗಳು, ಗಾದೆಯ ಮಾತುಗಳವರೆಗೆ ಇದರ ವ್ಯಾಪ್ತಿ ಹಬ್ಬಿಕೊಂಡಿದೆ. ಅಷ್ಟೇ ಅಲ್ಲ ಬಿಡಿಯಾದ ಬೈಗಳಗಳವರೆಗೂ ಇಲ್ಲಿ ಅಧ್ಯಯನವನ್ನು ನಡೆಸಲಾಗಿದೆ.

**೨೧.ಮಹಿಳಾ ಅಧ್ಯಯನ ಪತ್ರಿಕೆ ಸಂ-೧೦ ಸಂ,೧-೨, ಕನ್ನಡ ವಿವಿಹಂಪಿ, ೨೦೧೧-೧೨, ಕೆಳಗಿನ ಫಲಿತ**

ಮಹಿಳಾ ಅಧ್ಯಯನ ವಿಭಾಗವು ಪ್ರಕಟಿಸುತ್ತಿರುವ ಅರ್ಧವಾರ್ಷಿಕ ಪತ್ರಿಕೆಯಾಗಿ ಇದನ್ನು ತರಲಾಗುತ್ತಿದೆ. ಈ ಸಂಪುಟವು ಮಹಿಳಾ ಅಧ್ಯಯನ ದೃಷ್ಠಿಕೋನದಿಂದ ಬರೆದ ವಿವಿಧ ವಿದ್ವಾಂಸರ ವಿವಿಧ ವಿಷಯಗಳನ್ನು ಕರಿತ ಲೇಖನಗಳಲ್ಲದೆ ಮಹಿಳಾ ಮೀಸಲಾತಿಯನ್ನು ಕುರಿತ ಪ್ರಮುಖ ಲೇಖನಗಳನ್ನೂ ಒಳಗೊಂಡಿದೆ.

**೨೨. ವೈಧವ್ಯದ ನಿರೂಪಣೆಗಳು, ಕನ್ನಡ ವಿ. ವಿ. ಹಂಪಿ ೨೦೧೩-೧೪ ಕೆಳಗಿನ ಫಲಿತ**

**೨೩. ವಚನಕಾರ್ತಿಯರು : ಸ್ತ್ರೀವಾದಿ ಅಧ್ಯಯನ, ಕನ್ನಡ ವಿವಿಹಂಪಿ ೨೦೧೪-೧೬ ಕೆಳಗಿನ ಫಲಿತ**

ಕನ್ನಡ ಸಾಹಿತ್ಯ-ಸಂಸ್ಕೃತಿಯ ಇತಿಹಾಸದಲ್ಲಿ ವಚನಕಾರರ ಕಾಲಘಟ್ಟವು ತನ್ನ ಕ್ರಾಂತಿಕಾರಕ ಗುಣದಿಂದಾಗಿ ಪ್ರಸಿದ್ಧಿ ಪಡೆದಿದೆ. ಇಲ್ಲಿ ಮುಖ್ಯ ವಚನಕಾರರಿಗಿಂತ ವಚನಕಾರ್ತಿಯರು ತೊಡಗಿಸಿಕೊಂಡ ಬಗೆ ವಿಶಿಷ್ಟವಾಗಿದೆ ಮತ್ತು ವಿನೂತನವಾಗಿದೆ. ಶಿಕ್ಷಣ, ಭಾಷಾಭಿವ್ಯಕ್ತಿ ಹಾಗೂ ಸಾರ್ವಜನಿಕ ವಲಯಗಳಲ್ಲಿ ಮಹಿಳಾ ಪ್ರವೇಶವನ್ನು ನಿಷಿದ್ಧಗೊಳಿಸಿದ ಸಂದರ್ಭದಲ್ಲಿ ಮಹಿಳೆಯರ ಈ ಅಭಿವ್ಯಕ್ತಿಗಳು ಕುತೂಹಲದಾಯಕವಾಗಿ ಕಾಣಿಸಿಕೊಳ್ಳುತ್ತವೆ. ಸ್ಥಾಪಿತ ಪರಂಪರೆಯಿಂದ ಸಿಡಿದು ಬಂಡೇಳುವ ಮಹಿಳೆಯರು ಇಂತಹ ಅಭಿವ್ಯಕ್ತಿಗಳಿಗೆ ಕಾರಣರಾಗಿದ್ದಾರೆ. ಮುಖ್ಯವಾಗಿ ಪುರುಷ ಸಂಸ್ಕೃತಿಯಿಂದ ಅಲಕ್ಷ್ಯಕ್ಕೆ, ನಿರಾಕರಣೆಗೆ ಒಳಗಾಗಿರುವ ಮಹಿಳಾ ಲೋಕ ಹೇಗೆ ಒಂದೆಡೆ ಸೇರಿ ತಮ್ಮದೇ ಅಭಿವ್ಯಕ್ತಿಗಳನ್ನು ಹೇಗೆ ಮಂಡಿಸಿದ್ದಾರೆ. ಅವರ ಅಭಿವ್ಯಕ್ತಿಯ ಅನನ್ಯತೆಯನ್ನಾಧರಿಸಿ ಒಂದು ಸಾಂಸ್ಕೃತಿಕ ಮಹಿಳಾ ಚಿಂತನೆಯನ್ನು ಮಂಡಿಸಲು ಬಯಸಿದೆ. ಇಲ್ಲಿ ಬರುವ ಮಹಿಳೆಯರು ಕೂಡ ಒಂದೇ ಜಾತಿ, ವರ್ಗಗಳಿಗೆ ಸಂಬಂಧಿಸದೆ ವಿವಿಧ ತಳ ಸಮುದಾಯಗಳ ಸಂಸ್ಕೃತಿಯ ವಾರಸುದಾರರಾಗಿ ಕೂಡ ಪ್ರವೇಶ ಪಡೆದಿರುವುದು. ಈ ಮಹಿಳೆಯರ ಧಾರ್ಮಿಕ ಪ್ರವೇಶ, ಸತಿಪತಿಗಳೊಂದಾದ ಭಕ್ತಿ, ಅದನ್ನು ಪ್ರತಿರೋಧಿಸುವ ಆಶಯಗಳು, ಮಹಿಳಾ ಅಭಿವ್ಯಕ್ತಿಗೆ ತೊಡಕಾಗಿರುವ ಸಂಗತಿಗಳು, ಶಕ್ತಿ ಪರಂಪರೆಗಳು ಹಾಗೂ ಅವುಗಳ ಪ್ರತಿನಿಧಿತ್ವ, ತಳಸಮುದಾಯಗಳ ಸಾಂಸ್ಕೃತಿಕ ಚಹರೆಗಳು, ಸಾಮಾಜಿಕವಾಗಿ ಪರಿತ್ಯಕ್ತೆಯರಾದ ವೇಶ್ಯೆಯರು ಇತ್ಯಾದಿ ಸಂಗತಿಗಳನ್ನು ಪ್ರಸ್ತುತ ಯೋಜನೆಯಲ್ಲಿ ಅಧ್ಯಯನ ಮಾಡಲಾಗುವುದು.

**೨೪. ದೇಸಿ ವೈದ್ಯಕೋಶ ಸಂಪುಟ-೫, ಮಹಿಳಾ ವಿ.ವಿ ವಿಜಯಪುರಕ್ಕೆ ಸಲ್ಲಿಕೆ, ರಾಜ್ಯಮಟ್ಟ, ೨೦೧೩**

**(ಮಹಿಳಾ ಸಾಂಸ್ಕೃತಿಕ ಕೋಶ ಮಾಲಿಕೆ) ಕರ್ನಾಟಕ ಸರ್ಕಾರದ ಶಾಸ್ತ್ರೀಯ ಭಾಷಾ ಯೋಜನೆಯ ಅಡಿಯಲ್ಲಿ**

ಮಹಿಳಾ ಸಾಂಸ್ಕೃತಿಕ ವಲಯದ ಸಂಶೋಧನೆಯು ತುಂಬಾ ವಿಸ್ತಾರವಾದ ಹರವನ್ನು ಹೊಂದಿದೆ. ಸಂಸ್ಕೃತಿ, ಕಲೆ ಸಾಹಿತ್ಯಾದಿ ಕಲಾವಲಯ, ಸಮಾಜ ವಿಜ್ಞಾನಗಳ ಎಲ್ಲ ಮಾನವ ಶಾಸ್ತ್ರಗಳು ಹಾಗು ವಿಜ್ಞಾನ ವಲಯಗಳನ್ನೂ ಸೇರಿದಂತೆ ಅದು ಎಲ್ಲಾ ಜ್ಞಾನ ವಲಯಗಳನ್ನು ಆವರಿಸಿಕೊಳ್ಳವಷ್ಟು ವಿಸ್ತಾರವಾಗಿದೆ. ಮನುಷ್ಯ ಪ್ರಪಂಚದ ಎಲ್ಲ ಜ್ಞಾನ ಶಾಖೆಗಳಲ್ಲೂ ಲಿಂಗ ತಾರತಮ್ಯದ ಸ್ವರೂಪವು ಬೆಳೆದು ನಿಂತಿದೆ. ವರ್ತಮಾನದ ಸಂದರ್ಭದಲ್ಲಂತೂ ಪರುಷ ಲೋಕದ ಸಾಂಸ್ಕೃತಿಕ ಚಹರೆಗಳೇ ಎಲ್ಲಾ ಕಡೆಯ ಥಿಯರಿ ಮತ್ತು ಆಚರಣೆಗಳಲ್ಲಿ ಕಾಣಿಸಿಕೊಳ್ಳುತ್ತಿವೆ. ಭೌತಿಕ, ಬೌದ್ಧಿಕ, ಭಾವನಾತ್ಮಕ, ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಪುರುಷಲೋಕದ ಪರವಾದ ಅಸ್ತಿತ್ವವೇ ರಾರಾಜಿಸುತ್ತಿದೆ. ವೈಜ್ಞಾನಿಕ ಜಗತ್ತೂ ಕೂಡಾ ಇದಕ್ಕೆ ಹೊರತಾಗಿಲ್ಲ. ಮಾನವ ಸಂಪನ್ಮೂಲದ ಜ್ಞಾನ ಸೃಷ್ಟಿಯಲ್ಲಿ ಮಹಿಳೆಯ

ಪಾತ್ರವೇನೂ ಇಲ್ಲವೆ? ಕೇವಲ ಪುರುಷ ಪರವಾದ ಲೋಕದೃಷ್ಟಿಕೋನವೇ ವಾಸ್ತವವೇ? ಇಂತಹ ಮೂಲಭೂತ ಪ್ರಶ್ನೆಗಳಿಗೆ ಉತ್ತರವಾಗಿ ಈ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗಿದೆ. ಮಹಿಳಾ ಸಂಕುಲವು ಜ್ಞಾನ ಪರಂಪರೆಯ ಸೃಷ್ಟಿ ಪ್ರಕ್ರಿಯೆಯಲ್ಲಿ ಒಮ್ಮೊಮ್ಮೆ ಪುರುಷನಿಗೆ ಸಮಸಮನಾಗಿ ಕೆಲವೊಮ್ಮೆ ಆತನಿಗೂ ಮಿಗಿಲಾದ ಜ್ಞಾನೋತ್ಪಾದನೆಯ ಚಟುವಟಿಕೆಗಳನ್ನು ಮಾಡಿಕೊಂಡು ಬಂದಿದೆ. ಮಾನವ ಸಂಪನ್ಮೂಲದ ಜ್ಞಾನ ಸೃಷ್ಟಿಯ ಚರಿತ್ರೆಯಲ್ಲಿ ಮಹಿಳೆಯ ಪಾತ್ರವನ್ನು ಗಮನವಿಟ್ಟು ಪರಿಶೀಲಿಸಿದರೆ ಮಾತ್ರ ಇದು ಅರಿವಿಗೆ ಬರುತ್ತದೆ. ಅಂತಹದೊಂದು ಆಶಯದ ಅನ್ವೇಷಣೆಯ ಫಲಿತವಾಗಿ ಈ ದೇಸಿವೈದ್ಯ ಶೋಧನ ಸಂಪುಟವನ್ನು ರೂಪಿಸಲಾಗಿದೆ.

**೨೫.. ಕೋಡೇಕಲ್ಲ ರಾಚಪ್ಪಯ್ಯ : ಒಂದು ಅಧ್ಯಯನ ,ಪ್ರಕಾಶನ: ಶ್ರೀ ಪ್ರಭುದೇವರ ಜನಕಲ್ಯಾಣ ಸಂಸ್ಥೆ, ಸೊಂಡೂರು, ರಾಜ್ಯಮಟ್ಟ ೨೦೧೩**

ಕೊಡೇಕಲ್ಲ ಪರಂಪರೆಯ ಶ್ರೇಷ್ಠ ಕವಿ ರಾಚಪ್ಪಯ್ಯನು ಪ್ರಸ್ತುತ ಅಧ್ಯಯನದ ಮುಖ್ಯ ಕೇಂದ್ರವಾದರೂ ಇದರ ಹರವು ವಿಶಾಲವಾಗಿ ಚಾಚಿಕೊಂಡಿದೆ. ರಾಚಪ್ಪಯ್ಯನನ್ನು ಆಧರಿಸಿದ ಅಧ್ಯಯನವು ಕೊಡೇಕಲ್ಲ ಪರಂಪರೆಯನ್ನು ಸುತ್ತುಹಾಕಿಕೊಂಡು ಹಿಂದೆ ಸರಿಯುತ್ತಾ ವಚನಕಾರರವರೆಗೆ ಹರಿದುಹೋಗಿದೆ. ಸಾಂಸ್ಕೃತಿಕ ಚರಿತ್ರೆಯನ್ನು ಕಟ್ಟಿಕೊಳ್ಳಲು ಈ ಪರಂಪರೆ ರೂಪುತಳೆದ ಕಾಲದ ಭೌತಿಕ ಪರಿಸರವನ್ನೂ, ರಾಜಕೀಯ ಪರಿಸರವನ್ನೂ, ಸಾಮಾಜಿಕ - ಆರ್ಥಿಕ ಪರಿಸರವನ್ನೂ, ಸಾಹಿತ್ಯಿಕ ಪರಿಸರವನ್ನೂ ಶೋಧಿಸಿಕೊಳ್ಳಲು ಪ್ರಯತ್ನಿಸಲಾಗಿದೆ. ಕೊಡೇಕಲ್ಲನ್ನು ಕೇಂದ್ರ ಮಾಡಿಕೊಂಡು ಕರ್ನಾಟಕ ಸಂಸ್ಕೃತಿ ಚರಿತ್ರೆಯ ಸಾಮಾಜಿಕ ಹಾಗೂ ರಾಜಕೀಯ ಸ್ವರೂಪವನ್ನು ರೇಖಿಸಿಕೊಳ್ಳಲಾಗಿದೆ. ವಚನಕಾರರು ಅಧ್ಯಯನಕ್ಕೆ ಒಳಗಾಗುತ್ತ ಬಂದಿರುವ ಮೂರು ಶತಮಾನಗಳ ಸಾಂಸ್ಕೃತಿಕವಾದ ವಚನಗಳ ಅನುಸಂಧಾನ ಪ್ರಕ್ರಿಯೆಗಳನ್ನು ವಿಶ್ಲೇಷಿಸುವುದನ್ನು ಅಧ್ಯಯನದ ಚೌಕಟ್ಟಿನಲ್ಲಿ ಒಳಗೊಳಿಸಲಾಗಿದೆ. ಸ್ಥೂಲವಾಗಿ ಹೇಳುವುದಾದರೆ ಕೊಡೇಕಲ್ಲಿನಲ್ಲಿ 'ಅಮರಕಲ್ಯಾಣ' ಪರಂಪರೆಯೊಂದನ್ನು ಹುಟ್ಟುಹಾಕುವಲ್ಲಿ ಕಾರಣಕರ್ತರಾದ ಪರಮಾನಂದ ಪ್ರಭು, ಆರೂಢ ಸಂಗಮನಾಥ, ಕೊಡೇಕಲ್ಲ ಬಸವಣ್ಣ, ನೀಲಮ್ಮ, ರಾಚಪ್ಪಯ್ಯ, ಗುಹೇಶ್ವರ, ಸಂಗಪ್ಪಯ್ಯ, ಮಂಟೇಸ್ವಾಮಿ ಮೊದಲಾದವರ ಸಾಹಿತ್ಯಕ, ಸಾಧನಾತ್ಮಕ ಹಾಗೂ ಸಾಂಸ್ಕೃತಿಕ ಕಾಣ್ಕೆಗಳನ್ನು ಸ್ಥೂಲವಾಗಿ ಸಮೀಕ್ಷಿಸಲಾಗಿದೆ. ಈ ಪರಂಪರೆಯ ಅಂತರ್ ಚೈತನ್ಯವನ್ನು ಸ್ವೀಕರಿಸಿದ ಮತ್ತು ಕೊಡೇಕಲ್ಲ ಪರಂಪರೆಯನ್ನು ವಿಸ್ತಾರಗೊಳಿಸಿದ ನೀಲಗಾರರ ಜನಪದ ಮಂಟೇಸ್ವಾಮಿ ಕಾವ್ಯ ಪರಂಪರೆಯನ್ನು ಹಾಗೂ ನಾಗಾವಿಯ ಗುರುಗುಂಡ ಬಸವ, ಸಾಲೋಟಗಿ ಶಿವಯೋಗಿಗಳ ಧರ್ಮಕಲ್ಯಾಣ ಪರಂಪರೆಗಳನ್ನು ಗಮನಿಸುವುದನ್ನು ಇಲ್ಲಿನ ಅಧ್ಯಯನದ ವ್ಯಾಪ್ತಿಯನ್ನಾಗಿ ಇಟ್ಟುಕೊಳ್ಳಲಾಗಿದೆ. ರಾಚಪ್ಪಯ್ಯನ ಸಾಹಿತ್ಯ ಕೃತಿಗಳನ್ನು ಸಾಂಸ್ಕೃತಿಕ ಮುಖಾಮುಖಿ ನೆಲೆಯಲ್ಲಿ ಮಾಡುವುದರಿಂದ ಸಾಹಿತ್ಯಕ ಅಧ್ಯಯನದ ಮಾನದಂಡಗಳನ್ನು ವಿಸ್ತರಿಸಿಕೊಳ್ಳಬಹುದಾಗಿದೆ. ಆತನ ಕೃತಿಗಳಲ್ಲಿ ಮೂಡಿ ಬಂದ ಅನ್ಯ ಪುರಾಣ, ಕಾಲಾತೀತ ನೆಲೆ, ಜಾನಪದ ಮಿಶ್ರಣ, ಸಂಗೀತ ಸಂಬಂಧ, ಸಾಹಿತ್ಯದ ಅನನ್ಯತೆ, ತಾತ್ವಿಕ ವೈಶಿಷ್ಟ್ಯ ಮೊದಲಾದ ಸಂಗತಿಗಳನ್ನು ಅಧ್ಯಯನ ಮಾಡಲಾಗಿದೆ.

**೨೬. ಕನ್ನಡ ಗ್ರಂಥ ಸಂಪಾದನೆಯ ಸಮೀಕ್ಷೆ ,ಕೇಂದ್ರೀಯ ವಿ.ವಿ.ಕಲಬುರ್ಗಿ, ರಾಜ್ಯಮಟ್ಟ , ೨೦೧೪ (ಕನ್ನಡ ಸ್ನಾತಕೋತ್ತರ ಡಿಪ್ಲೊಮೊ ಕೋರ್ಸಿಗೆ ಸಿದ್ಧಪಡಿಸಿ ಸಲ್ಲಿಸಲಾದ ಯೋಜನೆ)**

ಕನ್ನಡ ಗ್ರಂಥ ಸಂಪಾದನಾ ಶಾಸ್ತ್ರವನ್ನು ಸಮೀಕ್ಷಾತ್ಮಕವಾಗಿ ಪರಿಚಯಿಸುವುದು ಈ ಕೃತಿಯ ಉದ್ದೇಶವಾಗಿದೆ. ತಾತ್ವಿಕವಾಗಿ ಸಾಹಿತ್ಯ ಜ್ಞಾನ ಶಿಸ್ತಿನಲ್ಲಿ ವಿಮರ್ಶಾತ್ಮಕ ದೃಷ್ಟಿಕೋನವಾಗಿ ಅನ್ವಯಗೊಂಡ ಕನ್ನಡ ಗ್ರಂಥ ಸಂಪಾದನಾ ಶಾಸ್ತ್ರವು ವಸಾಹತುಶಾಹಿ ಕಾಲದ ಸಾಹಿತ್ಯ ವಿಮರ್ಶೆ, ಸಂಸ್ಕೃತಿ ಸಂಶೋಧನೆ ಹಾಗೂ ಸಾಹಿತ್ಯಾನುಸಂಧಾನಗಳ ಸ್ವರೂಪವಾಗಿ ಬೆಳೆದು ಬಂದಿದೆ. ಕವಿಗಳ ಕಾಲ, ದೇಶ, ಮತಗಳ ಚರ್ಚೆ ಹಾಗೂ ಅವರ ಸಾಹಿತ್ಯ ಕೃತಿಗಳ ಅನುಕ್ರಮಣಿಕೆಯ ಹುಡುಕಾಟದ ಚರಿತ್ರೆಯೇ ಕನ್ನಡ ಗ್ರಂಥ ಸಂಪಾದನೆಯಾಗಿದೆ. ಕನ್ನಡ ಗ್ರಂಥ ಸಂಪಾದನೆ ಎಂದರೇನು? ಇದು ಒಂದು ಶಾಸ್ತ್ರವಾಗಿ ಆರಂಭಗೊಂಡದ್ದು ಯಾವಾಗ? ಜಾಗತಿಕ ಮಟ್ಟದಲ್ಲಿ ಹಾಗೂ ಭಾರತದಲ್ಲಿ ಬೆಳೆದುಬಂದ ಇತಿಹಾಸವನ್ನು ಪರಿಚಯಿಸುವುದು. ಶಾಸ್ತ್ರದ ದೃಷ್ಟಿಯಿಂದ ಗ್ರಂಥ ಸಂಪಾದನೆಯ ತತ್ವಗಳೇನು? ಈ ತತ್ವಗಳನ್ನು ಅಳವಡಿಸಿಕೊಂಡು ಗ್ರಂಥ ಸಂಪಾದನೆಯ ಶಾಸ್ತ್ರಕಾರರು ಹುಟ್ಟು ಹಾಕಿದ ಈ ಶಾಸ್ತ್ರೀಯ ಪರಂಪರೆಯನ್ನು ಸಂಕ್ಷೇಪವಾಗಿ ಹಾಗೂ ಸಮೀಕ್ಷಾತ್ಮಕವಾಗಿ ಪುನಾರಚಿಸಿಕೊಡುವುದು. ಈ ಶಾಸ್ತ್ರ ಬೆಳೆಯುವ ಪೂರ್ವದಲ್ಲಿ ಗ್ರಂಥಗಳನ್ನು ಬರೆದಿಡಲು ಬಳಸಿಕೊಂಡ ಸಾಧನಗಳನ್ನು ಮತ್ತು ಆ ಕಾಲದ ಪರಿಕರಗಳನ್ನು ಪರಿಚಯಿಸುವುದು. ಅವುಗಳ ಸಂರಕ್ಷಣಾ ಪದ್ಧತಿಯ ವಿಧಾನಗಳನ್ನು ವಿವರಿಸುವುದು. ಕವಿಗಳಿಂದ, ಶಾಸ್ತ್ರಕಾರರಿಂದ ಹಸ್ತಪ್ರತಿಗಳನ್ನು ಬರೆಯುವ ಮತ್ತು ನಕಲುಪ್ರತಿ ಮಾಡುವ ಪರಂಪರೆ ಬೆಳೆದ ಬಗೆಯನ್ನು ಪ್ರಸ್ತಾಪಿಸುವುದು. ಲಿಪಿಕಾರರು ನಿರ್ವಹಿಸಿದ ಕಾರ್ಯಕ್ಷಮತೆ ಹಾಗೂ ಅವರ ಆದರ್ಶಗಳನ್ನು ವಿವರಿಸುವುದು ಈ ಕೃತಿಯ ಆಶಯವಾಗಿದೆ.

**೨೭. ಕೊಡೆಕಲ್ಲ ಬಸವಣ್ಣ, ರಾಚಪ್ಪಯ್ಯ ಮತ್ತಿತರರ ತತ್ವಪದ ಸಾಹಿತ್ಯ , ರಾಷ್ಟ್ರೀಯ ಸಂತ ಕವಿ ಕನಕದಾಸ ಸಂಶೋಧನಾ ಕೇಂದ್ರ, ಬೆಂಗಳೂರು–೨೦೧೭**

## ಸಂಶೋಧನಾ ಪ್ರಕಟಣೆಗಳು :

### ಪ್ರಬಂಧಗಳು/ಲೇಖನಗಳು

೧. ರಗಳೆಗಳ ಮರು ಓದಿಗೆ ಮೊದಲು–ಹರಿಹರನ ರಗಳೆಗಳ ಸಾಂಸ್ಕೃತಿಕ ಮುಖಾಮುಖಿ, ರಾಜ್ಯಮಟ್ಟ ಕನ್ನಡ ವಿ.ವಿ.ಹಂಪಿ –೨೦೦೩

೨. ಹಸ್ತಪ್ರತಿಕಾರರ ಭಾಷಿಕ ನೆಲೆ –ಹಸ್ತಪ್ರತಿ ಅಧ್ಯಯನದ ಹೊಸ ಸಾಧ್ಯತೆಗಳು, ರಾಜ್ಯಮಟ್ಟ ಕನ್ನಡ ವಿ.ವಿ.ಹಂಪಿ–೨೦೦೩

೩. ರಾಷ್ಟ್ರೀಯತೆ ಮತ್ತು ಕೋಮುವಾದ, –ತನುವು ನೇಗಿಲ ಮಾಡಿ, ಸಂ: ಮಲ್ಲಿಕಾ ಘಂಟಿ, ರಾಜ್ಯಮಟ್ಟ –ಕಾಗಿನೆಲೆ ಕನಕ ಗುರುಪೀಠ, ಸಿಂಧನೂರು –೨೦೦೪

೪. ಮಂಟೇಸ್ವಾಮಿ ಕಾವ್ಯ ಮತ್ತು ಕೊಡೇಕಲ್ಲ ಕಾಲಜ್ಞಾನಗಳ ತೌಲನಿಕ ಸಂಕಥನ,–ಬುಡಕಟ್ಟು ಅಧ್ಯಯನ ಪತ್ರಿಕೆ–೪, ಸಂ:ಹಿ.ಚಿ.ಬೋರಲಿಂಗಯ್ಯ, ಎ.ಎಸ್. ಪ್ರಭಾಕರ, ಕನ್ನಡ ವಿ.ವಿ –೨೦೦೫

೫. ಸಾಂಸ್ಕೃತಿಕ ಪರಂಪರೆ ಮತ್ತು ಸ್ಥಿತ್ಯಂತರಗಳು : ಬಳ್ಳಾರಿ ಜಿಲ್ಲೆ ಸಂ: ಕೆ ರವೀಂದ್ರನಾಥ–ರಾಜ್ಯಮಟ್ಟ, ಗುಲಬರ್ಗಾ ವಿ.ವಿ.–೨೦೦೫

೬. ಕೊಡೇಕಲ್ಲ ರಾಚಪ್ಪಯ್ಯ–ಕಲಬುರ್ಗಿ ಜಿಲ್ಲಾ ಕವಿಕಾವ್ಯ ಪರಂಪರೆ, ಸಂ:ಸ್ವಾಮಿರಾವ್ ಕುಲಕರ್ಣಿ ರಾಜ್ಯಮಟ್ಟ–ಜಿಲ್ಲಾ ಕ.ಸಾ.ಪ, ಗುಲಬರ್ಗಾ –೨೦೦೬

೭. ಮಹಿಳಾ ಶಿಕ್ಷಣ : ಚರ್ಚೆಯ ನೆಲೆಗಳು– ಮಹಿಳಾ ಅಧ್ಯಯನ ಪತ್ರಿಕೆ, ಸಂ–೬, ಸಂಚಿಕೆ೧–೨–ರಾಜ್ಯಮಟ್ಟ–ಕನ್ನಡ ವಿ.ವಿ.ಹಂಪಿ–೨೦೦೬

೮. ಕೊಡೇಕಲ್ಲ ಪರಂಪರೆಯ ಸಾಂಸ್ಕೃತಿಕ ನೆಲೆಗಳು ಬಸವ ಸಾಗರ, ಸಂ.ಈಶ್ವರಯ್ಯ ಮಠ–ರಾಜ್ಯಮಟ್ಟ–ಶರಣ ಸಾಹಿತ್ಯ ಸಮ್ಮೇಳನ ಸಂಚಿಕೆ, ಗುಲಬರ್ಗಾ–೨೦೦೬

೯. ಭಾಷೆಯಲ್ಲಿ ಹೆಣ್ಣಿನ ಪ್ರತಿನಿಧೀಕರಣ, ಹೆಣ್ಣು ಮತ್ತು ಭಾಷೆ, ಸಂ:ಎಚ್.ಎಸ್.ಶ್ರೀಮತಿ, ಶಿವಾನಂದ ವಿರಕ್ತಮಠ, ಜೆ. ಕೃಷ್ಣ ರಾಜ್ಯಮಟ್ಟ–ಯುಜಿಸಿ ಮಹಿಳಾ ಅಧ್ಯಯನ ಕೇಂದ್ರ, ಕನ್ನಡ ವಿ.ವಿ ೨೦೦೭

೧೦.ಮಹಿಳಾ ಅಧ್ಯಯನ ಮತ್ತು ಚಳುವಳಿಗಳ ಅಂತರ್ ಸಂಬಂಧ, ಮಹಿಳಾ ಅಧ್ಯಯನ ಸಂ: ಕಿಶೋರಿ ನಾಯಕ ರಾಜ್ಯಮಟ್ಟ ಯುಜಿಸಿ ಮಹಿಳಾ ಅಧ್ಯಯನ ಕೇಂದ್ರ, ಮಂಗಳೂರು ವಿ.ವಿ ೨೦೦೭

೧೧. ಕಮಲಾ ಹೆಮ್ಮಿಗೆಯವರ ಸವದತ್ತಿ ಎಲ್ಲಮ್ಮ ಹಾಗೂ ದೇವದಾಸಿ ಪದ್ಧತಿ: ಒಂದು ಸಾಂಸ್ಕೃತಿಕ ಅಧ್ಯಯನ–ಕುರಿತ ವಿಮರ್ಶೆ, "ಸಂಶೋಧನ ಮಹಾ ಪ್ರಬಂಧಗಳು" ಸಂ:ಶಾಂತಾ ಇಮ್ರಾಪೂರ ರಾಜ್ಯಮಟ್ಟ, ಕರ್ನಾಟಕ ವಿವಿ ಶಾಸ್ತ್ರೀಯ ಭಾಷಾ ಯೋಜನೆ, ಧಾರವಾಡ ೨೦೧೦

೧೨.ಸಾಹಿತ್ಯದಲ್ಲಿ ಮಹಿಳಾ ಪ್ರತಿನಿಧೀಕರಣ: ಗ್ರಹಿಕೆಯ ನೆಲೆಗಳು, ಮಹಿಳಾ ಅಧ್ಯಯನ ಪತ್ರಿಕೆ, ಸಂ–೭, ಸಂಚಿಕೆ೧–೨ ರಾಜ್ಯಮಟ್ಟ–ಕ.ವಿ.ವಿ.ಹಂಪಿ–೨೦೧೧

೧೩. ಮಹಿಳಾ ಮೀಸಲಾತಿಯ ತೊಡಕು –ಮಹಿಳಾ ಅಧ್ಯಯನ ಪತ್ರಿಕೆ, ಸಂ–೧೦, ಸಂಚಿಕೆ೧–೨–ರಾಜ್ಯಮಟ್ಟ ಕನ್ನಡ ವಿ.ವಿ.ಹಂಪಿ,–೨೦೧೨

೧೪. ದು. ಸರಸ್ವತಿಯವರ 'ಈಗೇನ ಮಾಡೀರಿ' ಎಂಬ ಆತ್ಮಕಥನದ ವಿಮರ್ಶೆ ಸಂ: ಮಲ್ಲಿಕಾ ಘಂಟಿ, "ಕಪ್ಪುಕಾಲಿನ ಗಡಗ" ರಾಜ್ಯಮಟ್ಟ –ಮುಡಬಿಯವರ ಅಭಿನಂದನ ಗ್ರಂಥ, ಬೆಂಗಳೂರು–೨೦೧೨

೧೫. ಕೊಡೇಕಲ್ಲ ಕಾಲಜ್ಞಾನ ಪರಂಪರೆಯ ಸಾಂಸ್ಕೃತಿಕ ನೆಲೆಗಳು, 'ನುಡುಗುಮ್ಮಟ' ಸಂ: ಎಂ ಎಸ್ ಮದಬಾವಿ ಮತ್ತು ಇತರರು, "ಅಖಿಲ ಭಾರತ ಸಾಹಿತ್ಯ ಸಮ್ಮೇಳನ ಸ್ಮರಣ ಸಂಪುಟ" ಬಿಜಾಪುರ, –೨೦೧೩

೧೬. ಗುರುಸ್ವಾಮಿ ಕಲಕೇರಿಯವರ 'ನುಡಿಲಿಂಗದಾರತಿಯ ಶೋಧನ ಸಂಗ್ರಹ' ಕೃತಿ ವಿಮರ್ಶೆ, ಸಂ. ಡಾ. ಎಂ ಎಂ ಪಡಶೆಟ್ಟಿ ರಾಜ್ಯಮಟ್ಟ, ನೆಲೆ ಪ್ರಕಾಶನ ಸಿಂದಗಿ–೨೦೧೪

೧೭. 'ಎಚ್.ತಿಪ್ಪೇರುದ್ರಸ್ವಾಮಿಯವರ ಕದಳಿ ಕರ್ಪುರ' ಕೃತಿ ವಿಮರ್ಶೆ, ತಿಪ್ಪೇರುದ್ರಸ್ವಾಮಿಯವರ ಅಭಿನಂದನ ಗ್ರಂಥ, ರಾಜ್ಯಮಟ್ಟ, ಮೈಸೂರು–೨೦೧೪

## ೨. ಪುಸ್ತಕಗಳು (ವಿಶ್ವವಿದ್ಯಾಲಯದಿಂದ ಪ್ರಕಟವಾದ ಕೃತಿಗಳು)

೧. ಕರ್ನಾಟಕ ಕನ್ನಡಿ - ಇತರ ಲೇಖಕರೊಡನೆ –ಪ್ರಸಾರಾಂಗ ಕ.ವಿ.ವಿ –ರಾಜ್ಯಮಟ್ಟ– ೧೯೯೯

೨. ರಾಚಪ್ಪಯ್ಯನ ಕೃತಿಗಳು – (ಸಂ) –ಪ್ರಸಾರಾಂಗ ಕ.ವಿ.ವಿ–ರಾಜ್ಯಮಟ್ಟ –೧೯೯೯

೩. ವಚನ – ಸ್ವರವಚನ – (ಸಂ) –ಪ್ರಸಾರಾಂಗ ಕ.ವಿ.ವಿ–ರಾಜ್ಯಮಟ್ಟ–೨೦೦೦

೪. ಜೀವ ಜಗತ್ತು ವಿಶ್ವಕೋಶ – (ಸಹ ಸಂಪಾದಕ) – ಪ್ರಸಾರಾಂಗ ಕ.ವಿ.ವಿ–ರಾಜ್ಯಮಟ್ಟ – ೨೦೦೩

೫. ಹರಿಹರನ ಕೃತಿಗಳು : ಸಾಂಸ್ಕೃತಿಕ ಮುಖಾಮುಖಿ (ಸಂ)–ಪ್ರಸಾರಾಂಗ ಕ.ವಿ.ವಿ–ರಾಜ್ಯಮಟ್ಟ – ೨೦೦೩

೬. ರಿಂದ ೨೦. ಕನ್ನಡ ಅಧ್ಯಯನ ಪತ್ರಿಕೆ (ಸ. ಸಂ)–ಪ್ರಸಾರಾಂಗ ಕ.ವಿ.ವಿ –ರಾಜ್ಯಮಟ್ಟ–೧೯೯೯ ರಿಂದ ೨೦೦೩ ವರೆಗೆ ಒಟ್ಟು ಹದಿನಾಲ್ಕು (೧೪) ಪತ್ರಿಕೆಗಳನ್ನು ನಾಲ್ಕು ವರ್ಷಗಳ ಅವಧಿಯಲ್ಲಿ ಪ್ರಕಟವಾಗಿವೆ

೭. ಮಹಿಳಾ ಅಧ್ಯಯನ ಪತ್ರಿಕ್ರೆ, ಸಂಪುಟ–೬, ಸಂಚಿಕೆ ೧–೨, ಪ್ರಸಾರಾಂಗ ಕ.ವಿ.ವಿ –ರಾಜ್ಯಮಟ್ಟ– ೨೦೦೬

೮. ಹೆಣ್ಣು ಮತ್ತು ಭಾಷೆ, (ಸಂ– ಇತರರೊಡನೆ) ಮಹಿಳಾ ಅಧ್ಯಯನ ಕೇಂದ್ರ, ಕನ್ನಡ ವಿ.ವಿ. –೨೦೦೭

೯. ಮಹಿಳೆ, ದುಡಿಮೆ ಮತ್ತು ಬಿಡುವು, (ಸಂ– ಇತರರೊಡನೆ)ಮಹಿಳಾ ಅ. ಕೇಂದ್ರ, ಕನ್ನಡವಿ.ವಿ.–೨೦೦೭

೧೦. ಮಹಿಳಾ ಆರ್ಥಿಕತೆ, (ಸಂ– ಇತರರೊಡನೆ)–ಯುಜಿಸಿ ಮಹಿಳಾ ಅಧ್ಯಯನ ಕೇಂದ್ರ ಕನ್ನಡ ವಿ.ವಿ.–೨೦೦೭

೧೧. ಮಹಿಳೆ ಮತ್ತು ಧರ್ಮ –ಪ್ರಸಾರಾಂಗ, ಕ. ವಿ. ವಿ–ರಾಜ್ಯಮಟ್ಟ –೨೦೧೦

೧೨. ಮಹಿಳಾ ಅಧ್ಯಯನ ಪತ್ರಿಕ್ರೆ, ಸಂಪುಟ–೭, ಸಂಚಿಕೆ ೧–೨ ಪ್ರಸಾರಾಂಗ ಕ.ವಿ.ವಿ–೨೦೧೧

೧೩. ಮಹಿಳಾ ಅಧ್ಯಯನ ಪತ್ರಿಕ್ರೆ, ಸಂಪುಟ–೧೦, ಸಂಚಿಕೆ ೧–೨ ಪ್ರಸಾರಾಂಗ ಕ.ವಿ.ವಿ–೨೦೧೨

## ಶೈಕ್ಷಣಿಕ ಉದ್ದೇಶಕ್ಕಾಗಿ ಹೊರಗಿನ ಸಂಸ್ಥೆಗಳಿಂದ ಪ್ರಕಟವಾದ ಕೃತಿಗಳು :

**೨೮. ಕೊಡೇಕಲ್ಲ ವಚನವಾಕ್ಯ ಸಂಗ್ರಹ (ಸಂ–ಇತರರೊಡನೆ) :ಕೊ.ಬ.ಅ.ಸಂಸ್ಥೆ, ಕೊಡೇಕಲ್ಲ –ರಾಜ್ಯಮಟ್ಟ –೨೦೦೪**

ಕನ್ನಡ ವಿಶ್ವವಿದ್ಯಾಲಯದಿಂದ ಪ್ರಕಟಿಸಲಾದ ಮೂರು ಸಂಪುಟಗಳಿಂದ ಆಯ್ದು ಸಂಗ್ರಹವಾಗಿ ಇದನ್ನು ಪ್ರಕಟಿಸಲಾಗಿದೆ. ಜನಸಾಮನ್ಯರನ್ನು ಲಕ್ಷ್ಯದಲ್ಲಿರಿಸಿಕೊಂಡು ಪ್ರಕಟಿಸಿದ ಜನಪ್ರಿಯ ಆವೃತ್ತಿ ಇದಾಗಿದೆ. ಕೊಡೇಕಲ್ಲ ಬಸವಣ್ಣ, ರಾಚಪ್ಪಯ್ಯ, ಮಂಟೇಸ್ವಾಮಿ, ಗುಹೇಶ್ವರ, ಸಂಗಪ್ಪಯ್ಯ, ಈರಪ್ಪಯ್ಯ, ವೀರಸಂಗಪ್ಪಯ್ಯ ಮೊದಲಾದವರ ಕಾಲಜ್ಞಾನಗಳಲ್ಲದೆ ಈ ಪರಂಪರೆಯ ಭಿನ್ನವತ್ತಳೆ ಹಾಗೂ ಬಿರುದಾವಳಿಗಳನ್ನು ಇಲ್ಲಿ ಪ್ರಕಟಿಸಲಾಗಿದೆ.

**೨೯. ಅಮರಕಲ್ಯಾಣ ನುಡಿ ಪ್ರಕಾಶನ, ಎಂ.ಪಿ.ಪಿ ನಗರ, ಹೊಸಪೇಟೆ –ರಾಜ್ಯಮಟ್ಟ –೨೦೦೫**

ಕೊಡೇಕಲ್ಲ ಕಾಲಜ್ಞಾನ ಪರಂಪರೆಯನ್ನು ಕುರಿತ ಸಂಶೋಧನಾತ್ಮಕ ಅಧ್ಯಯನವಾಗಿ ಅಮರಕಲ್ಯಾಣ ಕೃತಿಯನ್ನು ಪ್ರಕಟಿಸಲಾಗಿದೆ. ಅಮರಕಲ್ಯಾಣ ಪರಿಕಲ್ಪನೆಯ ನಿರ್ವಚನವನ್ನು ಮಾಡಿ, ಈ ಕಾಲಜ್ಞಾನಗಳು ಹೇಗೆ ಜನಸಮುದಾಯಗಳ ಆಶೋತ್ತರಗಳನ್ನು ಸಾಂಸ್ಕೃತಿಕವಾಗಿ ಮಂಡಿಸುತ್ತವೆ ಎಮಬುದನ್ನು ಉಲ್ಲೇಕಗಳೊಂದಿಗೆ ಇಲ್ಲಿ ಚರ್ಚಿಸಲಾಗಿದೆ. ಹನ್ನೆರಡನೆಯ ಶತಮಾನದ ಬಸವಣ್ಣ ಅಲ್ಲಮರ ಚಿಂತನೆಗಳನ್ನು ಕೊಡೇಕಲ್ಲ ಬಸವಣ್ಣ ತನ್ನ ಕಾಲಕ್ಕೆ ಹೇಗೆ ಸ್ವೀಕರಿಸುತ್ತಾನೆಂಬ ಬಗೆಯನ್ನು ಸಾಂಸ್ಕೃತಿಕವಾಗಿ ವಿಮರ್ಶಿಸಲಾಗಿದೆ. ಇಡೀ ಕೊಡೇಕಲ್ಲ ಪರಂಪರೆಯು ತನ್ನ ತಾತ್ವಿಕ ಅಮರಕಲ್ಯಾಣ ಚೌಕಟ್ಟಿನಲ್ಲಿ ಸೂತ್ರೀಕರಣಗೊಂಡಿದೆ ಎಂಬುದನ್ನು ವಿವರವಾಗಿ ಮತ್ತು ಮಂಟೇಸ್ವಾಮಿ ಜನಪದ ಮಹಕಾವ್ಯ ಹಾಗೂ ಅನೇಕ ಪುರಾಣಗಳ ತೌಲನಿಕ ಅಧ್ಯಯನದೊಂದಿಗೆ ಇಲ್ಲಿನ ಚರ್ಚೆಯನ್ನು ನಡೆಸಲಾಗಿದೆ. ಕೊಡೇಕಲ್ಲಿನ ಈ ಪರಂಪರೆಯ ಸಮಗ್ರ ಚಿತ್ರಣವನ್ನು ಪ್ರಸ್ತುತ ಅಮರಕಲ್ಯಾಣ ಕೃತಿ ಒದಗಿಸುತ್ತದೆ.

**೩೦. ದೇಸಿ ವೈದ್ಯಕೋಶ ಸಂಪುಟ–೫ –ಮಹಿಳಾ ವಿ.ವಿ ವಿಜಯಪುರಕ್ಕೆ ಸಲ್ಲಿಕೆ–ರಾಜ್ಯಮಟ್ಟ –೨೦೧೧**

**(ಮಹಿಳಾ ಸಾಂಸ್ಕೃತಿಕ ಕೋಶ ಮಾಲಿಕೆ) ಕರ್ನಾಟಕ ಸರ್ಕಾರದ ಶಾಸ್ತ್ರೀಯ ಭಾಷಾ ಯೋಜನೆಯ ಅಡಿಯಲ್ಲಿ ಸಿದ್ಧಪಡಿಸಿ ಸಲ್ಲಿಸಲಾಗಿದೆ**

ಮಹಿಳಾ ಸಾಂಸ್ಕೃತಿಕ ವಲಯದ ಸಂಶೋಧನೆಯು ತುಂಬಾ ವಿಸ್ತಾರವಾದ ಹರವನ್ನು ಹೊಂದಿದೆ. ಸಂಸ್ಕೃತಿ, ಕಲೆ ಸಾಹಿತ್ಯಾದಿ ಕಲಾವಲಯ, ಸಮಾಜ ವಿಜ್ಞಾನಗಳ ಎಲ್ಲ ಮಾನವ ಶಾಸ್ತ್ರಗಳು ಹಾಗು ವಿಜ್ಞಾನ ವಲಯಗಳನ್ನೂ ಸೇರಿದಂತೆ ಅದು ಎಲ್ಲಾ ಜ್ಞಾನ ವಲಯಗಳನ್ನು ಆವರಿಸಿಕೊಳ್ಳವಷ್ಟು ವಿಸ್ತಾರವಾಗಿದೆ. ಮನುಷ್ಯ ಪ್ರಪಂಚದ ಎಲ್ಲ ಜ್ಞಾನ ಶಾಖೆಗಳಲ್ಲೂ ಲಿಂಗ ತಾರತಮ್ಯದ ಸ್ವರೂಪವು ಬೆಳೆದು ನಿಂತಿದೆ. ವರ್ತಮಾನದ ಸಂದರ್ಭದಲ್ಲಂತೂ ಪುರುಷ ಲೋಕದ ಸಾಂಸ್ಕೃತಿಕ ಚಹರೆಗಳೇ ಎಲ್ಲಾ ಕಡೆಯ ಥಿಯರಿ ಮತ್ತು ಆಚರಣೆಗಳಲ್ಲಿ ಕಾಣಿಸಿಕೊಳ್ಳುತ್ತಿವೆ. ಭೌತಿಕ, ಬೌದ್ಧಿಕ, ಭಾವನಾತ್ಮಕ, ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಪುರುಷಲೋಕದ ಪರವಾದ ಅಸ್ತಿತ್ವವೇ ರಾರಾಜಿಸುತ್ತಿದೆ. ವೈಜ್ಞಾನಿಕ ಜಗತ್ತೂ ಕೂಡಾ ಇದಕ್ಕೆ ಹೊರತಾಗಿಲ್ಲ. ಮಾನವ ಸಂಪನ್ಮೂಲದ ಜ್ಞಾನ ಸೃಷ್ಟಿಯಲ್ಲಿ ಮಹಿಳೆಯ ಪಾತ್ರವೇನೂ ಇಲ್ಲವೆ? ಕೇವಲ ಪುರುಷ ಪರವಾದ ಲೋಕದೃಷ್ಟಿಕೋನವೇ ವಾಸ್ತವವೇ? ಇಂತಹ ಮೂಲಭೂತ ಪ್ರಶ್ನೆಗಳಿಗೆ ಉತ್ತರವಾಗಿ ಈ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗಿದೆ. ಮಹಿಳಾ ಸಂಕುಲವು ಜ್ಞಾನ ಪರಂಪರೆಯ ಸೃಷ್ಟಿ ಪ್ರಕ್ರಿಯೆಯಲ್ಲಿ ಒಮ್ಮೊಮ್ಮೆ ಪುರುಷನಿಗೆ ಸಮಸಮನಾಗಿ ಕೆಲವೊಮ್ಮೆ ಆತನಿಗೂ ಮಿಗಿಲಾದ

ಜ್ಞಾನೋತ್ಪಾದನೆಯ ಚಟುವಟಿಕೆಗಳನ್ನು ಮಾಡಿಕೊಂಡು ಬಂದಿದೆ. ಮಾನವ ಸಂಪನ್ಮೂಲದ ಜ್ಞಾನ ಸೃಷ್ಟಿಯ ಚರಿತ್ರೆಯಲ್ಲಿ ಮಹಿಳೆಯ ಪಾತ್ರವನ್ನು ಗಮನವಿಟ್ಟು ಪರಿಶೀಲಿಸಿದರೆ ಮಾತ್ರ ಇದು ಅರಿವಿಗೆ ಬರುತ್ತದೆ. ಅಂತಹದೊಂದು ಆಶಯದ ಅನ್ವೇಷಣೆಯ ಫಲಿತವಾಗಿ ಈ ದೇಸಿವೈದ್ಯ ಶೋಧನ ಸಂಪುಟವನ್ನು ರೂಪಿಸಲಾಗಿದೆ.

### ೩೧. ಕೋಡೇಕಲ್ಲ ರಾಚಪ್ಪಯ್ಯ : ಒಂದು ಅಧ್ಯಯನ –ಪ್ರಕಾಶನ: ಶ್ರೀ ಪ್ರಭುದೇವರ ಜನಕಲ್ಯಾಣ ಸಂಸ್ಥೆ, ಸೊಂಡೂರು–ಮೊದಲ ಮುದ್ರಣ–೨೦೧೩, ಎರಡನೆಯ ಮುದ್ರಣ–೨೦೧೫

ಕೊಡೇಕಲ್ಲ ಪರಂಪರೆಯ ಶ್ರೇಷ್ಠ ಕವಿ ರಾಚಪ್ಪಯ್ಯನು ಪ್ರಸ್ತುತ ಅಧ್ಯಯನದ ಮುಖ್ಯ ಕೇಂದ್ರವಾದರೂ ಇದರ ಹರವು ವಿಶಾಲವಾಗಿ ಚಾಚಿಕೊಂಡಿದೆ. ರಾಚಪ್ಪಯ್ಯನನ್ನು ಆಧರಿಸಿದ ಅಧ್ಯಯನವು ಕೊಡೇಕಲ್ಲ ಪರಂಪರೆಯನ್ನು ಸುತ್ತುಹಾಕಿಕೊಂಡು ಹಿಂದೆ ಸರಿಯುತ್ತಾ ವಚನಕಾರರವರೆಗೆ ಹರಿದುಹೋಗಿದೆ. ಸಾಂಸ್ಕೃತಿಕ ಚರಿತ್ರೆಯನ್ನು ಕಟ್ಟಿಕೊಳ್ಳಲು ಈ ಪರಂಪರೆ ರೂಪುತಳೆದ ಕಾಲದ ಭೌತಿಕ ಪರಿಸರವನ್ನೂ, ರಾಜಕೀಯ ಪರಿಸರವನ್ನೂ, ಸಾಮಾಜಿಕ - ಆರ್ಥಿಕ ಪರಿಸರವನ್ನೂ, ಸಾಹಿತ್ಯಿಕ ಪರಿಸರವನ್ನೂ ಶೋಧಿಸಿಕೊಳ್ಳಲು ಪ್ರಯತ್ನಿಸಲಾಗಿದೆ. ಕೊಡೇಕಲ್ಲನ್ನು ಕೇಂದ್ರ ಮಾಡಿಕೊಂಡು ಕರ್ನಾಟಕ ಸಂಸ್ಕೃತಿ ಚರಿತ್ರೆಯ ಸಾಮಾಜಿಕ ಹಾಗೂ ರಾಜಕೀಯ ಸ್ವರೂಪವನ್ನು ರೇಖಿಸಿಕೊಳ್ಳಲಾಗಿದೆ. ವಚನಕಾರರು ಅಧ್ಯಯನಕ್ಕೆ ಒಳಗಾಗುತ್ತ ಬಂದಿರುವ ಮೂರು ಶತಮಾನಗಳ ಸಾಂಸ್ಕೃತಿಕವಾದ ವಚನಗಳ ಅನುಸಂಧಾನ ಪ್ರಕ್ರಿಯೆಗಳನ್ನು ವಿಶ್ಲೇಷಿಸುವುದನ್ನು ಅಧ್ಯಯನದ ಚೌಕಟ್ಟಿನಲ್ಲಿ ಒಳಗೊಳಿಸಲಾಗಿದೆ. ವಚನಕಾರರಿಂದ ವಿಜಯನಗರದವರೆಗಿನ ವಚನಾನುಸಂಧಾನವು ಒಂದು ತುದಿಯಾದರೆ, ಕೊಡೇಕಲ್ಲಿನ ಒಟ್ಟು ಪರಂಪರೆಯು ಪ್ರಭಾವದಿಂದ ಬೆಳೆದ ನಾಗಾವಿಯ ಧರ್ಮಕಲ್ಯಾಣ ಪರಂಪರೆ ಹಾಗೂ ಮೈಸೂರಿನ ಮಂಟೇಸ್ವಾಮಿ ಕಾವ್ಯದ ಪರಂಪರೆಯನ್ನು ಅಧ್ಯಯನ ಮಾಡುವುದು ಇನ್ನೊಂದು ತುದಿಯಾಗಿದೆ. ಸ್ಥೂಲವಾಗಿ ಹೇಳುವುದಾದರೆ ಕೊಡೇಕಲ್ಲಿನಲ್ಲಿ 'ಅಮರಕಲ್ಯಾಣ' ಪರಂಪರೆಯೊಂದನ್ನು ಹುಟ್ಟುಹಾಕುವಲ್ಲಿ ಕಾರಣಕರ್ತರಾದ ಪರಮಾನಂದ ಪ್ರಭು, ಆರೂಢ ಸಂಗಮನಾಥ, ಕೊಡೇಕಲ್ಲ ಬಸವಣ್ಣ, ನೀಲಮ್ಮ, ರಾಚಪ್ಪಯ್ಯ, ಗುಹೇಶ್ವರ, ಸಂಗಪ್ಪಯ್ಯ, ಮಂಟೇಸ್ವಾಮಿ ಮೊದಲಾದವರ ಸಾಹಿತ್ಯಕ, ಸಾಧನಾತ್ಮಕ ಹಾಗೂ ಸಾಂಸ್ಕೃತಿಕ ಕಾಣ್ಕೆಗಳನ್ನು ಸ್ಥೂಲವಾಗಿ ಸಮೀಕ್ಷಿಸಲಾಗಿದೆ. ಈ ಪರಂಪರೆಯ ಅಂತರ್ ಚೈತನ್ಯವನ್ನು ಸ್ವೀಕರಿಸಿದ ಮತ್ತು ಕೊಡೇಕಲ್ಲ ಪರಂಪರೆಯನ್ನು ವಿಸ್ತಾರಗೊಳಿಸಿದ ನೀಲಗಾರರ ಜನಪದ ಮಂಟೇಸ್ವಾಮಿ ಕಾವ್ಯ ಪರಂಪರೆಯನ್ನು ಹಾಗೂ ನಾಗಾವಿಯ ಗುರುಗುಂಡ ಬಸವ, ಸಾಲೋಟಗಿ ಶಿವಯೋಗಿಗಳ ಧರ್ಮಕಲ್ಯಾಣ ಪರಂಪರೆಗಳನ್ನು ಗಮನಿಸುವುದನ್ನು ಇಲ್ಲಿನ ಅಧ್ಯಯನದ ವ್ಯಾಪ್ತಿಯನ್ನಾಗಿ ಇಟ್ಟುಕೊಳ್ಳಲಾಗಿದೆ.

ರಾಚಪ್ಪಯ್ಯನ ಸಾಹಿತ್ಯ ಕೃತಿಗಳನ್ನು ಸಾಂಸ್ಕೃತಿಕ ಮುಖಾಮುಖಿ ನೆಲೆಯಲ್ಲಿ ಮಾಡುವುದರಿಂದ ಸಾಹಿತ್ಯಕ ಅಧ್ಯಯನದ ಮಾನದಂಡಗಳನ್ನು ವಿಸ್ತರಿಸಿಕೊಳ್ಳಬಹುದಾಗಿದೆ. ಆತನ ಕೃತಿಗಳಲ್ಲಿ ಮೂಡಿ ಬಂದ ಅನ್ಯ ಪುರಾಣ, ಕಾಲಾತೀತ ನೆಲೆ, ಜಾನಪದ ಮಿಶ್ರಣ, ಸಂಗೀತ ಸಂಬಂಧ, ಸಾಹಿತ್ಯದ ಅನನ್ಯತೆ, ತಾತ್ವಿಕ ವೈಶಿಷ್ಟ್ಯ ಮೊದಲಾದ ಸಂಗತಿಗಳನ್ನು ವಚನ ಸಂಸ್ಕೃತಿಯ ಚಲನಶೀಲ ಪ್ರಕ್ರಿಯೆಗಳ ಪರಂಪರೆಯ ಸಂಬಂಧದಿಂದ ಅಧ್ಯಯನ ಮಾಡಬಹುದಾಗಿದೆ. ಚಾರಿತ್ರಿಕವಾಗಿ ಸಂಸ್ಕೃತಿಯ ವಿಕಾಸವನ್ನೂ ಗುರುತಿಸುತ್ತಾ ಸಂಸ್ಕೃತಿಯ ಪ್ರಕ್ರಿಯಾತ್ಮಕ ಸಂಬಂಧವನ್ನು ಜೋಡಿಸಿಕೊಳ್ಳಲು ಉಪಯುಕ್ತವಾದ ಸಂಸ್ಕೃತಿ ಅಧ್ಯಯನ ವಿಧಾನವನ್ನು ಇಲ್ಲಿ ಅನುಸರಿಸಲಾಗಿದೆ. ಹೀಗಾಗಿ ಹರಿಹರ - ಚಾಮರಸರ ಸಂಬಂಧದಷ್ಟೇ ಮುಖ್ಯವಾದ ಸಂಬಂಧವಾಗಿ ನೀಲಗಾರರ ಮಂಟೇಸ್ವಾಮಿ ಕಾವ್ಯದ ನೆಲೆಯನ್ನೂ, ಗರತಿ ಹಾಡು ಹಾಗೂ ಸಾರುವಯ್ಯಗಳ ಸಾರುವ ನೆಲೆಯನ್ನೂ ಗ್ರಹಿಸಲು ಸಾಧ್ಯವಾಗಿದೆ. ಅಷ್ಟೇ ಅಲ್ಲದೆ ಇಪ್ಪತ್ತೊಂದನೆಯ ಶತಮಾನದಲ್ಲಿನ ಕೊಡೇಕಲ್ಲ ಪರಂಪರೆಯ ಜಾತ್ರೆ - ಉತ್ಸವಗಳನ್ನು ಹಾಗೂ ಅಲ್ಲಿ ನಡೆಯುವ ಆಚರಣೆಗಳನ್ನು ಸಂಸ್ಕೃತಿಯ ಪ್ರಕ್ರಿಯಾತ್ಮಕ ಸಂಬಂಧವಾಗಿ ನೋಡುವುದು ಇಲ್ಲಿನ ಅಧ್ಯಯನ ಕ್ರಮವಾಗಿದೆ.

### ೩೨. ಕನ್ನಡ ಗ್ರಂಥ ಸಂಪಾದನೆಯ ಸಮೀಕ್ಷೆ –ಕೇಂದ್ರೀಯ ವಿ.ವಿ.ಕಲಬುರ್ಗಿ –ರಾಜ್ಯಮಟ್ಟ –೨೦೧೪ (ಕನ್ನಡ ಸ್ನಾತಕೋತ್ತರ ಡಿಪ್ಲೊಮೊ ಕೋರ್ಸಿಗೆ ಸಿದ್ಧಪಡಿಸಿ ಸಲ್ಲಿಸಲಾದ ಯೋಜನೆ)

ಕನ್ನಡ ಗ್ರಂಥ ಸಂಪಾದನಾ ಶಾಸ್ತ್ರವನ್ನು ಸಮೀಕ್ಷಾತ್ಮಕವಾಗಿ ಪರಿಚಯಿಸುವುದು ಈ ಕೃತಿಯ ಉದ್ದೇಶವಾಗಿದೆ. ತಾತ್ವಿಕವಾಗಿ ಸಾಹಿತ್ಯ ಜ್ಞಾನ ಶಿಸ್ತಿನಲ್ಲಿ ವಿಮರ್ಶಾತ್ಮಕ ದೃಷ್ಟಿಕೋನವಾಗಿ ಅನ್ವಯಗೊಂಡ ಕನ್ನಡ ಗ್ರಂಥ ಸಂಪಾದನಾ ಶಾಸ್ತ್ರವು ವಸಾಹತುಶಾಹಿ ಕಾಲದ ಸಾಹಿತ್ಯ ವಿಮರ್ಶೆ, ಸಂಸ್ಕೃತಿ ಸಂಶೋಧನೆ ಹಾಗೂ ಸಾಹಿತ್ಯಾನುಸಂಧಾನಗಳ ಸ್ವರೂಪವಾಗಿ ಬೆಳೆದು ಬಂದಿದೆ. ಕವಿಗಳ ಕಾಲ, ದೇಶ, ಮತಗಳ ಚರ್ಚೆ ಹಾಗೂ ಅವರ ಸಾಹಿತ್ಯ ಕೃತಿಗಳ ಅನುಕ್ರಮಣಿಕೆಯ ಹುಡುಕಾಟದ ಚರಿತ್ರೆಯೇ ಕನ್ನಡ ಗ್ರಂಥ ಸಂಪಾದನೆಯಾಗಿದೆ. ಕನ್ನಡ ಗ್ರಂಥ ಸಂಪಾದನೆ ಎಂದರೇನು? ಇದು ಒಂದು ಶಾಸ್ತ್ರವಾಗಿ ಆರಂಭಗೊಂಡದ್ದು ಯಾವಾಗ? ಜಾಗತಿಕ ಮಟ್ಟದಲ್ಲಿ ಹಾಗೂ ಭಾರತದಲ್ಲಿ ಬೆಳೆದುಬಂದ ಇತಿಹಾಸವನ್ನು ಪರಿಚಯಿಸುವುದು. ಶಾಸ್ತ್ರದ ದೃಷ್ಟಿಯಿಂದ ಗ್ರಂಥ ಸಂಪಾದನೆಯ ತತ್ವಗಳೇನು? ಈ ತತ್ವಗಳನ್ನು ಅಳವಡಿಸಿಕೊಂಡು ಗ್ರಂಥ ಸಂಪಾದನೆಯ ಶಾಸ್ತ್ರಕಾರರು ಹುಟ್ಟು ಹಾಕಿದ ಈ ಶಾಸ್ತ್ರೀಯ ಪರಂಪರೆಯನ್ನು ಸಂಕ್ಷೇಪವಾಗಿ ಹಾಗೂ ಸಮೀಕ್ಷಾತ್ಮಕವಾಗಿ ಪುನಾರಚಿಸಿಕೊಡುವುದು. ಈ ಶಾಸ್ತ್ರ ಬೆಳೆಯುವ ಪೂರ್ವದಲ್ಲಿ ಗ್ರಂಥಗಳನ್ನು ಬರೆದಿಡಲು ಬಳಸಿಕೊಂಡ ಸಾಧನಗಳನ್ನು ಮತ್ತು ಆ ಕಾಲದ ಪರಿಕರಗಳನ್ನು ಪರಿಚಯಿಸುವುದು. ಅವುಗಳ ಸಂರಕ್ಷಣಾ ಪದ್ಧತಿಯ ವಿಧಾನಗಳನ್ನು ವಿವರಿಸುವುದು. ಕವಿಗಳಿಂದ, ಶಾಸ್ತ್ರಕಾರರಿಂದ ಹಸ್ತಪ್ರತಿಗಳನ್ನು ಬರೆಯುವ ಮತ್ತು ನಕಲುಪ್ರತಿ ಮಾಡುವ ಪರಂಪರೆ ಬೆಳೆದ ಬಗೆಯನ್ನು ಪ್ರಸ್ತಾಪಿಸುವುದು. ಲಿಪಿಕಾರರು ನಿರ್ವಹಿಸಿದ ಕಾರ್ಯಕ್ಷಮತೆ ಹಾಗೂ ಅವರ ಆದರ್ಶಗಳನ್ನು ವಿವರಿಸುವುದು ಈ ಕೃತಿಯ ಆಶಯವಾಗಿದೆ.

## ಶೈಕ್ಷಣಿಕ ಸಮಾರಂಭಗಳಲ್ಲಿ ಭಾಗವಹಿಸಿದ ಅನುಭವ

**ರಾಷ್ಟ್ರೀಯ/ರಾಜ್ಯ ಮಟ್ಟದ ವಿಚಾರ ಸಂಕಿರಣ/ಕಮ್ಮಟಗಳಲ್ಲಿ ಭಾಗವಹಿಸುವಿಕೆಯ ವಿವರ :**

೧. ಕನ್ನಡಿಗರಿಗೆ ಬೇಕು ಕನ್ನಡದ್ದೇ ವ್ಯಾಕರಣ –ರಾಜ್ಯಮಟ್ಟದ ಕಮ್ಮಟ, –ಭಾಷಾಭಿವೃದ್ಧಿ ವಿಭಾಗ, ಕನ್ನಡ ವಿ.ವಿ.ಹಂಪಿ–೨೦೦೦

೨. ಕನ್ನಡ ವ್ಯಾಕರಣ– ರಾಜ್ಯಮಟ್ಟದ ಕಮ್ಮಟ –ಸಿಐಐಎಲ್ ಮೈಸೂರು ಮತ್ತು ಭಾಷಾಭಿವೃದ್ಧಿ ವಿಭಾಗ, ಕವಿ.ವಿ. ಹಂಪಿ–೨೦೦೧

೩. ಹಸ್ತಪ್ರತಿ ಅಧ್ಯಯನದ ಹೊಸ ಸಾಧ್ಯತೆಗಳು– ರಾಷ್ಟ್ರೀಯ ವಿಚಾರ ಸಂಕಿರಣ, ಕೇಂದ್ರ –ಸಾಹಿತ್ಯ ಅಕಾಡೆಮಿ ಮತ್ತು ಹಸ್ತಪ್ರತಿಶಾಸ್ತ್ರ ವಿಭಾಗ ಕವಿಹಂ–೩೦ & ೩೧–೧೨– ೨೦೦೨

೪. ರಗಳೆಗಳ ಮರು ಓದಿಗೆ ಮೊದಲು– ಪ್ರಸ್ತಾವನೆ ಹರಿಹರನ ರಗಳೆಗಳು: ಸಾಂಸ್ಕೃತಿಕ ಮುಖಾಮುಖಿ, ಎಲ್ ಬಿ ಪ್ರತಿಷ್ಠಾನ ಕೋಲಾರ ಮತ್ತು ಸಾಹಿತ್ಯ ಅಧ್ಯಯನ ವಿಭಾಗ, ಕವಿಹಂ ೨೦೦೩

೫. ಕನಕದಾಸರ ಕೀರ್ತನೆಗಳ ಅನನ್ಯತೆ– ಕನಕದಾಸರ ಸಾಹಿತ್ಯ– ಕಾಗಿನೆಲೆ ಮಹಾ ಸಂಸ್ಥಾನ ಕನಕ ಗುರುಪೀಠ, ಸಿಂಧನೂರು–೨೦೦೪

೬.ಪ್ರಾದೇಶಿಕ ಸಂಸ್ಕೃತಿ ಮತ್ತು ಮಹಿಳೆ–ಮೂರನೆಯ ಜಗತ್ತಿನ ಮಹಿಳೆ– ಗೋದುತಾಯಿ ಕಾಲೇಜು, ಗುಲಬರ್ಗಾ–೧೦–೧೦–೨೦೦೪, ಯುಜಿಸಿ ಪ್ರಾಯೋಜಿತ ರಾಷ್ಟ್ರೀಯ ವಿಚಾರ ಸಂಕಿರಣ

೭.ಮಹಿಳಾ ಸಬಲೀಕರಣ–ರಾಜ್ಯಮಟ್ಟದ ಮಹಿಳಾ ಜಾಗೃತಿ ಮೇಳ ಅಂತಾರಾಷ್ಟ್ರೀಯ ಮಾನವ ಹಕ್ಕುಗಳ ಸಂಘ(ರಿ) ಶಹಪೂರ–೩೦–೧೧–೨೦೦೪.

೮.ಆಶಯ ನಯಡಿ–ಮಹಿಳಾ ಅಧ್ಯಯನ ಮತ್ತು ಅನ್ಯ ಜ್ಞಾನ ಶಿಸ್ತುಗಳು– ಮಹಿಳಾ ಅಧ್ಯಯನ ವಿಭಾಗ ಕವಿಹಂ–೧೭–೦೨–೨೦೦೫ ರಿಂದ ೧೯–೦೨–೨೦೦೫

೯. ಕರ್ನಾಟಕದಲ್ಲಿ ಸ್ವಸಹಾಯ ಗುಂಪುಗಳು, 'ಮಹಿಳಾ ವಿಷಯಗಳು'– ಯುಜಿಸಿ, ಮಹಿಳಾ ಅಧ್ಯಯನ ಕೇಂದ್ರ, ರಾಷ್ಟ್ರೀಯ ವಿಚಾರ ಸಂಕಿರಣ ಸಿ.ಎಚ್.ಎಂ ಕಾಲೇಜ್,ಉಲ್ಲಾಸನಗರ, ಠಾಣೆ ಜಿಲ್ಲೆ, ಮಹಾರಾಷ್ಟ್ರ ೮–೦೩–೦೫ ರಿಂದ ೧೦–೦೩–೦೫

೧೦. ಮಹಿಳಾ ಅಧ್ಯಯನ ಮತ್ತು ಚಳುವಳಿಗಳ ಸಾಹಚರ್ಯದ ಸ್ವರೂಪ,– ಚಳುವಳಿಗಳ ಅಂತರ್ ಸಂಬಂಧ– ಸಂವಾದ ಮಹಿಳಾ ಅಧ್ಯಯನ ಕೇಂದ್ರ ಮತ್ತು ಮಹಿಳಾ ಅ. ವಿಭಾಗ,ಕವಿಹಂ–೨೪–೩–೦,೫

೧೧.ಮಹಿಳಾ ಅಧ್ಯಯನ & ಚಳುವಳಿಗಳ ಅಂತರಸಂಬಂಧ 'ಮಹಿಳಾ ಅಧ್ಯಯನ ಸಾಧ್ಯತೆಗಳು', ಯುಜಿಸಿ ಮಹಿಳಾ ಅಧ್ಯಯನ ಕೇಂದ್ರ ಮಂಗಳೂರು ವಿವಿ ಕೊಣಾಜೆ–೩೦–೩–೦೫

೧೨. ಸ್ತ್ರೀವಾದಿ ವೈಧಾನಿಕತೆ–ಸ್ತ್ರೀವಾದಿ ಸಂಶೋಧನಾ ವಿಧಿವಿಧಾನಗಳು –ಮಹಿಳಾ ಅಧ್ಯಯನ ವಿಭಾಗ, ಕ.ವಿಹಂ–೨೦೦೬

೧೩.ಗುಂಪು ಚರ್ಚೆ ಮತ್ತು ಸಂವಾದ –ಜಂಡರ್ ಮತ್ತು ಸಮುದಾಯ ಕುರಿತ ರಾಷ್ಟ್ರೀಯ ವಿಚಾರ ಸಂಕಿರಣ, ಮಹಿಳಾ ಅಧ್ಯಯನ ವಿಭಾಗ ಕವಿಹಂ, ೧೫=೦೩–೦೭ ರಿಂದ ೧೭–೦೩–೦೭

೧೪. ಸ್ತ್ರೀವಾದಿ ಸಂಶೋಧನಾ ವೈಧಾನಿಕತೆ, –ಸಂಶೋಧನಾ ಕಮ್ಮಟ–ಕವಿಹಂ ಮಾನ್ಯತಾ ಸಂಸ್ಥೆ, ಹಾರೂಗೇರಿ–೨–೮–೦೮

೧೫. ಸ್ತ್ರೀ ಸಂಕುಲ ಮತ್ತು ಪಾರಂಪರಿಕ ನಂಬಿಕೆಗಳು, "ಹೆಣ್ಣು ಭ್ರೂಣಹತ್ಯೆ ವಿರೋಧಿ ಪ್ರಚಾರಾಂದೋನ" ಮಹಿಳಾ ಅಧ್ಯಯನ ಕೇಂದ್ರ ಕವಿಹಂ, ಜನವಾದಿ ಸಂಘಟನೆ, ಗುಲಬರ್ಗಾ, ೭–೯–೦೮

೧೬. ಕೈಫಿಯತ್ತುಗಳಲ್ಲಿ ವೀರಶೈವ–ವೀರಶೈವ ಆಕರಗಳು, –ಕೆ ಆರ್ ಐ, ಕರ್ನಾಟಕ ವಿವಿ ಧಾರವಾಡ–೨೫–೯–೦೮

೧೭. ಹೆಣ್ಣು ಭ್ರೂಣಹತ್ಯೆ : ಸಾಹಿತ್ಯಕ ಆಯಾಮಗಳು, "ಹೆಣ್ಣು ಭ್ರೂಣಹತ್ಯೆ ವಿರೋಧಿ ಪ್ರಚಾರಾಂದೋನ" ಯುಜಿಸಿ, ಮಹಿಳಾ ಅಧ್ಯಯನ ಕೇಂದ್ರ ಕವಿಹಂ ೧೩–೧೦–೦೮, ರಾಷ್ಟ್ರೀಯ ವಿಚಾರ ಸಂಕಿರಣ –ಮತ್ತು ರಾಜ್ಯ ಜನವಾದಿ ಮಹಿಳಾ ಸಂಘಟನೆ, ಬೆಂಗಳೂರು,

೧೮. ಲಿಂಗ ಸಂವೇದನೆಯ ಸಾಮಾಜಿಕ ಆಯಾಮಗಳು, :ಲಿಂಗ ಸಂವೇದನೆ ಜಾಗೃತಿ ಶಿಬಿರ" ಯುಜಿಸಿ, ಮಹಿಳಾ ಅಧ್ಯಯನ ಕೇಂದ್ರ ಕವಿಹಂ, ಮತ್ತು ಬಿಎಲ್ ಡಿ ಇ ಸಂಸ್ಥೆ, ತಿಕೋಟ, ೧೩–೧೧–೦೮

೧೯. ಹೆಣ್ಣು ಭ್ರೂಣಹತ್ಯೆ: ಸಾಮಾಜಿಕ ಆಯಾಮಗಳು, :ಲಿಂಗ ಸಂವೇದನೆ ಜಾಗೃತಿ ಶಿಬಿರ" ಯುಜಿಸಿ, ಮಹಿಳಾ ಅಧ್ಯಯನ ಕೇಂದ್ರ ಕವಿಹಂ, ಮತ್ತು ಬಿಎಲ್ ಡಿ ಇ ಸಂಸ್ಥೆ, ಜಮಖಂಡಿ, ೧೪–೧೧–೦೮

೨೦. ಅಂಬಿಗರ ಚೌಡಯ್ಯನ ವಚನಗಳಲ್ಲಿ ಲಿಂಗ ಸಂವೇದನೆ, 'ಅಂಬಿಗರ ಚೌಡಯ್ಯ : ಮುಖಾಮುಖಿ', ಅಂಬಿಗರ ಚೌಡಯ್ಯನ ಪೀಠ, ಗಲಬರ್ಗಾ ವಿವಿ ಗುಲಬರ್ಗಾ ೨೨–೧೧–೦೮

೨೧. ಹೆಣ್ಣು ಪಿಂಡಗೂಸು ಹತ್ಯೆ: ಸಾಮಾಜಿಕ ಆಯಾಮಗಳು, ಯುಜಿಸಿ, ಮಹಿಳಾ ಅಧ್ಯಯನ ಕೇಂದ್ರ ಕವಿಹಂ, ಮತ್ತು ಭೀಮಪ್ಪ ಗೋನಾಳ ಟ್ರಸ್ಟ, ದೇವರ ಗೋನಾಲ, ೧೨–೧೨–೦೮

೨೨. ಲಿಂಗ ತಾರತಮ್ಯದ ಸ್ವರೂಪ: ಸಾಹಿತ್ಯಕ ಆಯಾಮಗಳು, "ಹೆಣ್ಣು ಭ್ರೂಣಹತ್ಯೆ ವಿರೋಧಿ ಪ್ರಚಾರಾಂದೋನ" ಯುಜಿಸಿ, ಮಹಿಳಾ ಅಧ್ಯಯನ ಕೇಂದ್ರ ಕವಿಹಂ, ಮತ್ತು ರಾಜ್ಯ ಜನವಾದಿ ಮಹಿಳಾ ಸಂಘಟನೆ, ಬಳ್ಳಾರಿ, ೧೭–೧೨–೦೮

೨೩. ಮಹಿಳಾ ಸ್ವಸಹಾಯ ಗುಂಪುಗಳು ಮತ್ತು ಸ್ವ ಉದ್ಯೋಗ, "ಸ್ವಸಹಾಯ ಗುಂಪುಗಳಿಗೆ ತರಬೇತಿ" ಯುಜಿಸಿ, ಮಹಿಳಾ ಅಧ್ಯಯನ ಕೇಂದ್ರ ಕವಿಹಂ, ವಿದ್ಯಾರಣ್ಯ ಕ್ಯಾಂಪಸ್, ೩೦–೩–೦೯

೨೪. ಮಹಿಳಾ ಚಿಂತನೆಯ ಪ್ರಸ್ತುತತೆ,(ಆಶಯ ನುಡಿ), ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ, ೩೧–೩–೨೦೦೯

೨೫. ಸಾಮಾಜಿಕ, ಆರ್ಥಿಕ, ರಾಜಕೀಯ ಸಮಾನತೆಗಾಗಿರಾಜ್ಯಮಟ್ಟದ ಅಧ್ಯಯನ ಶಿಬಿರ, ಆಶಯ ನುಡಿ, ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ, ಬಿಜಾಪುರ,೨೮–೮–೨೦೦೯

೨೬. ಮಾನವ ಹಕ್ಕುಗಳು ಮತ್ತು ಲಿಂಗ ಸಮಾನತೆ, ಮಹಿಳೆ ಮತ್ತು ಹಿಂಸೆ : ಪ್ರತಿಬಂಧಕ ಸಾಧ್ಯತೆಗಳು, ಮಹಿಳಾ ವಿಶ್ವವಿದ್ಯಾಲಯ, ಬಿಜಾಪುರ, ೨೮,೨೯ ಅಗಷ್ಟ ೨೦೦೯, ಯುಜಿಸಿ ಪ್ರಾಯೋಜಿತ ರಾಷ್ಟ್ರೀಯ ವಿಚಾರ ಸಂಕಿರಣ

೨೭. ಮಹಿಳಾ ಮೀಸಲಾತಿ ಮಂಡನೆ : ತೊಡಕುಗಳು, "ಮಹಿಳಾ ಮೀಸಲಾತಿ : ಒಂದು ಅವಲೋಕನ" ಮಹಿಳಾ ಅಧ್ಯಯನ ವಿಭಾಗ, ಕವಿಹಂ & ಎಂಎಸ್ಐಕಾಲೇಜು, ಗುಲಬರ್ಗಾ,೫, ೬–೧೦–೨೦೦೯

೨೮. ಜಾನಪದ ಸಾಹಿತ್ಯದಲ್ಲಿ ಮಹಿಳಾ ಪ್ರತಿನಿಧೀಕರಣ, ಬೀದರ ಜಿಲ್ಲಾ ಸಾಹಿತ್ಯ ಸಮ್ಮೇಳನ, ಬೀದರ, ೯–೧೧–೨೦೦೯

೨೯. ಕನ್ನಡ ಸಾಹಿತ್ಯದಲ್ಲಿ ಮಹಿಳಾ ಪ್ರತಿನಿಧೀಕರಣ, ಅಭಿವೃದ್ಧಿ ಪ್ರಾಧಿಕಾರ ಬೆಂಗಳೂರು, ಗಂಗಾವತಿ, ೪–೩–೨೦೧೦

೩೦. ಸೃಜನಶೀಲ ಸಾಹಿತ್ಯ : ಲಿಂಗ ಸಂಬಂಧಿ ಆಯಾಮಗಳು, 'ಕನ್ನಡ ಭಾಷೆಯ ಲಿಂಗ ಸಂಬಂಧಿ ಆಯಾಮಗಳು' ಭಾಷಾಧ್ಯಯನ ವಿಭಾಗ, ಕವಿಹಂ– ಬೆಂಗಳೂರು, ೧೯–೩–೨೦೧೦

೩೧. ಮಹಿಳಾ ಕಾನೂನುಗಳ ಅಳವಡಿಕೆಯ ಪ್ರಸ್ತುತತೆ,(ಆಶಯ ನುಡಿ),ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ,೨೮–೩–೨೦೧೦

೩೨. ದೇವದಾಸಿಯರ ಆರ್ಥಿಕ ದುಸ್ಥಿತಿ ಹಾಗೂ ಸರ್ಕಾರದ ನೀತಿ ನಿರೂಪಣೆಗಳು, "ದೇವದಾಸಿ ಪದ್ಧತಿಯ ನಿರ್ಮೂಲನ: ಸವಾಲು–ಸಾಧ್ಯತೆಗಳು" ಮಹಿಳಾ ಅಧ್ಯಯನ ವಿಭಾಗ, ಕವಿಹಂ, ವಿದ್ಯಾರಣ್ಯ ಕ್ಯಾಂಪಸ್, ೨೮, ೨೯ ಮಾರ್ಚ್, ೨೦೧೦

೩೩. ಕನ್ನಡ ಭಾಷೆ &ಸಾಹಿತ್ಯ ಸಂಶೋಧನೆಯಲ್ಲಿ ಹೊಸ ಸವಾಲುಗಳು, "ಶಾಸ್ತ್ರೀಯ ಭಾಷಾ ಸಂಶೋಧನೆ–ಮಂದಿನ ಹೆಜ್ಜೆಗಳು", ಕನ್ನಡ ಅಭಿವೃದ್ಧಿ ಪ್ರಾಧಿಕಾರ ಬೆಂಗಳೂರು, ಸೇಡಂ, ೧೫–೪–೨೦೧೦

೩೪. ಮಹಿಳಾ ಸಾಂಸ್ಕೃತಿಕ ಕೋಶದ ಎರಡು ದಿನಗಳ ಕಾರ್ಯಾಗಾರ, ಸಂಪನ್ಮೂಲ ವ್ಯಕ್ತಿ, ಕರ್ನಾಟಕ ರಾಜ್ಯ ಮಹಿಳಾವಿಶ್ವವಿದ್ಯಾಲಯ, ಬಿಜಾಪುರ, ೧೫ ಮತ್ತು ೧೬–೭–೨೦೧೦

೩೫. ಹೆಣ್ಣು ಮತ್ತು ಭಾಷೆ, ರಾಜ್ಯ ಮಟ್ಟದ ಎರಡು ದಿನಗಳ ವಿಚಾರ ಸಂಕಿರಣ, ಬೆಂಗಳೂರು ವಿವಿ ಮಹಿಳಾ ಅಧ್ಯಯನ ಕೇಂದ್ರ, ಬೆಂಗಳೂರು, ೧೬-೧೨-೨೦೧೨

೩೬. ಹೆಣ್ಣುಮಕ್ಕಳ ಅನೈತಿಕ ಸಾಗಾಣಿಕೆ : ಸಾಮಾಜಿಕ ಆಯಾಮಗಳು, "ಹೆಣ್ಣುಮಕ್ಕಳ ಸಾಗಾಣಿಕೆ ನಿಷೇಧ: ಸಾಂಸ್ಕೃತಿಕ ಸವಾಲುಗಳು" ಮಹಿಳಾ ಅಧ್ಯಯನ ಕೇಂದ್ರ, ಕವಿಹಂ, ಬಿಎಲ್ ಡಿ ಇ ಸಂಸ್ಥೆ, ಬಿಜಾಪುರ, ೧೬ ಮತ್ತು ೧೭ ಜನವರಿ ೨೦೧೩

೩೭. ದಾಸ ಸಾಹಿತ್ಯದ ಅನನ್ಯತೆ, ಪುರಂದರ ದಾಸ ಅಧ್ಯಯನ ಪೀಠ, ವಿಶೇಷ ಉಪನ್ಯಾಸಗಳು ಸೇಡಂ, ೪-೨-೨೦೧೩

೩೮. ಮಹಿಳಾ ಕಾನೂನುಗಳ ಅನುಷ್ಠಾನದಲ್ಲಿ ಹೊಣೆಗಾರಿಕೆಯ ಪ್ರಶ್ನೆ, "ಮಹಿಳಾ ಕಾನೂನು ಅರಿವು ಕಾರ್ಯಾಗಾರ", ಮಹಿಳಾ ಅಧ್ಯಯನ ಕೇಂದ್ರ ಕವಿಹಂ &ಕಾನೂನು ಪ್ರಾಧಿಕಾರ, ಹೊಸಪೇಟೆ, ಥಿಯೋಸಾಫಿಕಲ್ ಕಾಲೇಜು, ಹೊಸಪೇಟೆ, ೧೫-೩-೨೦೧೩

೩೯. ಆಶಯ ಮತ್ತು ಗೋಷ್ಠಿಯ ಅಧ್ಯಕ್ಷತೆಮಹಿಳೆ ಮತ್ತು ಆಧುನಿಕ ಸವಾಲುಗಳು, ವಿಚಾರ ಸಂಕಿರಣ, ಥಿಯೋಸಾಫಿಕಲ್ ಕಾಲೇಜು, ಹೊಸಪೇಟೆ, ೧೯-೩-೧೩

೪೦. ಮಹಿಳಾ ಆರೋಗ್ಯದ ಮಹತ್ವ, "ಮಹಿಳೆಯರಿಗಾಗಿ ಉಚಿತ ತಪಾಸಣೆ ಮತ್ತು ಔಷಧಿ ವಿತರಣಾ ಶಿಬಿರ" ಯುಜಿಸಿ ಮಹಿಳಾ ಅಧ್ಯಯನ ಕೇಂದ್ರ ಮತ್ತು ತಾಲೂಕು ಆರೋಗ್ಯ ಇಲಾಖೆ, ಹೊಸಪೇಟೆ, ಸೀತಾರಾಮ ತಾಂಡಾ ೨೩-೩-೨೦೧೩

೪೧. ಸ್ತ್ರೀವಾದಿ ವೈಧಾನಿಕತೆಯ ಸ್ವರೂಪ, ಕಾರ್ಯಾಗಾರದ ಸಂಪನ್ಮೂಲ ವ್ಯಕ್ತಿ "ಸ್ತ್ರೀವಾದ ಮತ್ತು ಕನ್ನಡ ಸಾಹಿತ್ಯ-ಕಾರ್ಯಾಗಾರ", ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯ, ಗಲಬರ್ಗಾ೧೨ ಮತ್ತು ೧೩, ಏಪ್ರಿಲ್ ೨೦೧೩

೪೨. ದಾಸ ಸಾಹಿತ್ಯದಲ್ಲಿ ಮಹಿಳಾ ಅಭಿವ್ಯಕ್ತಿ, "ದಾಸ ಸಾಹಿತ್ಯ : ಸಮಕಾಲೀನ ಚಿಂತನೆ" ಪುರಂದರ ದಾಸ ಅಧ್ಯಯನ ಪೀಠ ಕವಿಹಂ ಮತ್ತು ಜಿಲ್ಲಾ ಕಸಾಪ ಗಲಬರ್ಗಾ, ೧೫-೧೬/ ಏಪ್ರಿಲ್ ೧೦೧೩

೪೩. ಅಂಗವಿಕಲ ಮಹಿಳೆಯರ ಸಮಸ್ಯೆಗಳು, "ಜಿಲ್ಲಾ ಮಟ್ಟದ ಅಂಗವಿಕಲ ಮಹಿಳೆಯರ ಸಮಾವೇಶ" ಮಹಿಳಾ ಅಧ್ಯಯನ ಕೇಂದ್ರ ಕವಿಹಂ ಮತ್ತು ವಾತ್ಸಲ್ಯ ಟ್ರಸ್ಟ್ ಹೊಸಪೇಟೆ, ರೋಟರಿ ಕ್ಲಬ್ ಹೊಸಪೇಟೆ, ೨೪-೮-೨೦೧೩

೪೪. ಲಿಂಗೀಯ ಅಧ್ಯಯನಗಳ ವೈಧಾನಿಕತೆಗಳು, ಮಹಿಳಾ ಅಧ್ಯಯನ ವಿಭಾಗ, ವಿದ್ಯಾರಣ್ಯ ಕ್ಯಾಂಪಸ್೭-೨-೧೪

೪೫. ಕನ್ನಡ-ಉದ್ಯೋಗಾವಕಾಶಗಳು, ಕನ್ನಡ ಭಾಷೆ : ಸವಾಲು-ಸಾಧ್ಯತೆಗಳು, ಗುಲಬರ್ಗಾ ಜಿಲ್ಲಾ ಸಾಹಿತ್ಯ ಸಮ್ಮೇಳನ ಯಾದಗಿರಿ, ಜನವರಿ ೨೪ ಮತ್ತು ೨೫, ೨೦೧೫
೪೬. ಕನ್ನಡ-ಕನ್ನಡಿಗ-ಕರ್ನಾಟಕ :ಪರಿಕಲ್ಪನೆಗಳ ಮರು ಚಿಂತನೆ , ಪ್ರಾಸ್ತಾವಿಕ ನುಡಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧-೧೧-೨೦೧೬, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೪೭. ದೇವರಾಜ ಅರಸು ಚಿಂತನೆ : ಸಮಕಾಲೀನ ಸಂದರ್ಭ –ಎರಡು ದಿನಗಳ ರಾಜ್ಯಮಟ್ಟದ ವಿಚಾರ ಸಂಕಿರಣ, ಪ್ರಾಸ್ತಾವಿಕ ನುಡಿ & ಸೆಮಿನಾರ್ ಸಂಚಾಲಕ, ಎನ್ ಎಸ್ ಎಸ್ ಘಟಕ ಕನ್ನಡ ವಿಶ್ವವಿದ್ಯಾಲಯ, ಹಂಪಿ ಮತ್ತು ಎನ್ ಎಸ್ ಎಸ್ ಕೋಶ ಬೇಂಗಳೂರು, ೯ ಮತ್ತು ೧೦ ನವೆಂಬರ್, ೨೦೧೬,
೪೮. ಚಿಂತನ –ಮಂಥನ ಕಾರ್ಯಕ್ರಮ-೧, ನಿರ್ವಹಣಾ ಸಮಿತಿ ಸದಸ್ಯ, ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೯ ಮತ್ತು ೩೦ ನವೆಂಬರ್, ೨೦೧೬ ಕನ್ನಡ ವಿವಿ ಹಂಪಿ

೪೯. ಅಂಬೇಡ್ಕರ್ ಪರಿ ನಿರ್ವಾಣ ದಿನ , ಕಾರ್ಯಕ್ರಮದ ಪ್ರಾಸ್ತಾವಿಕ ನುಡಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೬-೧೨-೨೦೧೬, ಕನ್ನಡ ವಿವಿ ಹಂಪಿ.

೫೦. ಪ್ರಾಕೃತ ಮತ್ತು ಕನ್ನಡ ಪರಂಪರೆ ಮತ್ತು ಪ್ರಭಾವ- ಅಂತಾರಾಷ್ಟ್ರೀಯ ವಿಚಾರ ಸಂಕಿರಣ, ನಿರ್ವಹಣಾ ಸಮಿತಿ ಸದಸ್ಯ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೮ ಮತ್ತು ೯, ಡಿಸೆಂಬರ್ ೨೦೧೬

೫೧. ಕನ್ನಡ ವಿ.ವಿ ಹಂಪಿ, ಚಿಂತನ –ಮಂಥನ ಕಾರ್ಯಕ್ರಮ–೨, ನಿರ್ವಹಣಾ ಸಮಿತಿ ಸದಸ್ಯ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೬ ಮತ್ತು ೧೭ ಡಿಸೆಂಬರ್, ೨೦೧೬, ಕನ್ನಡ ವಿ.ವಿ ಹಂಪಿ.

೫೨. ಅಂತಾರಾಷ್ಟ್ರೀಐ ಮಹಿಳಾ ದಿಚರಣೆ ಮತ್ತು ವಿಶೇಷ ಉಪನ್ಯಾಸ, ಲಿಂಗ ಪೂರ್ವಾಗ್ರಹಗಳನ್ನು ಮೀರುವ ಅಗತ್ಯತೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೮ಮಾರ್ಚ, ೨೦೧೭, ಕನ್ನಡ ವಿ.ವಿ ಹಂಪಿ

೫೩. ದಿನಮಾತು ಪ್ರಯುಕ್ತ, ಕೊಡೇಕಲ್ಲ ಅಮರಕಲ್ಯಾಣ ಪರಂಪರೆ, ವಿದ್ಯಾರಣ್ಯ, ೧೪–೩–೨೦೧೭, ಕನ್ನಡ ವಿ.ವಿ ಹಂಪಿ

೫೪. ದಿನಮಾತು ಪ್ರಯುಕ್ತ, ದಿನಮಾತಿನ ಚರ್ಚೆ, ಸಂವಾದಗಳ ಅಧ್ಯಕ್ಷೀಯ ನುಡಿ, ವಿದ್ಯಾರಣ್ಯ,೧೪–೩, ೨೦೧೭ ಕನ್ನಡ ವಿ.ವಿ ಹಂಪಿ

೫೫. ಅಂಬೇಡ್ಕರ್ ದೃಷ್ಟಿಯಲ್ಲಿ ಲಿಂಗ ಮತ್ತು ಸಾಮಾಜಿಕ ನ್ಯಾಯ– ರಾಷ್ಟ್ರೀಯ ವಿಚಾರ ಸಂಕಿರಣ , ಆಶಯ ನುಡಿ, ಕನ್ನಡ ವಿ ವಿ ಕ್ಯಾಂಪಸ್ ವಿದ್ಯಾರಣ್ಯ ೧೪–೪– ೨೦೧೭, ಎನ್ ಎಸ್ ಎಸ್ ಘಟಕ, ಕನ್ನಡ ವಿವಿ ಹಂಪಿ

೫೬. ವಿದ್ಯಾರ್ಥಿ ಕ್ಷೇಮಪಾಲನ ಘಟಕ, ಕನ್ನಡ ವಿವಿ ಹಂಪಿ, ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಪ್ರಯುಕ್ತ ಯೋಗದ ಮಹತ್ವ ಕುರಿತ ವಿಶೇ಼ ಉಪನ್ಯಾಸ ಪತಂಜಲಿ ಯೋಗ ಸಮಿತಿ, ಹೊಸಪೇಟೆ೨೧–೦೬–೧೬ ವಿದ್ಯಾರಣ್ಯ ಕ್ಯಾಂಪಸ್

೫೭. ವಿದ್ಯಾರ್ಥಿ ಕ್ಷೇಮಪಾಲನ ಘಟಕ, ಕನ್ನಡ ವಿವಿ ಹಂಪಿ, ಸ್ವಾಮಿ ವಿವೇಕಾನಂದ ಜಯಂತಿ ಪ್ರಯುಕ್ತ ಯವಜನ ಸಪ್ತಾಹ ಕುರಿತು ವಿಶೇಷ ಉಪನ್ಯಾಸಗಳು, ದಿನಮಾತು ವೇದಿಕೆ, ಕವಿಹಂ, ೧೨–೧–೧೭ ರಿಂದ ೧೯–೧–೧೭ರ ವರೆಗೆ ವಿದ್ಯಾರಣ್ಯ

೫೮. ವಿದ್ಯಾರ್ಥಿ ಕ್ಷೇಮಪಾಲನ ಘಟಕ, ಕನ್ನಡ ವಿವಿ ಹಂಪಿ, ಸರ್ದಾರ ವಲ್ಲಬಾಯಿ ಪಟೇಲ್ ಜಯಂತಿ ಆಚರಣೆ ಪ್ರಯುಕ್ತ– ವಿಷಯ : ರಾಷ್ಟ್ರೀಯ ಏಕತಾ ದಿನಾಚರಣೆ ಕುರಿತು ವಿಶೇಷ ಉಪನ್ಯಾಸ, ದಿನಮಾತು ವೇದಿಕೆ, ಕವಿಹಂ, ೩೧.೧೦.೨೦೧೬ ವಿದ್ಯಾರಣ್ಯ ಕ್ಯಾಂಪಸ್,

೫೯. ವಿದ್ಯಾರ್ಥಿ ಕ್ಷೇಮಪಾಲನ ಘಟಕ, ಕನ್ನಡ ವಿವಿ ಹಂಪಿ, ಕನ್ನಡ ರಾಜ್ಯೋತ್ಸವ ಕುರಿತ ವಿಶೇಷ ಉಪನ್ಯಾಸ : ಡಾ. ಸಿ. ಆರ್, ಗೋವಿಂದರಾಜು ಇವರಿಂದ– ಕನ್ನಡ– ಕರ್ನಾಟಕ ಪರಿಕಲ್ಪನೆಗಳು, ದಿನಮಾತು ವೇದಿಕೆ, ಕವಿಹಂ, ೧.೧೧.೨೦೧೬, ವಿದ್ಯಾರಣ್ಯ ಕ್ಯಾಂಪಸ್, ೧.೧೧.೨೦೧೬, ವಿದ್ಯಾರಣ್ಯ ಕ್ಯಾಂಪಸ್

೬೦. ವಿದ್ಯಾರಣ್ಯ ಕ್ಯಾಂಪಸ್, ವಿದ್ಯಾರ್ಥಿ ಕ್ಷೇಮಪಾಲನ ಘಟಕ, ಕನ್ನಡ ವಿವಿ ಹಂಪಿ, ಶ್ರೀ ಮೌಲಾನಾ ಆಜಾದ್ ಅವರ ಜಯಂತಿ ಪ್ರಯುಕ್ತ ರಾಷ್ಟ್ರೀಯ ಶಿಕ್ಷಣ ದಿನಾಚಣೆ ಕುರಿತು ವಿಶೇಷ ಉಪನ್ಯಾಸ , ದಿನಮಾತು ವೇದಿಕೆ, ಕವಿಹಂ, ೧೧.೧೧.೨೦೧೬, ವಿದ್ಯಾರಣ್ಯ ಕ್ಯಾಂಪಸ್, ೧೧.೧೧.೨೦೧೬, ವಿದ್ಯಾರಣ್ಯ ಕ್ಯಾಂಪಸ್,

೬೧. ವಿದ್ಯಾರ್ಥಿ ಕ್ಷೇಮಪಾಲನ ಘಟಕ, ಕನ್ನಡ ವಿವಿ ಹಂಪಿ, ಗಣ ರಾಜ್ಯೋತ್ಸವ ಕುರಿತ ವಿಶೇಷ ಉಪನ್ಯಾಸ : ಬಿ ಎಂ ಪುಟ್ಟಯ್ಯ, ದಿನಮಾತು ವೇದಿಕೆ, ಕವಿಹಂ, ೨೬–೧–೨೦೧೭
೬೨. ವಿದ್ಯಾರ್ಥಿ ಕ್ಷೇಮಪಾಲನ ಘಟಕ, ಕನ್ನಡ ವಿವಿ ಹಂಪಿ, ಪಂಡಿತ ಜವಾಹಲಾಲ್ ನೆಹರು ಅವರ ಜಯಂತಿ ಪ್ರಯುಕ್ತ ಮಕ್ಕಳ ದಿನಾಚರಣೆ ಕುರಿತು ವಿಶೇಷ ಉಪನ್ಯಾಸ, ದಿನಮಾತು ವೇದಿಕೆ, ಕವಿಹಂ, ೧೪.೧೧.೨೦೧೬, ವಿದ್ಯಾರಣ್ಯ ಕ್ಯಾಂಪಸ್, ೧೪.೧೧.೨೦೧೬, ವಿದ್ಯಾರಣ್ಯ ಕ್ಯಾಂಪಸ್.

**ಪಡೆದ ಪ್ರಶಸ್ತಿ – ಪುರಸ್ಕಾರಗಳು :**

೧. ೧೯೯೯ – ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು (ರಾಚಪ್ಪಯ್ಯನ ಕೃತಿಗಳು) ,

೨. ೨೦೦೦ – ಕಲ್ಲದೇವನಹಳ್ಳಿ ಸಾಹಿತ್ಯ ಪ್ರತಿಷ್ಠಾನ, ಗುಲಬರ್ಗಾ (ರಾಚಪ್ಪಯ್ಯನ ಕೃತಿಗಳು)

೩. ೨೦೦೬ – ಕರ್ನಾಟಕ ರಾಜ್ಯೋತ್ಸವ ಪುಸ್ತಕ ಪ್ರಶಸ್ತಿ, ಗುಲಬರ್ಗಾ ವಿಶ್ವವಿದ್ಯಾಲಯ (ಅಮರಕಲ್ಯಾಣ)

೪. ೨೦೦೭ – ಅನಂತರಂಗ ಸಂಶೋಧನ ಸಾಹಿತ್ಯ ಪ್ರಶಸ್ತಿ, ಬಿ. ಎಂ. ಶ್ರೀ. ಸ್ಮಾರಕ ಪ್ರತಿಷ್ಠಾನ, ಬೆಂಗಳೂರು (ಅಮರಕಲ್ಯಾಣ)

೫. ೨೦೧೧ – ಮಂಟೇಸ್ವಾಮಿ ಪ್ರಶಸ್ತಿ ಮೈಸೂರು

## ನಾನು ರೂಪಿಸಿದ ಪ್ರಮುಖ ವಿಚಾರ ಸಂಕಿರಣ/ ಕಾರ್ಯಾಗಾರಗಳು:

1. ಮಹಿಳಾ ಮೀಸಲಾತಿ : ಒಂದು ಅವಲೋಕನ ಕುರಿತ ಎರಡು ದಿನಗಳ ವಿಚಾರ ಸಂಕಿರಣವನ್ನು ಗುಲಬರ್ಗಾದಲ್ಲಿ ದಿನಾಂಕ: 5, 6 ಅಕ್ಟೋಬರ್ 2009ಗಳಂದು ನಡೆಸಲಾಯಿತು. ಮಹಿಳಾ ಅಧ್ಯಯನ ವಿಭಾಗ ಮತ್ತು ಎಂ ಎಸ್ ಐ ಪದವಿ ಕಾಲೇಜು, ಗುಲಬರ್ಗಾ ಸಹಯೋಗಗಳಲ್ಲಿ ಈ ಕಾರ್ಯಕ್ರಮವನ್ನು ನಡೆಸಲಾಯಿತು.
2. ಕರ್ನಾಟಕದ ದೇವದಾಸಿ ಪದ್ಧತಿ : ವಿಮೋಚನೆಯ ಸವಾಲು ಸಾಧ್ಯತೆಗಳು ಕುರಿತ ಎರಡು ದಿನಗಳ ದೇವದಾಸಿಯರ ಕಾರ್ಯಾಗಾರವನ್ನು ಕನ್ನಡ ವಿಶ್ವವಿದ್ಯಾಲಯದ ಕ್ಯಾಂಪಸ್ಸಿನಲ್ಲಿ ಏರ್ಪಡಿಸಲಾಯಿತು. ಮಹಿಳಾ ಅಧ್ಯಯನ ವಿಭಾಗದ ವತಿಯಿಂದ ದಿನಾಂಕ: 28, 29 ಮಾರ್ಚ್, 2010 ದಿನಗಳಂದು ಈ ಕಾರ್ಯಾಗಾರವನ್ನು ಇನ್ನೂರು ದೇವದಾಸಿ ಶಬಿರಾರ್ಥಿಗಳ ಸಮ್ಮುಖದಲ್ಲಿ ನಡೆಸಲಾಯಿತು.

3. **ಹೆಣ್ಣುಮಕ್ಕಳ ಸಾಗಾಣಿಕೆ ನಿಷೇಧ : ಸಾಂಸ್ಕೃತಿಕ ಸವಾಲುಗಳು :**

ಪ್ರಸ್ತುತ ಎರಡು ದಿನಗಳ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಹೆಣ್ಣುಮಕ್ಕಳ ಸಾಗಾಣಿಕೆ ನಿಷೇಧ : ಸಾಂಸ್ಕೃತಿಕ ಸವಾಲುಗಳು ಎಂಬ ವಿಷಯವನ್ನಾಧರಿಸಿ ವಿಜಯಪುರದ ಮಹಿಳಾ ವಿಶ್ವವಿದ್ಯಾಲಯದ ಬಿಎಲ್ ಡಿ ಇ ಶಿಕ್ಷಣ ಸಂಸ್ಥೆಯ ಮಹಿಳಾ ಪದವಿ ಕಾಲೇಜಿನಲ್ಲಿ ನಡೆಸಲು ವಿಭಾಗದ ಸಮಿತಿಯು ತೀರ್ಮಾನಿಸಿತ್ತು. ಈ ಹಿನ್ನೆಲೆಯಲ್ಲಿ 2013ರ ಜನೆವರಿ 16 ಮತ್ತ 17 ದಿನಗಳಲ್ಲಿ ವಿಚಾರ ಸಂಕಿರಣವನ್ನು ನಡೆಸಲಾಯಿತು.

ಉದ್ಯೋಗ, ಹಣ ಸೇರಿದಂತೆ ವಿವಿಧ ಆಮಿಷಗಳನ್ನು ಒಡ್ಡಿ ಮುಗ್ಧ ಯುವತಿಯರನ್ನು ಅವರಿಗೆ ಗೊತ್ತಾಗದ ರೀತಿಯಲ್ಲಿ ವೇಶ್ಯಾವಾಟಿಕೆಗೆ ನೂಕುವ ವ್ಯವಸ್ಥಿತ ಜಾಲಗಳು ಕಾರ್ಯ ನಿರ್ವಹಿಸುತ್ತಿರುವುದನ್ನು ಬಯಲಿಗೆಳೆಯಬೇಕು. ಸ್ತ್ರೀಯರ ಹಸಿವು, ಬಡತನಗಳನ್ನೇ ಬಂಡವಾಳವನ್ನಾಗಿಸಿಕೊಂಡು ಮಹಿಳೆಯರನ್ನು ಅನೈತಿಕ ಚಟುವಟಿಕೆ ನಡೆಸಲು ಜಾಲಗಳನ್ನು ಗುರುತಿಸುವ ಅಧ್ಯಯನಗಳು ನಡೆಸಲು ಈ ವಿಚಾರ ಸಂಕಿರಣವು ಚಿಂತನೆಗಳನ್ನು ರೂಪಿಸಿತು.

4. **ಮಹಿಳಾ ಕಾನೂನುಗಳ ಅರಿವು ಕಾರ್ಯಾಗಾರ :**

ಪ್ರಸ್ತುತ ಕಾರ್ಯಾಗಾರವನ್ನು ಹೊಸಪೇಟೆಯ ಥಿಯೋಸಾಫಿಕಲ್ ಮಹಿಳಾ ಪದವಿ ಕಾಲೇಜಿನಲ್ಲಿ ಹೊಸಪೇಟೆ ತಾಲೂಕು ಕಾನೂನು ಸೇವೆಗಳ ಸಮಿತಿ ಹಾಗೂ ವಕೀಲರ ಸಂಘದ ಸಹಯೋಗದಲ್ಲಿ ನಡೆಸಲಾಯಿತು. ಮಹಿಳಾ ಕಾನೂನುಗಳ ಅನುಷ್ಠಾನದಲ್ಲಿ ಹೊಣೆಗಾರಿಕೆಯ ಪ್ರಶ್ನೆ, ಮಹಿಳಾ ಕಾನೂನುಗಳ ಅರಿವು ಕುರಿತಂತೆ ಕಾರ್ಯಾಗಾರದಲ್ಲಿ ಚರ್ಚೆಗಳು ನಡೆದವು. ವಿವಿಧ ತಜ್ಞ ವಕೀಲರು ಮಹಿಳಾ ಅಧ್ಯಯನ ಕುರಿತ ಚಿಂತಕರು ತಮ್ಮ ಕಾನೂನು ಅರಿವನ್ನು ಮಹಿಳಾ ವಿದ್ಯಾರ್ಥಿಗಳಿಗೆ ಮನವರಿಕೆ ಮಾಡಿಕೊಟ್ಟರು. ಕಾನೂನು ಪ್ರಾಧಿಕಾರ, ಹೊಸಪೇಟೆ ಹಾಗೂ ಕನ್ನಡ ವಿವಿಗಳು ಸೇರಿ ಹೊಸಪೇಟೆಯ ಥಿಯೋಸಾಫಿಕಲ್ ಕಾಲೇಜು ಕ್ಯಾಂಪಸಿನಲ್ಲಿ ದನಾಂಕ: ೧೫–೩–೨೦೧೩ ರಂದು ಕಾರ್ಯಾಗಾರವನ್ನು ನಡೆಸಲಾಯಿತು.

### 5. ಮಹಿಳೆಯರ ಮೇಲಿನ ದೌರ್ಜನ್ಯ ತಡೆ: ಸಮಸ್ಯೆಗಳು ಹಾಗೂ ಸವಾಲುಗಳು

2014–15ನೆಯ ಸಾಲಿನಲ್ಲಿ ಎರಡು ದಿನಗಳ ರಾಷ್ಟ್ರೀಯ ವಿಚಾರ ಸಂಕಿರಣವನ್ನು "ಮಹಿಳೆಯರ ಮೇಲಿನ ದೌರ್ಜನ್ಯ ತಡೆ: ಸಮಸ್ಯೆಗಳು ಹಾಗೂ ಸವಾಲುಗಳು" ಎಂಬ ವಿಷಯವನ್ನಾಧರಿಸಿ ನಡೆಸಲು ವಿಭಾಗದ ಸಮಿತಿಯು ತೀರ್ಮಾನಿಸಿದೆ. ಈ ಹಿನ್ನೆಲೆಯಲ್ಲಿ 2015ರ ಮಾರ್ಚ್ 30 ಮತ್ತು 31 ದಿನಗಳಲ್ಲಿ ವಿಚಾರ ಸಂಕಿರಣವನ್ನು ನಡೆಸಲಾಯಿತು.

ಮಹಿಳಾ ಅಧ್ಯಯನದಲ್ಲಿ ಮಹಿಳೆಯರ ವಿರುದ್ಧ ನಡೆಯುವ ಯಾವುದೆ ಬಗೆಯ ದೌರ್ಜನ್ಯಗಳನ್ನು ನಿರ್ಮೂಲನ ಮಾಡಲು ಚಿಂತನೆಯನ್ನು ಮಾಡುವುದು ಈ ವಿಚಾರ ಸಂಕಿರಣದ ಪ್ರಮುಖ ಆಶಯವಾಗಿದೆ. ಈ ನಿಟ್ಟಿನಲ್ಲಿ ಪ್ರಸ್ತುತ ವಿಚಾರ ಸಂಕಿರಣವು ಪ್ರಯತ್ನಿಸಿದೆ. ಸ್ತ್ರೀವಾದಿ ಪರಂಪರೆಗಳು ಹುಟ್ಟಿದಾಗಿನಿಂದ ಹಿಡಿದು ಪ್ರಜಾಪ್ರಭುತ್ವವಾದಿ ಸಮಾನತೆಯ ಹಕ್ಕು–ಬಾಧ್ಯತೆಗಳನ್ನು ಪ್ರತಿಪಾದಿಸುವರೆಗೆ ಇದರ ವ್ಯಾಪ್ತಿ ಇದೆ. ಆರಂಭದಲ್ಲಿ ಸ್ತ್ರೀವಾದಿಗಳು ಅನೇಕ ಚಳುವಳಿ–ಚಿಂತನೆಗಳ ಮೂಲಕ ಮಹಿಳಾ ದೌರ್ಜನ್ಯವನ್ನು ಪ್ರತಿಭಟಿಸುತ್ತಾ ಅನೇಕ ಪರಿಹಾರೋಪಾಯಗಳನ್ನು ಮಂಡಿಸಿದ್ದಾರೆ. ಈ ನಿಟ್ಟಿನಲ್ಲಿ ಮಹಿಳೆಯರ ದೌರ್ಜನ್ಯವನ್ನು ತಡೆಯುವಲ್ಲಿ ಅನೇಕ ಕಾನೂನುಗಳನ್ನು ರೂಪಿಸಿ ನ್ಯಾಯ ದೊರಕಿಸುವಲ್ಲಿ ಸಕ್ರಿಯವಾದ ಪಾತ್ರಗಳನ್ನು ನಿರ್ವಹಿಸುತ್ತಾ ಬರಲಾಗಿದೆ. ದೈಹಿಕ, ಮಾನಸಿಕ, ಸಾಮಾಜಿಕ ಹಾಗೂ ಲೈಂಗಿಕವಾಗಿರುವ ಎಲ್ಲಾ ಬಗೆಯ ದೌರ್ಜನ್ಯಗಳ ವಿರುದ್ಧ ನಡೆಯುತ್ತಿರುವ ದಮನ ಕಾರಿ ಪ್ರವೃತ್ತಿಗಳನ್ನು ಸಕಾರಣವಾಗಿ ಬಯಲಿಗೆಳೆದು ಸಾಮಾಜಿಕ ಸ್ವಾಸ್ಥ್ಯವನ್ನು ಕಾಪಾಡುವುದು ಈ ವಿಚಾರ ಸಂಕಿರಣದ ಆಶಯವಾಗಿದೆ.

### 6. ಮಾಧ್ಯಮಗಳಲ್ಲಿ ಲಿಂಗರಾಜಕಾರಣ : ಸಮಸ್ಯೆ ಹಾಗೂ ಸವಾಲುಗಳು :

ಎರಡು ದಿನಗಳ ರಾಷ್ಟ್ರೀಯ ವಿಚಾರ ಸಂಕಿರಣವನ್ನು ದಿನಾಂಕ : ೨, ೩ನೇ ಫೆಬ್ರುವರಿ–೨೦೧೬ ದಿನಗಳಂದು ಕನ್ನಡ ವಿಶ್ವವಿದ್ಯಾಲಯದ ಕ್ಯಾಂಪಸ್ಸಿನಲ್ಲಿ ನಡೆಸಲಾಯಿತು. ಕರ್ನಾಟಕ ರಾಜ್ಯ ಮಹಿಳಾ ಆಯೋಗ, ಬೆಂಗಳೂರು ಮತ್ತು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು, ಬೆಂಗಳೂರು ಈ ಎರಡು ಸಂಸ್ಥೆಗಳು ಸಹಯೋಗ ನೀಡಿದ್ದವು. ವಿಚಾರ ಸಂಕಿರಣದ ವಿವರ ಪ್ರಸ್ತಾವ ಹೀಗಿದೆ :

### ವಿಚಾರ ಸಂಕಿರಣದ ಪ್ರಸ್ತಾವನೆ

ಕನ್ನಡ ವಿಶ್ವವಿದ್ಯಾಲಯದ ಮಹಿಳಾ ಅಧ್ಯಯನ ವಿಭಾಗವು ದೇಶದ ಆರ್ಥಿಕ, ರಾಜಕೀಯ, ಸಾಮಾಜಿಕ ಮತ್ತು ಸಾಂಸ್ಕೃತಿಯಂತಹ ವಿವಿಧ ಆಯಾಮಗಳಲ್ಲಿ ಲಿಂಗ ಸೂಕ್ಷ್ಮ ತಿಳುವಳಿಕೆಯನ್ನು ಉತ್ಪಾದಿಸುವ ಮತ್ತು ವಿಸ್ತಾರಿಸುವ ಕೆಲಸವನ್ನು ಮಾಡುತ್ತಾ ಬಂದಿದೆ. ಈ ಹಿನ್ನೆಲೆಯಲ್ಲಿ ಮಹಿಳಾ ಅಧ್ಯಯನ ವಿಭಾಗವು 2015–16ನೇ ಶೈಕ್ಷಣಿಕ ಸಾಲಿನಲ್ಲಿ ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಸಹಯೋಗದಲ್ಲಿ ಮಾಧ್ಯಮಗಳಲ್ಲಿ ಲಿಂಗರಾಜಕರಣ : ಸಮಸ್ಯೆ ಹಾಗೂ ಸವಾಲುಗಳು ಎಂಬ ವಿಷಯ ಕುರಿತು ಎರಡು ದಿನಗಳ ರಾಷ್ಟ್ರೀಯ ವಿಚಾರ ಸಂಕಿರಣವನ್ನು ದಿನಾಂಕ: 2 ಮತ್ತು 3 ಫೆಬ್ರವರಿ 2016 ಗಳಂದು ಆಯೋಜಿಸಲಾಯಿತು.

**ಪರಿಕಲ್ಪನೆ :**ಸಮಾಜದಲ್ಲಿ ಲಿಂಗ ಅಸಮಾನತೆ ಮತ್ತು ಲಿಂಗತಾರತಮ್ಯಗಳು ಮಾಧ್ಯಮಗಳಲ್ಲಿ ಬೇರು ಬಿಟ್ಟಿದ್ದು, ದೇಶದ ಅಭಿವೃದ್ಧಿಯ ಮೇಲೆ ಇದು ನಕರಾತ್ಮಕ ಪರಿಣಾಮ ಬೀರುತ್ತಿದೆ. ಇಂತಹ ಸಾಂಪ್ರದಾಯಿಕ ಚಿಂತನಾಕ್ರಮಗಳಿಂದ ಮಾಧ್ಯಮ ಕ್ಷೇತ್ರವೇ ಕಲುಷಿತಗೊಂಡಿದೆ. ಎಲ್ಲ ಮಾಧ್ಯಮಗಳಲ್ಲಿ ಮೇಲ್ ಗೇಜ್ ರಾರಾಜಿಸುತ್ತಿದೆ ಎಂಬುದನ್ನು ಸ್ತ್ರೀವಾದಿ ಅನಾವರಣ ಮಾಡಿದ್ದಾರೆ. ಮಾಧ್ಯಮದ ವಿವಿಧ ಪ್ರಕಾರಗಳಾದ ಮುದ್ರಣ ಮಾಧ್ಯಮ, ಸಂವಹನ ಮಾಧ್ಯಮ, ಚಲನಚಿತ್ರಗಳು, ಧಾರವಾಹಿಗಳು, ಭಾಷೆ, ಸಾಹಿತ್ಯ, ನಾಟಕ, ರಂಗಭೂಮಿ ಸೇರಿದಂತೆ ಇಂಟರ್ ನೆಟ್ ಹಾಗೂ ಇತರ ಸಾಮಾಜಿಕ ಜಾಲ ತಾಣಗಳು ಸಮಾಜದ ಯಾವುದೇ ಮಾಹಿಳಾ ಸಂಬಂಧಿ ವಿಷಯ ಬಂದಾಗ ಲಿಂಗ ಅಸೂಕ್ಷ್ಮತಾ ಗ್ರಹಿಕೆಯನ್ನೆ ಪ್ರಕಟಪಡಿಸುತ್ತವೆ. ಈ ಮೂಲಕ ಅವು ಪುರುಷ ಲಿಂಗದ ಪರವಾಗಿ ಜನಾಭಿಪ್ರಾಯ ರೂಪಿಸುವುದರಿಂದ ಮಹಿಳಾ ಸಮುದಾಯದ ಚಲನಶೀಲತೆ ನಿಯಂತ್ರಿವಾಗುತ್ತದೆ. ಜೊತೆಗೆ ಅವಳ ಅಸ್ತಿತ್ವವೇ ಅದೃಷ್ಯಗೊಳ್ಳುತ್ತಲಿದೆ. ಹಾಗಾಗಿ ಇಂತಹ ಮಾಧ್ಯಮಗಳಲ್ಲಿನ ಲಿಂಗರಾಜಕರಣವನ್ನು ಅರಿಯುವ ಆಶಯದಿಂದ ಕನ್ನಡ ವಿಶ್ವವಿದ್ಯಾಲಯದ ಮಹಿಳಾ ಅಧ್ಯಯನ ವಿಭಾಗವು ತನ್ನ

ಮಹತ್ವಾಂಕ್ಷೆಯ ಈ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಸಂಘಟಿಸುತ್ತಿದೆ.

**ಉದ್ದೇಶ:**

1. ಮಾಧ್ಯಮದ ವಿವಿಧ ಪ್ರಕಾರಗಳಲ್ಲಿನ ಲಿಂಗ ರಾಜಕಾರಣದ ಸ್ವರೂಪವನ್ನು ಗುರುತಿಸುವುದು
2. ಮಾಧ್ಯಮದಲ್ಲಿನ ಲಿಂಗ ರಾಜಕರಣವು ಮಹಿಳಾ ಸಮುದಾಯದ ಮೇಲೆ ಬೀರುತ್ತಿರುವ ನಕಾರತ್ಮಕ ಪರಿಣಾಮವನ್ನು ಅರಿಯುವುದು.
3. ಮಾಧ್ಯಮದಲದಲಿನ ಲಿಂಗ ರಾಜಕರಣವನ್ನು ಸಮಾನತೆಯ ನೆಲೆಯಲ್ಲಿ ರೂಪಿಸಲು ಅನುಸರಿಸುವ ತಂತ್ರಗಳನ್ನು ಪ್ರಸ್ತುತಪಡಿಸುವುದು.

ಈ ಹಿನ್ನೆಲೆಯಲ್ಲಿ ಮಾಧ್ಯಮಗಳಲ್ಲಿ ಲಿಂಗರಾಜಕರಣ : ಸಮಸ್ಯೆ ಹಾಗೂ ಸವಾಲುಗಳು ಎಂಬ ವಿಷಯ ಕುರಿತು ಎರಡು ದಿನಗಳ ರಾಷ್ಟೀಯ ವಿಚಾರ ಸಂಕಿರಣವನ್ನು ಆಯೋಜಿಸಲಾಗಿದೆ.

## ಸಾಂಸ್ಥಿಕ ಯೋಜನೆ ಮತ್ತು ವೈಯಕ್ತಿಕ ಯೋಜನೆಗಳ ವಿವರ:

### 1. ಮಹಿಳೆ ಮತ್ತು ಧರ್ಮ

ಮಹಿಳಾ ಅಧ್ಯಯನದ ಶೈಕ್ಷಣಿಕ ಶಿಸ್ತಿನಲ್ಲಿ ಸ್ತ್ರೀವಾದ, ಮಹಿಳಾ ಅಧ್ಯಯನ ಹಾಗೂ ಜಂಡರ್ ಸ್ಟಡೀಸ್‌ನ ನೆಲೆಗಳು ಒಂದರೊಳಗೊಂದು ಸೇರಿಕೊಂಡು ಇತ್ತೀಚಿನ ಅಧ್ಯಯನಗಳು ತುಂಬಾ ಸಂಕೀರ್ಣವಾಗಿ ನಡೆಯುತ್ತಿರುವುದು ಗಮನಕ್ಕೆ ಬರುತ್ತಿರುತ್ತದೆ. ಇಂದಿನ ಬಹುತೇಕ ಮಹಿಳಾ ಅಧ್ಯಯನ ಮಾದರಿಗಳು ಈ ತೊಡಕಿನಿಂದ ಬಿಡಿಸಿಕೊಳ್ಳದೆ ವೈರುಧ್ಯಗಳನ್ನು ಸೃಷ್ಟಿಸುತ್ತಿವೆ. ಹಾಗಾಗಿ ಖಚಿತವಾದ ತಾತ್ವಿಕ ಗೃಹಿಕೆಗಳ ಹಿನ್ನೆಲೆಯಲ್ಲಿ ಹಾಗೂ ಶೈಕ್ಷಣಿಕ ಶಿಸ್ತಿನ ಹಿನ್ನೆಲೆಯಲ್ಲಿ ಮಹಿಳಾ ಅಧ್ಯಯನವನ್ನು ಮುನ್ನಡೆಸುವ ಅಗತ್ಯ ಉಂಟಾಗುತ್ತಿದೆ. ಈ ಕಾರಣಗಳಿಗಾಗಿ ಮಹಿಳೆ ಮತ್ತು ಧರ್ಮ ಎಂಬ ವಿಷಯವನ್ನು ಕುರಿತು ಪಠ್ಯಕ್ರಮ ಕೇಂದ್ರಿತವಾದ ಚೌಕಟ್ಟಿನಲ್ಲಿ 2009–10ರ ಶೈಕ್ಷಣಿಕ ಸಾಲಿಗಾಗಿ ಈ ಯೋಜನೆಯನ್ನು ರೂಪಿಸಲಾಗಿದೆ.

ಮಾನವರ(ಹೆಂಗಸರನ್ನೊಳಗೊಂಡಂತೆ) ಸಾಮಾಜಿಕ ಚರಿತ್ರೆಯಲ್ಲಿ ಧಾರ್ಮಿಕ ವ್ಯವಸ್ಥೆಯ ಪಾತ್ರವು ತುಂಬಾ ಮಹತ್ವಪೂರ್ಣದ್ದಾಗಿದೆ. ಪ್ರಾಗೈತಿಹಾಸಿಕವಾದ ಅನಾಗರಿಕ ಸ್ಥಿತಿಯಿಂದ ಸಾಂಸ್ಕೃತಿಕ ಹಂತದ ನಾಗರಿಕ ಗತಿಯವರೆಗೆ ಇದರ ಹುಟ್ಟು ಬೆಳವಣಿಗೆ ವಿಕಾಸಗಳಿವೆ. ಧಾರ್ಮಿಕ ವ್ಯವಸ್ಥೆಯಿಂದ ಹೊರತಾಗಿರುವ ಸಾಮಾಜಿಕ ಚರಿತ್ರೆಯೇ ಇಲ್ಲವೇನೊ ಎನ್ನುವಷ್ಟರಮಟ್ಟಿಗೆ ಇದರ ಹರವು ಇದೆ. ಮಾನವ ಚರಿತ್ರೆಯ ಮೊದಲ ಘಟ್ಟದಲ್ಲಿ ಆಯಾ ಸಾಮಾಜಿಕರು ಸೃಷ್ಟಿಸಿಕೊಂಡ ಧರ್ಮಗಳು ನಿರ್ದೇಶಕ ಸ್ಥಾನದಲ್ಲಿ ನಿಂತು ಸಾಮಾಜಿಕ ಸಂರಚನೆಯುನ್ನು ರೂಪಿಸುತ್ತ ಬಂದಿವೆ. ಧರ್ಮಗಳು ವಿವಿಧ ಸಾಮಾಜಿಕ ಸಂಸ್ಥೆಗಳಾದ ಕುಟುಂಬ, ವಿವಾಹ, ಶಿಕ್ಷಣ, ನ್ಯಾಯ, ಆರ್ಥಿಕತೆ ಮುಂತಾದವುಗಳಿಗೆ ಒಂದು ಬಗೆಯಲ್ಲಿ ಸೈದ್ಧಾಂತಿಕ ನೆಲೆಗಟ್ಟನ್ನು ಒದಗಿಸುತ್ತ ಬಂದಿವೆ. ಇವು ಅಮೂರ್ತವಾಗಿದ್ದುಕೊಂಡು ಸಾಮಾಜಿಕ ಸಂಸ್ಥೆಗಳ ಕ್ರಿಯಾವರ್ತನೆಯಲ್ಲಿ ಮೂರ್ತರೂಪ ಪಡೆಯುತ್ತಾ ಸಾಮಾಜಿಕ ಜೀವನವನ್ನು ರೂಪಿಸುತ್ತಾ ಬಂದಿವೆ ಎಂದು ಧರ್ಮಗಳ ಸಾಮಾಜಿಕ ಚರಿತ್ರೆಯನ್ನು ವಿವರಿಸಬಹುದಾಗಿದೆ.

ಸಾಮಾಜಿಕ ಸಂಸ್ಥೆಗಳ ಚರಿತ್ರೆಯ ಸ್ವರೂಪದ ಚರ್ಚೆಯು ಈ ಬಗೆಯದಾದರೆ ಇದರೊಳಗೆ ಬದುಕು ಮಾಡಿ ಬಂದ ಗಂಡಸರು ಹೆಂಗಸರ ಸಾಮಾಜಿಕ ಚಿತ್ರಣವೂ ಇದರೊಳಗೊಳಗೆ ಮೂರ್ತ ಅಮೂರ್ತ ಸ್ವರೂಪ ಪಡೆಯುತ್ತಾ ಭಿನ್ನ ಭಿನ್ನ ಬಗೆಯಲ್ಲಿ ತರತಮಗಳೊಳಗೆ ಹಾದು ಬಂದಿದೆ. ಅದನ್ನು ಮಾತೃ ಪ್ರಧಾನತೆ ಹಾಗೂ ಪಿತೃ ಪ್ರಧಾನತೆಯ ಚರಿತ್ರೆಯ ಒಳಗೆ ಇದರ ರೂಪುರೇಖೆಗಳನ್ನು ಬಿಡಿಸಬಹುದಾಗಿದೆ. ಮಾತೃಪ್ರಧಾನತೆಯಿಂದ ಪಿತೃಪ್ರಧಾನತೆಯೆಡೆಗೆ ಸಾಮಾಜಿಕ ಬದುಕೊಂದು ಸ್ಥಿತ್ಯಂತರಗೊಳ್ಳುವಲ್ಲಿ ಧರ್ಮದ ಪಾತ್ರವು ತೂಂಬಾ ಮಹತ್ವದ್ದಾಗಿದೆ ಮಾತ್ರವಲ್ಲ ನಿರ್ಣಾಯಕವೂ ಆಗಿದೆ. ಪಿತೃಪ್ರಧಾನತೆಗೂ ಧರ್ಮಕ್ಕು ಇರುವ ನಂಟು ಅಗಾಧವಾದುದು. ಸವಕಳಿ ಮಾತಲ್ಲಿ ಹೇಳಬಹುದಾದರೆ ಅವೆರಡೂ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಧರ್ಮವು ಪಿತೃಪ್ರಧಾನತೆಯನ್ನು ಅಭಿವೃದ್ಧಿಪಡಿಸುತ್ತದೆ ಹಾಗೂ ವೈಭವೀಕರಿಸುತ್ತದೆ. ಈ ಋಣಕ್ಕಾಗಿ

ಪಿತೃಪ್ರಧಾನತೆಯು ಧರ್ಮವನ್ನು ಪೋಷಿಸುತ್ತದೆ ಹಾಗೂ ಬೆಳೆಸುತ್ತದೆ. ಹೀಗಾಗಿ ಲಿಂಗಶ್ರೇಣೀಕರಣವು ನೈತಿಕವಾದ ನೆಲೆಗಟ್ಟನ್ನು ಸುತ್ತಿಕೊಂಡು ವಿಸ್ತಾರವಾದ ಹರವಿನಲ್ಲಿ ಬೆಳೆಯುತ್ತಾ ಬಂದಿದೆ. ಈ ಕಾರಣಕ್ಕಾಗಿಯೇನೊ ಧಾರ್ಮಿಕ ವ್ಯವಸ್ಥೆಯಲ್ಲಿ ಮಹಿಳಾ ಚಹರೆಗಳು ನಕಾರಾತ್ಮಕವಾಗಿವೆ.

ಈ ಹಿನ್ನೆಲೆಯಲ್ಲಿ ವಿವಿಧ ಧರ್ಮಗಳು ಯಾವ ಯಾವ ಬಗೆಗಳಲ್ಲಿ ಲಿಂಗಶ್ರೇಣೀಕರಣವನ್ನು ಸೃಷ್ಟಿಸುತ್ತಾ ಬಂದಿವೆ ಹಾಗೂ ಅವುಗಳ ಜೊತೆ ವಿಭಿನ್ನ ಕಾಲಘಟ್ಟದಲ್ಲಿ ಪಿತೃಪ್ರಧಾನತೆಯು ನಡೆದುಕೊಂಡು ಬಂದ ಸಾಮಾಜಿಕ ಚರಿತ್ರೆಯನ್ನು ಶೋಧಿಸುವುದು ಈ ಆಧ್ಯಯನದ ಉದ್ದೇಶವಾಗಿದೆ. ವಿವಿಧ ಸಂಪ್ರದಾಯ ಆಚರಣೆ, ರೂಢಿ ರಿವಾಜುಗಳಲ್ಲಿ ಧಾರ್ಮಿಕ ವ್ಯವಸ್ಥೆಯು ನಡೆಸಿದ ಲಿಂಗೀಯ ತಾರತಮ್ಯದ ಸ್ವರೂಪವನ್ನು ಅಧ್ಯಯನ ಮಾಡುವುದು ಇದರ ಇನ್ನೊಂದು ಗುರಿಯಾಗಿದೆ. ಮಹಿಳಾ ಆದರ್ಶಗಳಾದ ತಾಯ್ತನ, ಗೃಹಿಣಿತ್ವ, ಪಾತಿವ್ರತ್ಯ, ಶೀಲ–ಶುಚಿತ್ವ, ಸತಿತ್ವ ಹಾಗೂ ವೈಧವ್ಯಗಳಂತಹ ಮೌಲ್ಯ ವ್ಯವಸ್ಥೆಗಳನ್ನು ಯಾವ ನೆಲೆಗಳಲ್ಲಿ ಹೆಣ್ಣಿನ ಮೇಲೆ ಹೇರುತ್ತಾ ಬರಲಾಗಿದೆ ಎಂಬುದರ ಶೋಧವು ಈ ಅಧ್ಯಯನದ ಮತ್ತೊಂದು ಗುರಿಯಾಗಿದೆ.

ಇಂತಹ ಕವಲು ದಾರಿಯಲ್ಲಿಯೇ ಕೆಲವು ಮಹಿಳೆಯರು ಪ್ರತಿರೋಧಾತ್ಮಕ ಬದುಕನ್ನು ಬಾಳಿ ಹೆಂಗಸರಿಗೆ ಒಂದು ಬಗೆಯಲ್ಲಿ ಆತ್ಮಗೌರವವನ್ನು ತಂದುಕೊಟ್ಟ ಮಹಿಳೆಯರ ಚರಿತ್ರೆಯನ್ನು ಕೂಡಾ ಈ ಅಧ್ಯಯನದಲ್ಲಿ ಶೋಧಿಸಲು ಪ್ರಯತ್ನಿಸಲಾಗುವುದು. ಅಕ್ಕಮಹಾದೇವಿ, ಮೀರಾಬಾಯಿ, ಆಂಡಾಳ್ ಮೊದಲಾದವರಲ್ಲದೆ ಕೆಳವರ್ಗದ ವಚನಕಾರ್ತಿಯರು ಹಾಗೂ ದಾಸ ಪರಂಪರೆಯ ಹೆಳವನಕಟ್ಟೆ ಗಿರಿಯಮ್ಮ, ಹರಪನಹಳ್ಳಿಯ ಭೀಮವ್ವರ ಸಾಂಸ್ಕೃತಿಕ ಮಹಿಳಾ ಸಂಕಥನವನ್ನು ಇಲ್ಲಿ ಮಂಡಿಸಲಾಗುವುದು. ಇದಲ್ಲದೆ ಸ್ತ್ರೀವಾದಿಗಳು ಮಂಡಿಸುವ ಅಸ್ತಿತ್ವವಾದೀ ನಿಲುವಿನ ಧರ್ಮದ ವಿಶ್ಲೇಷನೆಯನ್ನು ಅವಧಾರಣೆಗೆ ತರಲಾಗುವುದು.

ಪ್ರಸ್ತುತ ಯೋಜನಾ ಪ್ರಸ್ತಾವವನ್ನು ಒಂದು ವರ್ಷದ ಕಾಲಾವಧಿಯಲ್ಲಿ ಸಿದ್ಧಪಡಿಸಲು ಯೋಜಿಸಲಾಗಿದ್ದು, ಈ ಆಧ್ಯಯನವನ್ನು ಎರಡು ಹಂತಗಳಲ್ಲಿ ನಡೆಸಲು ಈ ಊಹಾತ್ಮಕ ಪ್ರಸ್ತಾವವನ್ನು ಸಿದ್ಧಪಡಿಸಲಾಗಿದೆ. ಕ್ಷೇತ್ರಕಾರ್ಯದ ಮೂಲಕ ಕರ್ನಾಟಕದ ಎಲ್ಲ ವಿಶ್ವವಿದ್ಯಾಲಯಗಳಿಗೆ ಭೇಟಿ ನೀಡಿ ಮಾಹಿತಿಯನ್ನು ಸಂಗ್ರಹಿಸುವುದು. ಹಾಗು ಅಲ್ಲಿನ ವಿದ್ವಾಂಸರೊಂದಿಗೆ ಚರ್ಚೆಗಳನ್ನು ನಡೆಸಿ ಅಧ್ಯಯನಕ್ಕೆ ಅಂತಿಮ ಸ್ವರೂಪ ನೀಡುವ ಚೌಕಟ್ಟನ್ನು ಇಟ್ಟುಕೊಳ್ಳಲಾಗಿದೆ. ಕೆಲ ವಿಶಿಷ್ಟ ಗ್ರಾಮ ದೇವತೆಗಳ ಆಚರಣೆ ಸಂಪ್ರದಾಯಗಳನ್ನು ಮಾಹಿತಿ ಸಂಗ್ರಹಣೆಯ ಮೂಲಕ ಸಂಗ್ರಹಿಸಿ ವಿಶ್ಲೇಷಣೆಯನ್ನು ನಡೆಸಲಾಗಿವುದು.

ಮೊದಲ ಹಂತ : ಕ್ಷೇತ್ರಕಾರ್ಯದ ಮೂಲಕ ಮಾಹಿತಿ ಸಂಗ್ರಹಣೆ

ಎರಡನೆಯ ಹಂತ : ಸಂಗ್ರಹಿತ ಮಾಹಿತಿಯ ವಿಶ್ಲೇಷಣೆ ಹಾಗೂ ವಿವರಣಾತ್ಮಕ ಕರಡು ಸಿದ್ಧತೆ

(ಈ ಎರಡೂ ಬಗೆಯ ಕೆಲಸಗಳನ್ನು ಒಟ್ಟೊಟ್ಟಿಗೆ ನಡೆಸಲಾಗುವುದು)

## ವಿವರಣಾತ್ಮಕ ಮಹಿಳಾ ಪದಕೋಶ ಯೋಜನೆ

(ಕನ್ನಡ ಭಾಷಾ ಬಳಕೆಯಲ್ಲಿನ ಲಿಂಗವಾಚಿ ಪದಸ್ವರೂಪವನ್ನಾಧರಿಸಿ)

## (2009 ರಿಂದ 2011ರ ವರೆಗೆ)

ಭಾಷಾ ಬಳಕೆಯಲ್ಲಿ ಲಿಂಗ ಭಿನ್ನತೆಯ ಸ್ವರೂಪವನ್ನು ಕನ್ನಡ ಭಾಷಾ ಬಳಕೆಯ ಸ್ವರೂಪವನ್ನು ಆಧರಿಸಿ ಅಧ್ಯಯನ ಮಾಡುವ ಉದ್ದೇಶದಿಂದ ಈ ಯೋಜನಾ ಪ್ರಸ್ತಾವವನ್ನು ಸಲ್ಲಿಸಲಾಗಿದೆ. ಭಾಷೆಯಲ್ಲಿ ಹೆಣ್ಣುತನ ಗಂಡುತನಗಳಿರುವ ಬಗೆಯನ್ನು ಭಾಷಾಶಾಸ್ತ್ರಜ್ಞರು ಹಾಗೂ ಸ್ತ್ರೀವಾದಿಗಳು ಇಪ್ಪತ್ತನೆಯ ಶತಮಾನದ ಕೊನೆಯ ದಶಕಗಳಲ್ಲಿ ಚಿಂತನೆಯನ್ನು ಆರಂಭಿಸಿದ ಆನಂತರದಲ್ಲಿ ಈ ವಲಯವು ವಿಸ್ತೃತವಾದ ಅಧ್ಯಯನ ವಿಷಯವಾಗಿ ಮಾನ್ಯತೆಯನ್ನು ಹೊಂದಿದೆ.

ಪ್ರಸಿದ್ಧ ಭಾಷಶಾಸ್ತ್ರಜ್ಞ ಯಾಕೊಬಸನ್ ಮಂಡಿಸಿದ ಭಾಷೆಯಲ್ಲಿನ ಹೆಣ್ಣಿನ ನೆಲೆ ಹಾಗೂ ಗಂಡಿನ ನೆಲೆಗಳ ವಿಶಿಷ್ಟತೆಗಳನ್ನು ಭಾಷಾ ತಾರತಮ್ಯದ ನೆಲೆಗಳಾಗಿ ಸ್ತ್ರೀವಾದಿಗಳು ಚರ್ಚೆಗೆ ಎತ್ತಿಕೊಂಡಿದ್ದಾರೆ. ತರ್ಕ, ವಾದಗಳನ್ನು ಹೂಡಿ ಅಭಿಪ್ರಾಯವನ್ನು ಒಪ್ಪಿಸುವ ಆಬ್ಜೆಕ್ಟಿವ್ ನೆಲೆ ಗಂಡು ಭಾಷಾ ಗುಣವೆಂದೂ, ನಿರೂಪಿಸುವ ಹಾಗೂ ವಸ್ತುಸ್ಥಿತಿಯನ್ನು ವರ್ಣಿಸುವ ಸಬ್ಜೇಕ್ಟಿವ್ ಅನಭೋಗಿ ನೆಲೆ ಹೆಣ್ಣಿನ ಭಾಷಾ ಸ್ವರೂಪವೆಂತಲೂ ಚರ್ಚಿಸಲಾಗಿದೆ. ಇದನ್ನೇ ಮಹಿಳಾ ಆಧ್ಯಯನದಲ್ಲಿ ಪರಿಕಲ್ಪನಾತ್ಮಕವಾಗಿ ಹಾಗೂ ತಾತ್ವಿಕವಾಗಿ ಆಂಡ್ರೊ ಸೆಂಟ್ರಿಕ್ ಮತ್ತು ಗೈನೊ ಸೆಂಟ್ರಿಕ್ ನೆಲೆಗಳೆಂದು ಆಧ್ಯಯನಕಾರರು ಬಳಸುತ್ತಿದ್ದಾರೆ.

ಭಾಷಾ ಪ್ರತಿನಿಧೀಕರಣದಲ್ಲಿನ ಹೆಣ್ಣುತನ ಗಂಡುತನಗಳಿರುವ ಭಾಷಾ ಸ್ವರೂಪದ ಸಂರಚನೆಯನ್ನು ಪರಿಶೋಧಿಸುವ ಹಾಗೂ ಅದರ ವಿಭಿನ್ನ ರೂಪಗಳನ್ನು ಕನ್ನಡ ಭಾಷಾ ಬಳಕೆಯ ಹಿನ್ನೆಲೆಯಲ್ಲಿ ಗುರುತಿಸುವ ಹಾಗೂ ಆ ವಿಭಿನ್ನ ರೂಪಗಳನ್ನು ಸಂಕಲಿಸುವ ಅಧ್ಯಯನವನ್ನು ಈ ಯೋಜನೆಯ ಮೂಲಕ ಕೈಗೊಳ್ಳಲು ಉದ್ದೇಶಿಸಲಾಗಿದೆ. ಹೆಣ್ಣಿನ ಭಾಷಾ ಸ್ವರೂಪದ ಲಕ್ಷಣವಿರುವ ನಾಮಪದ, ಗುಣಪದ, ನುಡಿಗಟ್ಟು, ಗಾದೆ, ವಾಕ್ಯರಚನೆ ಮೊದಲಾದ ಭಾಷಾ ಆಂಶಗಳಲ್ಲಿ ಬಳಕೆಯನ್ನು ಆಧರಿಸಿ ಒಂದು ವಿವರಣಾತ್ಮಕ ಮಹಿಳಾ ಪದಕೋಶವನ್ನು ಸಿದ್ಧಪಡಿಸುವುದು ಕೂಡಾ ಈ ಅಧ್ಯಯನದ ಇನ್ನೊಂದು ಮಹತ್ವದ ಉದ್ದೇಶವಾಗಿದೆ. 2009–10 ಹಾಗೂ 2010–11ರ ಶೈಕ್ಷಣಿಕ ಸಾಲಿಗೆ ಈ ಯೋಜನೆಯನ್ನು ರೂಪಿಸಲಾಗಿದೆ.

ಈ ಹಿನ್ನೆಲೆಯಲ್ಲಿ ಪ್ರಸ್ತುತ ಯೋಜನಾ ಪ್ರಸ್ತಾವವನ್ನು ಎರಡು ವರ್ಷಗಳ ಕಾಲಾವಧಿಯಲ್ಲಿ ಸಿಧ್ಧಪಡಿಸಲು ಆಧ್ಯಯನವನ್ನು ಎರಡು ವರ್ಷಗಳಲ್ಲಿ ನಡೆಸಲು ಎರಡು ಭಾಗವನ್ನಾಗಿ ಇದನ್ನು ವಿಭಾಗೀಕರಿಸಿಕೊಳ್ಳಲಾಗಿದೆ.

ಮೊದಲ ಹಂತ : ಕ್ಷೇತ್ರಕಾರ್ಯದ ಮೂಲಕ ಮಾಹಿತಿ ಸಂಗ್ರಹಣೆ

ಎರಡನೆಯ ಹಂತ : ಸಂಗ್ರಹಿತ ಮಾಹಿತಿಯ ವಿಶ್ಲೇಷಣೆ ಹಾಗೂ ವಿವರಣಾತ್ಮಕ ಮಹಿಳಾ ಪದಕೋಶ ಸಿದ್ಧತೆ( ಈ ಎರಡೂ ಬಗೆಯ ಕೆಲಸಗಳನ್ನು ಎರಡೂ ವರ್ಷಗಳಲ್ಲಿ ಒಟ್ಟೊಟ್ಟಿಗೆ ನಿರ್ವಹಿಸಲಾಗುವುದು.)

## ಮಹಿಳಾ ಅಧ್ಯಯನದ ವೈಧಾನಿಕತೆ (ಸಾಹಿತ್ಯ ಆಕರವನ್ನು ಅನುಲಕ್ಷಿಸಿ)(2014–16ರ ವರೆಗೆ)

ಸಂಶೋಧನಾ ವೈಧಾನಿಕತೆ ಎನ್ನುವುದು ಪ್ರತಿಯೊಂದು ಅಧ್ಯಯನದಲ್ಲು ಮಹತ್ವದ ವಿಚಾರವಾಗಿರುತ್ತದೆ. ಯಾಕೆಂದರೆ ಪ್ರತಿಯೊಂದು ಜ್ಞಾನ ಪರಂಪರೆಯಲ್ಲಿ ಸಾಂಪ್ರದಾಯಿಕವಾದ ಸಂಶೋಧನಾ ಅಧ್ಯಯನ ವಿಧಾನಗಳು ಕಾರ್ಯಪ್ರವೃತ್ತವಾಗಿರುವುದರಿಂದ ಆಯಾ ಜ್ಞಾನ ಶಾಖೆಗಳು ತಮ್ಮದೇ ಆದ ವೈಧಾನಿಕತೆಯನ್ನು ಕಟ್ಟಿಕೊಳ್ಳಬೇಕಾಗುತ್ತದೆ. ಈ ನಿಟ್ಟಿನಲ್ಲಿ ಮಹಿಳಾ ಅಧ್ಯಯನದ ಶೈಕ್ಷಣಿಕ ಶಿಸ್ತಿನಲ್ಲಿ ವೈಧಾನಿಕತೆಯನ್ನು ವಿವರಿಸುವುದು ಸವಾಲಿನ ಕಾರ್ಯವಾಗಿದೆ. ಸ್ತ್ರೀವಾದ, ಮಹಿಳಾ ಅಧ್ಯಯನ ಹಾಗೂ ಜಂಡರ್ ಸ್ಟಡೀಸ್‌ನ ಅಧ್ಯಯನಗಳಲ್ಲಿ ಮುಖ್ಯವಾಗಿ ಲಿಂಗ ನಿರಪೇಕ್ಷವಾದ ಲೈಂಗಿಕತಾವಾದಿಯಲ್ಲದ ಸಂಶೋಧನಾ ನೆಲೆಗಳನ್ನು ರೂಢಿಸುವುದು ಅಗತ್ಯವಾಗಿದೆ. ಸೆಕ್ಸಿಸ್ಟ ವಿಧಾನಗಳು ಸೇರಿಕೊಂಡು ಇತ್ತೀಚಿನ ಲಿಂಗಸಂಬಂಧಿ ಅಧ್ಯಯನಗಳು ದಿಕ್ಕುತಪ್ಪಿ ಸಾಗುತ್ತಿವೆ. ಇಂತಹ ಅಧ್ಯಯನವೊಂದರ ಅಗತ್ಯವನ್ನು ಮನಗಂಡು ಮಹಿಳಾ ಅಧ್ಯಯನ ವಿಭಾಗದ ಸಾಂಸ್ಥಿಕ ಯೋಜನೆಯಾಗಿ ಅಧ್ಯಯನ ಮಾಡಲು ಈ

ಪ್ರಸ್ತಾವವನ್ನು ರೂಪಿಸಲಾಗಿದೆ.

ಇಂದಿನ ಬಹುತೇಕ ಮಹಿಳಾ ಅಧ್ಯಯನ ಮಾದರಿಗಳು ಮಹಿಳಾ ಸಮುದಾಯದ ಸಮಸ್ಯೆಗಳನ್ನು ಬಿಡಿಸುವಲ್ಲಿ ಮತ್ತು ಅವರಿಗೊಂದು ಸೂಕ್ತ ಪರಿಹಾರವನ್ನು ಸೂಚಿಸುವಲ್ಲಿ ತಮ್ಮದೆ ಆದ ಪಾತ್ರವನ್ನು ವಹಿಸುತ್ತವೆ. ಈ ನಿಟ್ಟಿನಲ್ಲಿ ಮಹಿಳಾ ಅಧ್ಯಯನದ ದೃಷ್ಟಿಕೋನದಿಂದ ವಿಶ್ಲೇಷಿಸುವ ಅಧ್ಯಯನ ವಿಷಯಕ್ಕೆ ಒಂದು ಖಚಿತವಾದ ವೈಧಾನಿಕತೆಯನ್ನು ರೂಪಿಸಿ, ಹೊಸಹೊಸ ಅಧ್ಯಯನಕಾರರಿಗೆ ಅದನ್ನು ತಿಳಿಸಿಕೊಡುವ ಕಾರಣಕ್ಕಾಗಿ ಪ್ರಸ್ತುತ ಮಹಿಳಾ ಅಧ್ಯಯನದ ವೈಧಾನಿಕತೆಯ ಯೋಜನೆಯನ್ನು ಕೈಗೊಳ್ಳಲಾಗಿದೆ. ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ ಪರಂಪರೆಯನ್ನು ಆದರಿಸಿ ನಡೆಸಲಾಗಿರುವ ಹಂಪಿ ಕನ್ನಡ ವಿಶ್ವವಿದ್ಯಾಲಯದ ಆಶಯಕ್ಕೆ ಉಪಯುಕ್ತವಾಗುವ ನಿಟ್ಟಿನಲ್ಲಿ ಕನ್ನಡ ಸಾಹಿತ್ಯದ ಆಕರಗಳನ್ನು ಆಧರಿಸಿ ಪ್ರಸ್ತುತ ಅಧ್ಯಯನವನ್ನು ನಡೆಸಲಾಗುವುದು. ಮಹಿಳಾ ಅಧ್ಯಯನದ ಸೈದ್ಧಾಂತಿಕತೆ ಮತ್ತು ಅನ್ವಯಿಕತೆಗಳನ್ನು ಲಕ್ಷದಲ್ಲಿ ಇರಿಸಿಕೊಂಡು ಈ ಯೋಜನೆಯನ್ನು ಎರಡು ವರ್ಷಗಳ ಅವಧಿಯಲ್ಲಿ ನಿರ್ವಹಿಸಲು ಉದ್ದೇಶಿಸಲಾಗಿದೆ.

**ಅವಧಿ:** ಪ್ರಸ್ತುತ ಯೋಜನಾ ಪ್ರಸ್ತಾವವನ್ನು ಎರಡು ವರ್ಷದ ಕಾಲಾವಧಿಯಲ್ಲಿ ಸಿದ್ಧಪಡಿಸಲು ಯೊಜಿಸಲಾಗಿದ್ದು, ಈ ಅಧ್ಯಯನವನ್ನು ಎರಡು ಹಂತಗಳಲ್ಲಿ ನಡೆಸಲು ಪ್ರಸ್ತಾವವನ್ನು ಸಿದ್ದಪಡಿಸಲಾಗಿದೆ. ಕ್ಷೇತ್ರಕಾರ್ಯದ ಮೂಲಕ ಕರ್ನಾಟಕದ ಎಲ್ಲ ವಿಶ್ವವಿದ್ಯಾಲಯಗಳಿಗೆ ಭೇಟಿ ನೀಡಿ ಮಾಹಿತಿಯನ್ನು ಸಂಗ್ರಹಿಸುವುದು. ಹಾಗೂ ಅಲ್ಲಿನ ವಿದ್ವಾಂಸರೊಂದಿಗೆ ಚರ್ಚೆಗಳನ್ನು ನಡೆಸಿ ಅಧ್ಯಯನಕ್ಕೆ ಅಂತಿಮ ಸ್ವರೂಪ ನೀಡುವುದು.

**ಮೊದಲ ಹಂತ:** ಕ್ಷೇತ್ರಕಾರ್ಯದ ಮೂಲಕ ಮಾಹಿತಿ ಸಂಗ್ರಹಣೆ

**ಎರಡನೆಯ ಹಂತ:** ಸಂಗ್ರಹಿತ ಮಾಹಿತಿಯ ವಿಶ್ಲೇಷಣೆ ಹಾಗೂ ವಿವರಣಾತ್ಮಕ ಕರಡು ಸಿದ್ಧತೆ

(ಈ ಎರಡೂ ಬಗೆಯ ಕೆಲಸಗಳನ್ನು ಒಟ್ಟೊಟ್ಟಿಗೆ ನಡೆಸಲಾಗುವುದು)

## 1. ವೈಯಕ್ತಿಕ ಯೋಜನೆ

### ವಚನಕಾರ್ತಿಯರು : ಸ್ತ್ರೀವಾದಿ ನಿರ್ವಚನ

ಈ ಯೋಜನೆಯನ್ನು ನಾನು ವೈಯಕ್ತಿಕವಾಗಿ ನಿರ್ವಹಿಸಲು ರೂಪಿಸಲಾಗಿದೆ. ಕನ್ನಡ ಸಾಹಿತ್ಯ–ಸಂಸ್ಕೃತಿಯ ಇತಿಹಾಸದಲ್ಲಿ ವಚನಕಾರರ ಕಾಲಘಟ್ಟವು ತನ್ನ ಕ್ರಾಂತಿಕಾರಕ ಗುಣದಿಂದಾಗಿ ಪ್ರಸಿದ್ಧಿ ಪಡೆದಿದೆ. ಇಲ್ಲಿ ಮುಖ್ಯ ವಚನಕಾರರಿಗಿಂತ ವಚನಕಾರ್ತಿಯರು ತೊಡಗಿಸಿಕೊಂಡ ಬಗೆ ವಿಶಿಷ್ಟವಾಗಿದೆ ಮತ್ತು ವಿನೂತನವಾಗಿದೆ. ಶಿಕ್ಷಣ, ಭಾಷಾಭಿವ್ಯಕ್ತಿ ಹಾಗೂ ಸಾರ್ವಜನಿಕ ವಲಯಗಳಲ್ಲಿ ಮಹಿಳಾ ಪ್ರವೇಶವನ್ನು ನಿಷಿದ್ಧಗೊಳಿಸಿದ ಸಂದರ್ಭದಲ್ಲಿ ಮಹಿಳೆಯರ ಈ ಅಭಿವ್ಯಕ್ತಿಗಳು ಕುತೂಹಲದಾಯಕವಾಗಿ ಕಾಣಿಸಿಕೊಳ್ಳುತ್ತವೆ. ಸ್ಥಾಪಿತ ಪರಂಪರೆಯಿಂದ ಸಿಡಿದು ಬಂಡೇಳುವ ಮಹಿಳೆಯರು ಇಂತಹ ಅಭಿವ್ಯಕ್ತಿಗಳಿಗೆ ಕಾರಣರಾಗಿದ್ದಾರೆ. ಮುಖ್ಯವಾಗಿ ಪುರುಷ ಸಂಸ್ಕೃತಿಯಿಂದ ಅಲಕ್ಷ್ಯಕ್ಕೆ, ನಿರಾಕರಣೆಗೆ ಒಳಗಾಗಿರುವ ಮಹಿಳಾ ಲೋಕ ಹೇಗೆ ಒಂದೆಡೆ ಸೇರಿ ತಮ್ಮದೇ ಅಭಿವ್ಯಕ್ತಿಗಳನ್ನು ಮಂಡಿಸಿದ್ದಾರೆಂದರೆ ಇದನ್ನು ಕೇವಲ ಒಂದು ಅಭಿವ್ಯಕ್ತಿಯಾಗಿ ನೋಡುವುದು ಅಷ್ಟು ಸಮಂಜಸವಲ್ಲ.

ಈ ದೃಷ್ಟಿಯಿಂದ ಪ್ರಸ್ತುತ ಅಧ್ಯಯನವು 'ವಚನಕಾರ್ತಿ'ಯರಾದ ಈ ಗುಂಪನ್ನು, ಅವರ ಅಭಿವ್ಯಕ್ತಿಯ ಅನನ್ಯತೆಯನ್ನಾಧರಿಸಿ ಒಂದು ಸಾಂಸ್ಕೃತಿಕ ಮಹಿಳಾ ಚಿಂತನೆಯನ್ನು ಮಂಡಿಸಲು ಬಯಸಿದೆ. ಇಲ್ಲಿ ಬರುವ ಮಹಿಳೆಯರು ಕೂಡ ಒಂದೇ ಜಾತಿ, ವರ್ಗಗಳಿಗೆ ಸಂಬಂಧಿಸದೆ ವಿವಿಧ ತಳ ಸಮುದಾಯಗಳ ಸಂಸ್ಕೃತಿಯ ವಾರಸುದಾರರಾಗಿ ಕೂಡ ಪ್ರವೇಶ ಪಡೆದಿರುವುದು ಈ ಅಧ್ಯಯನದ ಇನ್ನೊಂದು ಕುತೂಹಲಕರ ಸಂಗತಿಯಾಗಿ ಮಂಡಿಸುತ್ತದೆ. ಮಹಿಳೆಯರ ಧಾರ್ಮಿಕ ಪ್ರವೇಶ, ಸತಿಪತಿಗಳೊಂದಾದ ಭಕ್ತಿ, ಅದನ್ನು ಪ್ರತಿರೋಧಿಸುವ ಆಶಯಗಳು, ಮಹಿಳಾ ಅಭಿವ್ಯಕ್ತಿಗೆ ತೊಡಕಾಗಿರುವ ಸಂಗತಿಗಳು, ಶಕ್ತಿ ಪರಂಪರೆಗಳು ಹಾಗೂ ಅವುಗಳ ಪ್ರತಿನಿಧಿತ್ವ, ತಳಸಮುದಾಯಗಳ ಸಾಂಸ್ಕೃತಿಕ ಚಹರೆಗಳು, ಸಾಮಾಜಿಕವಾಗಿ ಪರಿತ್ಯಕ್ತೆಯರಾದ ವೇಶ್ಯೆಯರು ಇತ್ಯಾದಿ ಸಂಗತಿಗಳನ್ನು ಪ್ರಸ್ತುತ ಯೋಜನೆಯಲ್ಲಿ ಅಧ್ಯಯನ ಮಾಡಲಾಗುವುದು.

**ಅವಧಿ:** ಎರಡು ವರ್ಷಗಳ ಅಕಾಡೆಮಿಕ್ ಕಾಲಾವಧಿಯಲ್ಲಿ ಈ ಯೋಜನೆಯನ್ನು ಸಿದ್ಧಪಡಿಸಲಾಗುವುದು. ಮೊದಲ ವರ್ಷದಲ್ಲಿ ಮಾಹಿತಿ ಸಂಗ್ರಹಣೆ ಟಿಪ್ಪಣಿ ಬರಹ ಮಾಡುವುದು. ಪೂರಕ ಅಧ್ಯಯನ ಮಾಡುವುದು ಎರಡನೆಯ ವರ್ಷದಲ್ಲಿ ಸಂಗ್ರಹಿತ ಮಾದರಿಯನ್ನಾಧರಿಸಿ ವಿಶ್ಲೇಷಣಾತ್ಮಕ ಬರವಣಿಗೆಯ ಕಾರ್ಯವನ್ನು ನೆರವೇರಿಸಲಾಗುವುದು.

**ಯೋಜನೆಯ ವೆಚ್ಚ:** ವಿಶ್ವವಿದ್ಯಾಲಯವು ನಿಗದಿಪಡಿಸುವ ವೆಚ್ಚದಲ್ಲಿ ಈ ಯೋಜನೆಯ ವೆಚ್ಚವನ್ನು ನಿರ್ವಹಿಸಲಾಗುವುದು.

## ಮಹಿಳಾ ಅಧ್ಯಯನ ವಿಭಾಗದ ಮಾಹಿತಿ ವಿವರ :

### ಮಹಿಳಾ ಅಧ್ಯಯನ ವಿಭಾಗದ ಆರಂಭ ಹಾಗೂ ಆಶಯ:

ಕನ್ನಡ ವಿಶ್ವವಿದ್ಯಾಲಯದ ಮಹಿಳಾ ಅಧ್ಯಯನ ವಿಭಾಗವನ್ನು 1999ರಲ್ಲಿ ಆರಂಭಿಸಲಾಯಿತು. ವಿಭಿನ್ನ ಜ್ಞಾನಶಿಸ್ತುಗಳಲ್ಲಿ ಸ್ಥಾಪಿತವಾಗಿರುವ ಜ್ಞಾನವನ್ನು ಸ್ತ್ರೀವಾದಿ ದೃಷ್ಟಿಕೋನದಿಂದ ಪುನರ್ ವಿಮರ್ಶಿಸುವ ಕಾರ್ಯವನ್ನು ಕರ್ನಾಟಕದಲ್ಲಿ ಆರಂಭಿಸಿದ್ದು 70ರ ದಶಕದಿಂದೀಚೆಗೆ. ಭಾಷೆ, ಸಾಹಿತ್ಯ, ಸಂಸ್ಕೃತಿ, ತತ್ವಶಾಸ್ತ್ರ, ಮತ್ತು ಪ್ರಮುಖ ಮಾನವಿಕ ಅಧ್ಯಯನ ಶಾಖೆಗಳಾದ ಸಮಾಜಶಾಸ್ತ್ರ, ಮಾನವಶಾಸ್ತ್ರ, ಮನಃಶಾಸ್ತ್ರ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ ಇತಿಹಾಸ ಮುಂತಾದ ಜ್ಞಾನಶಾಖೆಗಳನ್ನು ಮಹಿಳಾ ದೃಷ್ಟಿಕೋನದಿಂದ ಅಧ್ಯಯನ ಮಾಡುವುದು ಮಹಿಳಾ ಅಧ್ಯಯನ ವಿಭಾಗದ ಮುಖ್ಯ ಆಶಯವಾಗಿದೆ. ಮಹಿಳಾ ಅಧ್ಯಯನದ ಈ ನೆಲೆ ಅಕಾಡೆಮಿಕ್ ವಲಯದಲ್ಲಿ ಅತ್ಯಂತ ಕುತೂಹಲಕರವಾದ ಹಾಗೂ ಗಂಭೀರವಾದ ಚರ್ಚೆಯನ್ನು ಮಂಡಿಸುತ್ತದೆ. ಎಲ್ಲಾ ಜ್ಞಾನಶಾಖೆಗಳಲ್ಲಿ ಈ ಚಿಂತನೆಯನ್ನು ಅಳವಡಿಸುವುದು ಇಂದು ಅನಿವಾರ್ಯವಾಗಿದೆ. ಸ್ಥಿರವಾಗಿ ನೆಲೆಯೂರಿರುವ ಸಾಂಪ್ರದಾಯಿಕವಾದ ಪುರುಷ ಕೇಂದ್ರಿತ ಆಲೋಚನಾ ಕ್ರಮದಿಂದ ಹೊರಬಂದು ಚಲನಶೀಲವಾದ ಜಂಡರ್ ಚಿಂತನಾ ಕ್ರಮವನ್ನು ರೂಢಿಸುವುದು ವರ್ತಮಾನದ ಲಕ್ಷಣವಾಗಿದೆ. ಇಂತಹ ಹಲವಾರು ಅಗತ್ಯ ಕಾರಣಗಳಿಗಾಗಿ ಮಹಿಳಾ ಅಧ್ಯಯನ ವಿಭಾಗವನ್ನು ರೂಪಿಸಲಾಗಿದೆ.

### ಧ್ಯೇಯೋದ್ದೇಶಗಳು:

ಮಹಿಳಾ ಅಧ್ಯಯನ ವಿಭಾಗವನ್ನು ಕನ್ನಡ ವಿಶ್ವವಿದ್ಯಾಲಯದ ಧ್ಯೇಯ ವಾಕ್ಯದಂತೆ ಸಂಶೋಧನೆಯನ್ನು ನಡೆಸುವುದು ಮುಖ್ಯವಾದ ಆಶಯವಾಗಿರುವುದರಿಂದ ಪ್ರಧಾನವಾಗಿ ಅಧ್ಯಯನ ಯೋಜನೆಗಳಾಗಿ ಗುಂಪುಯೋಜನೆಗಳು, ವೈಯಕ್ತಿಕ ಯೋಜನೆಗಳನ್ನು ನಡೆಸಿಕೊಂಡು ಬರುವುದು ಈ ಯೋಜನೆಗಳ ಒಟ್ಟೊಟ್ಟಿಗೆ ಕಾರ್ಯಕ್ರಮಗಳಾಗಿ ವಿಚಾರ ಸಂಕಿರಣ, ಕಮ್ಮಟ ಮತ್ತು ತರಬೇತಿ ಚಟುವಟಿಕೆಗಳನ್ನು ಕೂಡ ವಿಭಾಗದ ಅಧ್ಯಾಪಕ ವರ್ಗವು ನಡೆಸಿಕೊಂಡು ಬರುತ್ತಿದೆ. ಇವುಗಳಂತೆ ಸಮುದಾಯ ಕಾರ್ಯಚಟುವಟಿಕೆಗಳಾಗಿ ಮಹಿಳಾ ಸ್ವಸಹಾಯ ಸಂಘಗಳಿಗೆ ಪ್ರೋತ್ಸಾಹ ಶಿಬಿರಗಳು, ಜಾಗೃತಿ ಹಾಗೂ ಮಹಿಳಾ ಸಬಲೀಕರಣ ಕಾರ್ಯಕ್ರಮಗಳನ್ನು ರೂಪಿಸುವುದು.

ಸಂಶೋಧನೆಗೆ ಪೂರಕವಾಗಿ ಬೋಧನೆಯನ್ನು ಕೂಡಾ ಅಷ್ಟೇ ಸಮರ್ಥವಾಗಿ ವಿಭಾಗವು ಮುನ್ನಡೆಸಿಕೊಂಡು ಬರುವಂತೆ ಮಹಿಳಾ ಅಧ್ಯಯನವನ್ನು ಕೋರ್ಸ್‌ಗಾಗಿ, ಡಿಪ್ಲೋಮಾ, ಎಂ.ಎ. ಪಿಎಚ್.ಡಿ ಸಂಯೋಜಿತ ಪದವಿ, ಎಂ.ಫಿಲ್ ಪದವಿ ಹಾಗೂ ಪಿಎಚ್.ಡಿ ಪದವಿಗಳನ್ನು ನಡೆಸುವುದು. ಬೋಧನೆಯಲ್ಲಿ ಸಂಶೋಧನೆಯನ್ನು ಅನ್ವಯಿಸಿ ಪಠ್ಯಕ್ರಮಗಳನ್ನು ರೂಪಿಸುವುದು, ಪರಿಷ್ಕರಿಸುವುದು.

### ವಿಸ್ತರಣಾ ಚಟುವಟಿಕೆಗಳು:

1. ವಿಭಾಗದ ಧ್ಯೋಯೋದ್ದೇಶಕ್ಕೆ ಪೂರಕವಾಗಿ 'ಯುಜಿಸಿ'ಯಿಂದ ಅನುದಾನ ಪಡೆದು 10ನೇ ಯೋಜನೆಯಲ್ಲಿ ಮಹಿಳಾ ಅಧ್ಯಯನ ಕೇಂದ್ರವನ್ನು ಆರಂಭಿಸಲಾಗಿದೆ. ವಿಭಾಗದ ಎಲ್ಲಾ ಅಧ್ಯಾಪಕ ಸದಸ್ಯರು ಈ ಕೇಂದ್ರದ ಕಾರ್ಯಚಟುವಟಿಕೆಗಳನ್ನು ನಿರ್ವಹಿಸಿಕೊಂಡು ಬಂದಿದ್ದಾರೆ.

ಹಾಗಾಗಿ 2004 ರಿಂದ ಯುಜಿಸಿ ಪ್ರಾಯೋಜಿತ ಮಹಿಳಾ ಅಧ್ಯಯನ ಕೇಂದ್ರ ವಿಶ್ವವಿದ್ಯಾಲಯದಲ್ಲಿ ಆರಂಭವಾಗಿದೆ. ಇಲ್ಲಿಯೂ ಕೂಡ ಬೋಧನೆ, ಸಂಶೋಧನೆ ಹಾಗೂ ಕ್ರಿಯಾತ್ಮಕ ಕಾರ್ಯಕ್ರಮಗಳನ್ನು ರೂಪಿಸಿ ಮುನ್ನಡೆಸಿಕೊಂಡು ಬರಲಾಗುತ್ತಿದೆ. ಈ ಕೇಂದ್ರಕ್ಕೆ ವಿಭಾಗವು ಪೂರಕವಾಗಿ ಸಂಪನ್ಮೂಲವನ್ನು ಹಂಚಿಕೊಂಡು ಒಟ್ಟಾರೆ ಮಹಿಳಾ ಅಧ್ಯಯನವನ್ನು ಅಭಿವೃದ್ಧಿ ಪಡಿಸುವುದು.

2. ವಿಭಾಗವು ಈ ಎಲ್ಲ ಚಟುವಟಿಕೆಗಳನ್ನು ದಾಖಲಿಸಿ ಓದುಗ ಸಮುದಾಯಕ್ಕೆ ತಲುಪಿಸಲು ಪತ್ರಿಕೆಯೊಂದನ್ನು ರೂಪಿಸಿ 'ಮಹಿಳಾ ಅಧ್ಯಯನ' ಎಂಬ ಹೆಸರಿನಲ್ಲಿ ಅರ್ಧವಾರ್ಷಿಕ ನಿಯತಕಾಲಿಕೆಯನ್ನು ತರುವುದು. ಹಾಗೆಯೇ ವಿಶ್ವವಿದ್ಯಾಲಯದ ಅಕೆಡೆಮಿಕ್ ಪತ್ರಿಕೆಗಳಲ್ಲಿ ಮಹಿಳಾ ಅಧ್ಯಯನದ ಚಿಂತನೆಗಳನ್ನು ಪ್ರಕಟಪಡಿಸಲು ನೆರವಾಗುವುದು. ಮುಂದುವ ಹಾಗೆಯೇ ಅನೇಕ ವೈಯಕ್ತಿಕ ಯೋಜನೆಗಳನ್ನು, ಅನುವಾದಗಳನ್ನು, ಸ್ವತಂತ್ರ, ಕೃತಿಗಳನ್ನು ವಿಶ್ವವಿದ್ಯಾಲಯದ ಪ್ರಸಾರಾಂಗದಿಂದ ಪ್ರಕಟಿಸುವ ಕಾರ್ಯವನ್ನು ನಿರಂತರವಾಗಿ ಮುಂದುವರಿಸಿಕೊಂಡು ಬರುವುದು.

## ವಿಭಾಗದಲ್ಲಿ ನಾನು ಭಾಗವಹಿಸುವ ಪ್ರಧಾನ ಕಾರ್ಯ ಚಟುವಟಿಕೆಗಳು

**1. ಬೋಧನೆ ಮತ್ತು ತರಬೇತಿ**

ಅ. ಮಹಿಳಾ ಅಧ್ಯಯನದಲ್ಲಿ ವಿವಿಧ ಕೋರ್ಸಗಳನ್ನು ರೂಪಿಸುವುದು

1. ಎಂ.ಎ. ಪಿಎಚ್.ಡಿ. ಸಂಯೋಜಿತ ಪದವಿ 12 ಸೆಮಿಸ್ಟರಗಳಲ್ಲಿ
2. ಎಂ.ಫಿಲ್. ಪದವಿ (ಒಂದು ವರ್ಷ)
3. ಪಿಎಚ್.ಡಿ. ಪದವಿ (ನಾಲ್ಕು/ಐದು ವರ್ಷ)
4. ಸ್ನಾತಕೋತ್ತರ ಡಿಪ್ಲೋಮಾ (ದೂರಶಿಕ್ಷಣದ ಮೂಲಕ)

**2. ಸಂಶೋಧನೆ ಮತ್ತು ವಿಸ್ತರಣೆ**

1. ಮಹಿಳಾ ಅಧ್ಯಯನಕ್ಕೆ ಸಂಬಂಧಿಸಿದ ಯೋಜನೆಗಳನ್ನು ಸಾಂಸ್ಥಿಕ ಹಾಗೂ ವೈಯಕ್ತಿಕವಾಗಿ ನಿರ್ವಹಿಸುವುದು.
2. ಪೂರಕ ಪಠ್ಯಗಳ ನಿರ್ಮಾಣ ಎಂ.ಎ. ಮತ್ತು ಡಿಪ್ಲೋಮಾ ಪದವಿಗಳನ್ನಾಧರಿಸಿ ರೂಪಿಸುವುದು.
3. ಮಹಿಳಾ ಅಧ್ಯಯನ ಪತ್ರಿಕೆ

**3. ಪ್ರಕಟಣೆ**

1. ಸಂಶೋಧನಾ ಕೃತಿಗಳು, ಅನುವಾದಗಳು, ಪರಿಕಲ್ಪನೆಗಳನ್ನು ಕುರಿತ ಪ್ರಕಟಣೆಗಳು.

**4. ಸಲಹಾತ್ಮಕ ಚಟುವಟಿಕೆಗಳು (Advocacy)**

1. ಅಧ್ಯಯನ ಮಂಡಳಿ ಮತ್ತು ಪರೀಕ್ಷಾ ಮಂಡಳಿಗಳ ಮೂಲಕ ಪಠ್ಯಕ್ರಮ ಸಿದ್ಧತೆ (ವಿಭಾಗದಲ್ಲಿ ಹಾಗೂ ಬೇರೆ ಬೇರೆ ವಿಶ್ವವಿದ್ಯಾಲಯಗಳಲ್ಲಿ ಭಾಗವಹಿಸುವುದರ ಮೂಲಕ

   ಅತಿಥಿ ಉಪನ್ಯಾಸಗಳು, ವಿಶೇಷ ಉಪನ್ಯಾಸಗಳು ಇತ್ಯಾದಿ.
2. ಸಂದರ್ಶಕ ಪ್ರಾಧ್ಯಾಪಕರ ಆವ್ಹಾನ.

**5. ವಿಚಾರ ಸಂಕಿರಣ/ಸಮಾವೇಶಗಳು.**

ಮಹಿಳಾ ಅಧ್ಯಯನದ ಉಪಯುಕ್ತತೆಯನ್ನು ಮನವರಿಕೆಮಾಡಿಕೊಡುವ ಹಾಗೂ ಈ ತಿಳುವಳಿಕೆಯ ವಿಸ್ತರಿಸುವ ಕಾರ್ಯಕ್ರಮಗಳು

ಈ ನಿಟ್ಟಿನಲ್ಲಿ ಹಲವಾರು ವಿಚಾರ ಸಂಕಿರಣಗಳನ್ನು ವಿಭಾಗ ನಡೆಸಿಕೊಂಡು ಬಂದಿರುವುದು.

6. **ಕಾರ್ಯಾಗಾರಗಳು**

1. ಸ್ತ್ರೀವಾದಿ ಸಂಶೋಧನಾ ವಿಧಾನಗಳನ್ನು ಪರಿಚಯಿಸುವ ಕಾರ್ಯಾಗಾರಗಳನ್ನು ನಡೆಸುವುದು.

2. ಲೇಖಕಿಯರು, ಚಿಂತಕಿಯರಿಂದ ಆಯ್ದ ಮಹಿಳಾ ಸಮುದಾಯಗಳನ್ನು ಗುರುತಿಸಿ ಕಾರ್ಯಾಗಾರಗಳನ್ನು ನಡೆಸುವುದು, (ಶಿಕ್ಷಕರು, ಪಂಚಾಯತಿ ಸದಸ್ಯರು, ವಿದ್ಯಾರ್ಥಿಗಳು ಮಹಿಳಾ ಉದ್ಯಮಿಗಳು ಇತ್ಯಾದಿ)

7. **ಬೇರೆ ಬೇರೆ ಸಂಸ್ಥೆಗಳೊಂದಿಗೆ ಸಂಪರ್ಕ ಜಾಲವನ್ನು ಹೊಂದುವುದು. ಸರ್ಕಾರಿ, ಸರ್ಕಾರೇತರ ಸಂಸ್ಥೆಗಳೊಟ್ಟಿಗೆ ಕಾರ್ಯ ನಿರ್ವಹಿಸುವುದು.**

8. **ನಿರಂತರ ಮೌಲ್ಯಮಾಪನ ಹಾಗೂ ಪರಿಶೀಲನೆ**

ನಿಗದಿತ ಸಮಯ ಸಂದರ್ಭಾನುಸಾರ ಯೋಜನೆ-ಕಾರ್ಯಗಳ ಅನುಷ್ಠಾನ ಹಾಗೂ ಅವುಗಳನ್ನು ಕುರಿತಂತೆ ಮೌಲ್ಯಮಾಪನ ಹಾಗೂ ಆತ್ಮ ವಿಮರ್ಶೆಯ ಮೂಲಕ ವಿಭಾಗವನ್ನು ಕಟ್ಟಿ ಬೆಳೆಸುವುದು.

9. **ಭವಿಷ್ಯತ್ತಿನಲ್ಲಿ ವಿಭಾಗವನ್ನು ಮುನ್ನಡೆಸುವ ಚಟುವಟಿಕೆಗಳು**

1. ಮಹಿಳಾ ಅಧ್ಯಯನವನ್ನು ವಿಭಿನ್ನ ಪೂರಕ ಜ್ಞಾನ ಶಿಸ್ತುಗಳೊಂದಿಗಿನ ಅಂತರ ಸಂಬಂಧವನ್ನು ಸಂಶೋಧಿಸುವುದು. ಉದಾ-ಭಾಷೆ, ಸಂಸ್ಕೃತಿ, ಜನಸಮುದಾಯಗಳು, ಜಾನಪದ-ಅಲೆಮಾರಿ, ಬುಡಕಟ್ಟು ಗುಂಪುಗಳೊಂದಿಗಿನ ಲಿಂಗಸಂಬಂಧಗಳನ್ನು ಅಧ್ಯಯನ ಮಾಡುವುದು. ಸ್ಥಾಪಕ ಪರಂಪರೆ, ಸಂಸ್ಕೃತಿಗಳನ್ನು ಪುನರ್ ವಿಮರ್ಶಿಸುವುದು. ಬೇರೆ ಬೆರೆ ಜ್ಞಾನ ಪರಂಪರೆಗಳಿಂದ ಸ್ವೀಕರಿಸಿ, ಅವುಗಳ ಅನನ್ಯತೆಯನ್ನು ಮಹಿಳಾ ಅಧ್ಯಯನದ ದೇಶಿ ಚೌಕಟ್ಟಿನಲ್ಲಿ ವಿಸ್ತರಿಸುವುದು.

## ಸ್ವಮೌಲ್ಯಮಾಪನ

### ಬೋಧನೆ ಹಾಗೂ ಸಂಶೋಧನೆಯಲ್ಲಿನ ವೈಯಕ್ತಿಕ ಸಾಧನೆ ಹಾಗೂ ಅಭಿವೃದ್ಧಿಯ ಮುನ್ನೋಟ

**ಕನ್ನಡ** ವಿಶ್ವವಿದ್ಯಾಲಯದ ಮಹಿಳಾ ಅಧ್ಯಯನ ವಿಭಾಗದ ನನ್ನ ಅಧ್ಯಾಪಕ ವೃತ್ತಿಯನ್ನು ಉಪಯುಕ್ತವಾಗಿ ನಿರ್ವಹಿಸಿದ ಮುಖ್ಯಾಂಶಗಳನ್ನು ಕೆಲವೇ ಮಾತುಗಳಲ್ಲಿ ಮಂಡಿಸುತ್ತಿದ್ದೇನೆ. ವಿಭಿನ್ನ ಜ್ಞಾನಶಿಸ್ತುಗಳಲ್ಲಿ ಸ್ಥಾಪಿತವಾಗಿರುವ ಜ್ಞಾನವನ್ನು ಸ್ತ್ರೀವಾದಿ ದೃಷ್ಟಿಕೋನದಿಂದ ಪುನರ್ ವಿಮರ್ಶಿಸುವ ಕಾರ್ಯವನ್ನು ಕರ್ನಾಟಕದಲ್ಲಿ ಆರಂಭಿಸಿದ್ದು 70ರ ದಶಕದಿಂದೀಚೆಗೆ. ಭಾಷೆ, ಸಾಹಿತ್ಯ, ಸಂಸ್ಕೃತಿ, ತತ್ವಶಾಸ್ತ್ರ, ಮತ್ತು ಪ್ರಮುಖ ಮಾನವಿಕ ಅಧ್ಯಯನ ಶಾಖೆಗಳಾದ ಸಮಾಜಶಾಸ್ತ್ರ, ಮಾನವಶಾಸ್ತ್ರ, ಮನಃಶಾಸ್ತ್ರ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ಇತಿಹಾಸ ಮುಂತಾದ ಜ್ಞಾನಶಾಖೆಗಳನ್ನು ಮಹಿಳಾ ದೃಷ್ಟಿಕೋನದಿಂದ ಅಧ್ಯಯನ ಮಾಡುವುದು ಮಹಿಳಾ ಅಧ್ಯಯನ ವಿಭಾಗದ ಮುಖ್ಯ ಆಶಯವಾಗಿದೆ. ಮಹಿಳಾ ಅಧ್ಯಯನದ ಈ ನೆಲೆ ಅಕಾಡೆಮಿಕ್ ವಲಯದಲ್ಲಿ ಅತ್ಯಂತ ಕುತೂಹಲಕರವಾದ ಹಾಗೂ ಗಂಭೀರವಾದ ಚರ್ಚೆಯನ್ನು ಮಂಡಿಸುತ್ತದೆ. ಎಲ್ಲಾ ಜ್ಞಾನಶಾಖೆಗಳಲ್ಲಿ ಈ ಚಿಂತನೆಯನ್ನು ಅಳವಡಿಸುವುದು ಇಂದು ಅನಿವಾರ್ಯವಾಗಿದೆ. ಸ್ಥಿರವಾಗಿ ನೆಲೆಯೂರಿರುವ ಸಾಂಪ್ರದಾಯಿಕವಾದ ಪುರುಷ ಕೇಂದ್ರಿತ ಆಲೋಚನಾ ಕ್ರಮದಿಂದ ಹೊರಬಂದು ಚಲನಶೀಲವಾದ ಜಂಡರ್ ಚಿಂತನಾ ಕ್ರಮವನ್ನು ರೂಢಿಸುವುದು ವರ್ತಮಾನದ ಲಕ್ಷಣವಾಗಿದೆ. ಇಂತಹ ಹಲವಾರು ಅಗತ್ಯ ಕಾರಣಗಳಿಗಾಗಿ ಮಹಿಳಾ ಅಧ್ಯಯನ ವಿಭಾಗವನ್ನು ರೂಪಿಸಲಾಗಿದೆ. ನನ್ನ ವಿಭಿನ್ನ ಜ್ಞಾನ ಶಿಸ್ತಿನ ತಿಳುವಳಿಕೆಯನ್ನು ಭಾಷೆ ,ಸಾಹಿತ್ಯ, ಸಮಾಜ ಮತ್ತು ಸಂಸ್ಕೃತಿ ವಿಷಯಗಳ ತಜ್ಞತೆಯಲ್ಲಿ ವಿಸ್ತರಿಸಿಕೊಂಡು ವಿಭಾಗದ ಏಳ್ಗೆಗಾಗಿ ಕಾರ್ಯ ನಿರ್ವಹಿಸುತ್ತಿದ್ದೇನೆ. ನನ್ನ ಲೇಖನ, ಗ್ರಂಥಗಳ ಮಾಹಿತಿಯು ಇದನ್ನು ಸಾಬೀತು ಪಡಿಸುತ್ತವೆ.

ಕನ್ನಡ ವಿಶ್ವವಿದ್ಯಾಲಯದ ಧ್ಯೇಯ ವಾಕ್ಯದಂತೆ ಸಂಶೋಧನೆಯನ್ನು ನಡೆಸುವುದು ಮಹಿಳಾ ಅಧ್ಯಯನ ವಿಭಾಗದ ಮುಖ್ಯವಾದ ಆಶಯವಾಗಿದೆ. ಈ ಕಾರಣವಾಗಿ ಪ್ರಧಾನವಾಗಿ ಅಧ್ಯಯನ ಯೋಜನೆಗಳಾಗಿ ಗುಂಪುಯೋಜನೆಗಳು, ವೈಯಕ್ತಿಕ ಯೋಜನೆಗಳನ್ನು ನಡೆಸಿಕೊಂಡು ಬಂದಿದ್ದೇನೆ. ಈ ಯೋಜನೆಗಳ ಒಟ್ಟೊಟ್ಟಿಗೆ ಕಾರ್ಯಕ್ರಮಗಳಾಗಿ ವಿಚಾರ ಸಂಕಿರಣ, ಕಮ್ಮಟ

ಮತ್ತು ತರಬೇತಿ ಚಟುವಟಿಕೆಗಳನ್ನು ಕೂಡ ವಿಭಾಗದ ಅಧ್ಯಾಪಕ ಸದಸ್ಯನಾಗಿ ನಡೆಸಿಕೊಂಡು ಬಂದಿದ್ದೇನೆ. ಸಮುದಾಯ ಕಾರ್ಯಚಟುವಟಿಕೆಗಳಾಗಿ ಮಹಿಳಾ ಸ್ವಸಹಾಯ ಸಂಘಗಳಿಗೆ ಪ್ರೋತ್ಸಾಹ ಶಿಬಿರಗಳು, ಜಂಡರ್ ಜಾಗೃತಿ ಶಿಬಿರಗಳು ಹಾಗೂ ಮಹಿಳಾ ಸಬಲೀಕರಣ ಕಾರ್ಯಕ್ರಮಗಳನ್ನು ರೂಪಿಸಿಕೊಂಡು ಬಂದಿದ್ದೇನೆ. ಮಹಿಳಾ ಅಧ್ಯಯನದ ಬೆಳವಣಿಗೆಗೆ ಕೇವಲ ಸಂಶೋಧನೆ ಮಾಡಿದರೆ ಸಾಲದು, ಶೋಧಿತ ಸತ್ಯಗಳನ್ನು ಮಹಿಳಾ ಸಮುದಾಯದಲ್ಲಿ ಕ್ರಿಯಾತ್ಮಕವಾಗಿ ಕಾರ್ಯರೂಪಕ್ಕೆ ತರಬೇಕು. ಹಾಗಾಗಿ ಮಹಿಳಾ ಅಧ್ಯಯನದಲ್ಲಿ ಸಿದ್ಧಾಂತ ಮತ್ತು ಚಳುವಳಿಗಳನ್ನು ಪರಸ್ಪರ ಸಾಹಚರ್ಯದ ಮೂಲಕ ನಡೆಸಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಸಂಶೋಧನೆಗೆ ಪೂರಕವಾಗಿ ಬೋಧನೆಯನ್ನು ಕೂಡಾ ಅಷ್ಟೇ ಸಮರ್ಥವಾಗಿ ವಿಭಾಗವು ಮುನ್ನಡೆಸಿಕೊಂಡು ಬರುವಂತೆ ಮಹಿಳಾ ಅಧ್ಯಯನವನ್ನು ಕೋರ್ಸ್‌ಗಾಗಿ, ಡಿಪ್ಲೋಮಾ, ಎಂ.ಎ. ಪಿಎಚ್.ಡಿ ಸಂಯೋಜಿತ ಪದವಿ, ಎಂ.ಫಿಲ್ ಪದವಿ ಹಾಗೂ ಪಿಎಚ್.ಡಿ ಪದವಿಗಳನ್ನು ನಡೆಸುವುದು. ಬೋಧನೆಯಲ್ಲಿ ಸಂಶೋಧನೆಯನ್ನು ಅನ್ವಯಿಸಿ ಪಠ್ಯಕ್ರಮಗಳನ್ನು ರೂಪಿಸುವುದು, ಪರಿಷ್ಕರಿಸುವುದು ಇತ್ಯಾದಿ ಚಟುವಟಿಕೆಗಳನ್ನು ನಿರಂತರವಾಗಿ ಮಾಡಿಕೊಂಡು ಬಂದಿದ್ದೇನೆ. ವಿಭಾಗವು ಈ ಎಲ್ಲ ಚಟುವಟಿಕೆಗಳನ್ನು ದಾಖಲಿಸಿ ಓದುಗ ಸಮುದಾಯಕ್ಕೆ ತಲುಪಿಸಲು 'ಮಹಿಳಾ ಅಧ್ಯಯನ' ಎಂಬ ಹೆಸರಿನಲ್ಲಿ ಅರ್ಧವಾರ್ಷಿಕ ನಿಯತಕಾಲಿಕೆಯನ್ನು ರೂಪಿಸಿ ಪ್ರಸಾರಾಂಗದಿಂದ ಪ್ರಕಟಿಸಲಾಗಿದೆ. ಮಹಿಳಾ ಅಧ್ಯಯನ ಪತ್ರಿಕೆಯ ನಾಲ್ಕು ಸಂಪುಟಗಳು ನನ್ನ ಸಂಪಾದಕತ್ವದಲ್ಲಿ ಹೊರಬಂದಿವೆ. ಪ್ರಕಟಣೆಗೆ ಪೂರಕವಾಗಿ ವೈಯಕ್ತಿಕ ಯೋಜನೆಯ ಸ್ವತಂತ್ರ, ಕೃತಿಗಳನ್ನು ಕೂಡಾ ಕನ್ನಡ ವಿವಿ ಪ್ರಸಾರಾಂಗದಿಂದ ಪ್ರಕಟಿಸುವ ಕಾರ್ಯವನ್ನು ನಿರಂತರವಾಗಿ ಮುಂದುವರಿಸಿಕೊಂಡು ಬಂದಿದ್ದೇನೆ. ಮಹಿಳಾ ಅಧ್ಯಯನದ ಉಪಯುಕ್ತತೆಯನ್ನು ಮನವರಿಕೆಮಾಡಿಕೊಡುವ ಹಾಗೂ ಈ ತಿಳುವಳಿಕೆಯನ್ನು ವಿಸ್ತರಿಸುವ ಕಾರ್ಯಕ್ರಮಗಳಾಗಿ ವಿಚಾರ ಸಂಕಿರಣ/ಸಮಾವೇಶ/ಕಮ್ಮಟಗಳು/ಶಿಬಿರ /ಕಾರ್ಯಾಗಾರಗಳನ್ನು ವಿಭಾಗದ ಸದಸ್ಯನಾಗಿ ನಡೆಸಿಕೊಂಡು ಬಂದಿದ್ದೇನೆ.

ವಿಭಾಗದ ಧ್ಯೇಯೋದ್ದೇಶಕ್ಕೆ ಪೂರಕವಾಗಿ 'ಯುಜಿಸಿ' ಪ್ರಾಯೋಜಿತ ಮಹಿಳಾ ಅಧ್ಯಯನ ಕೇಂದ್ರವನ್ನು ವಿಸ್ತರಣಾ ಚಟುವಟಿಕೆಯ ಸಂಸ್ಥೆಯಾಗಿ ರೂಪಿಸಲು ಪ್ರಯತ್ನಿಸಿದ್ದೇನೆ. ನಾನು ಮುಖ್ಯಸ್ಥನಾದ ಅವಧಿಯಲ್ಲಿ ಕೇಂದ್ರವನ್ನು ವಿವಿಯಲ್ಲಿ ಆರಂಭಿಸಲು ಕೋರಿ ಯುಜಿಸಿಗೆ ಪ್ರಸ್ತಾವವನ್ನು ಸಿದ್ಧಪಡಿಸಿ ಸಲ್ಲಿಸಿದ್ದೇನೆ.ಮಹಿಳಾ ಅಧ್ಯಯನ ವಿಭಾಗದ ಎಲ್ಲಾ ಅಧ್ಯಾಪಕ ಸದಸ್ಯರು ಈ ಕೇಂದ್ರದ ಕಾರ್ಯಚಟುವಟಿಕೆಗಳನ್ನು ಚಲನಶೀಲವಾಗಿ ನಿರ್ವಹಿಸಿಕೊಂಡು ಬಂದಿದ್ದಾರೆ. ಹಾಗಾಗಿ 2004 ರಿಂದ ಇಲ್ಲಿಯವರೆಗೆ ಅದರ ಬೆಳವಣಿಗೆಯಲ್ಲಿ ನನ್ನ ಪಾತ್ರವೂ ಮಹತ್ವದ್ದಾಗಿದೆ. ಈ ಕೇಂದ್ರದಲ್ಲಿ ನಾನು ನಿರ್ದೇಶಕನಾಗಿ ಎರಡು ಅವಧಿಯಲ್ಲಿ ಕಾರ್ಯ ನಿರ್ವಹಿಸಿ ಅಲ್ಲಿಯೂ ಕೂಡ ಬೋಧನೆ, ಸಂಶೋಧನೆ ಹಾಗೂ ಕ್ರಿಯಾತ್ಮಕ ಕಾರ್ಯಕ್ರಮಗಳನ್ನು ರೂಪಿಸಿ ಮುನ್ನಡೆಸಿಕೊಂಡು ಬಂದಿದ್ದೇನೆ. ಮಹಿಳಾ ಅಧ್ಯಯನವನ್ನು ಕುರಿತಂತೆ ಎರಡು ವರ್ಷ ಡಿಪ್ಲೊಮೊ ಕೋರ್ಸ ಮತ್ತು ಎರಡು ವರ್ಷ ಎಂ ಎ ಮಹಿಳಾ ಅಧ್ಯಯನ ಕೋರ್ಸಗಳನ್ನು ಅಧಿಕ ಹೊಣೆಗಾರಿಕೆಯಿಂದ ಬೋಧನಾ ಚಟುವಟಿಕೆಯಲ್ಲಿ ಪಾಲ್ಗೊಂಡಿದ್ದೇನೆ. ಅಲ್ಲದೆ ಕೇಂದ್ರದಿಂದ ಪ್ರಕಟವಾದ ಏಳು ಪುಸ್ತಕಗಳ ರೂಪಿಕೆಯಲ್ಲಿ ಮೂರು ಕೃತಿಗಳ ಸಂಪಾದಕನಾಗಿ (ಇತರರೊಡನೆ) ನಾನಿದ್ದೇನೆ. ಎರಡು ಕೃತಿಗಳನ್ನು ನಿರ್ದೇಶಕನಾಗಿ ಪ್ರಕಾಶನ ಪಡಿಸಿದ್ದೇನೆ. ಈ ಎಲ್ಲ ಕೃತಿಗಳು ಕರ್ನಾಟಕದಾದ್ಯಂತ ಎಲ್ಲಾ ವಿಶ್ವವಿದ್ಯಾಲಯಗಳ ಮಹಿಳಾ ಅಧ್ಯಯನ ಆಸಕ್ತಿಯ ವಿದ್ಯಾರ್ಥಿಗಳು ಹಾಗೂ ಹೊಸ ಸಂಶೋಧಕರಿಗೆ ಮಾರ್ಗದರ್ಶಿಯಾಗಿವೆ. ಸಾರಾಂಶೀಕರಿಸಿ ಹೇಳುವುದಾದರೆ ಕೇಂದ್ರ ಮತ್ತು ವಿಭಾಗಗಳನ್ನು ಪರಸ್ಪರ ಪೂರಕವಾಗಿ ಸಂಪನ್ಮೂಲವನ್ನು ಹಂಚಿಕೊಂಡು ಕಾರ್ಯ ನಿರ್ವಹಿಸಿ ಒಟ್ಟಾರೆ ಮಹಿಳಾ ಅಧ್ಯಯನವನ್ನು ಕನ್ನಡ ವಿಶ್ವವಿದ್ಯಾಲಯದಲ್ಲಿ ಅಭಿವೃದ್ಧಿಪಡಿಸಿದ್ದೇನೆ.

ಇನ್ನು ಭಾಷಾ ನಿಕಾಯದ ಆರು ವಿಭಾಗಗಳ ಆಶ್ರಯದಲ್ಲಿ ನಡೆಯುತ್ತಿರುವ ಕನ್ನಡ ಎಂ.ಎ, ಪಿಎಚ್.ಡಿ ಸಂಯೋಜಿತ ಪದವಿಯಲ್ಲಿ ನಾನು ಇಡೀ ಕೋರ್ಸಿನ ಸಂಚಾಲಕನಾಗಿ ಎರಡು ವರ್ಷ ಕಾರ್ಯ ನಿರ್ವಹಿಸಿದ್ದೇನೆ. ಈಗ ಮತ್ತೆ ಎರಡನೆಯ ಬಾರಿ ಈ ಕೋರ್ಸಿನ ಸಂಚಾನಕನಾಗಿ ಕಾರ್ಯ ನಿರ್ವಹಿಸಲು ವಿಶ್ವವಿದ್ಯಾಲಯ ನಿಯೋಜಿಸಿದೆ. ಈ ಕೋರ್ಸಿನ ಚಟವಟಿಕೆಗಳಾದ ಬೋಧನೆ, ಪಾಠಗಳ ಹಂಚಿಕೆ, ಪಠ್ಯಕ್ರಮ ಪರಿಷ್ಕರಣೆ ಮತ್ತು ವಿದ್ಯಾರ್ಥಿಗಳಿಗೆ ಪಿಎಚ್ ಡಿ ಮಾರ್ಗದರ್ಶನ ಹಾಗೂ ಕೋರ್ಸಿನ ಪರಿಕ್ಷಾ ಮಂಡಳಿಯ ಸಂಚಾಲಕನಾಗಿ ಎಲ್ಲ ಬಗೆಯ ವ್ಯಾಪಕ ಕಾರ್ಯಗಳನ್ನು ನಿರ್ವಹಿಸುತ್ತಿದ್ದೇನೆ. ಆರಂಭದಲ್ಲಿ ನೀಡಿದ ನನ್ನ ವೈಯಕ್ತಿಕ ವಿವರಗಳ ಮಾಹಿತಿಯು ಇದನ್ನು ರುಜುವಾತುಪಡಿಸುತ್ತದೆ.

ಬೇರೆ ಬೇರೆ ಸಂಸ್ಥೆಗಳೊಂದಿಗೆ ಸಂಪರ್ಕ ಜಾಲವನ್ನು ಹೊಂದುವುದು. ಸರ್ಕಾರಿ, ಸರ್ಕಾರೇತರ ಸಂಸ್ಥೆಗಳೊಟ್ಟಿಗೆ ಕಾರ್ಯ ನಿರ್ವಹಿಸುವುದು. ನಿರಂತರ ಮೌಲ್ಯಮಾಪನ ಹಾಗೂ ಪರಿಶೀಲನೆ ನಡೆಸುವುದು ನಿಗದಿತ ಸಮಯ ಸಂದರ್ಭಾನುಸಾರ ಯೋಜನೆ–ಕಾರ್ಯಗಳ ಅನುಷ್ಠಾನ ಹಾಗೂ ಅವುಗಳನ್ನು ಕುರಿತಂತೆ ಮೌಲ್ಯಮಾಪನ ಹಾಗೂ ಆತ್ಮ ವಿಮರ್ಶೆಯ ಮೂಲಕ ವಿಭಾಗವನ್ನು ಕಟ್ಟಿ ಬೆಳೆಸುವುದು. ಭವಿಷ್ಯತ್ತಿನಲ್ಲಿ ವಿಭಾಗವನ್ನು ಮುನ್ನಡೆಸಲು ಮಹಿಳಾ ಅಧ್ಯಯನವನ್ನು ವಿಭಿನ್ನ ಪೂರಕ ಜ್ಞಾನ ಶಿಸ್ತುಗಳೊಂದಿಗಿನ ಅಂತರ ಸಂಬಂಧವನ್ನು ಸಂಶೋಧಿಸುವುದು. ಉದಾ–ಭಾಷೆ, ಸಂಸ್ಕೃತಿ, ಜನಸಮುದಾಯಗಳು, ಜಾನಪದ–ಅಲೆಮಾರಿ, ಬುಡಕಟ್ಟು ಗುಂಪುಗಳೊಂದಿಗಿನ ಲಿಂಗಸಂಬಂಧಗಳನ್ನು ಅಧ್ಯಯನ ಮಾಡುವುದು. ಸ್ಥಾಪಕ ಪರಂಪರೆ, ಸಂಸ್ಕೃತಿಗಳನ್ನು ಪುನರ್ ವಿಮರ್ಶಿಸುವುದು. ಬೇರೆ ಬೇರೆ ಜ್ಞಾನ ಪರಂಪರೆಗಳೊಡನೆ ಸಂವಾದಿಸಿ, ಅವುಗಳ ಅನನ್ಯತೆಯನ್ನು ಮಹಿಳಾ ಅಧ್ಯಯನದ ದೇಶಿ ಚೌಕಟ್ಟಿನಲ್ಲಿ ವಿಸ್ತರಿಸುವುದು ಇತ್ಯಾದಿ ಆಶಯಗಳನ್ನು ಹೊಂದಲಾಗಿದೆ. ನನ್ನ ಒಟ್ಟಾರೆ ಕಾರ್ಯ ಸಾಧನೆಯ ಈವರೆಗಿನ ಕೆಲವು ಸಂಶೋಧನೆಗಳನ್ನು ಗುರುತಿಸಿ ಸರ್ಕಾರ ಹಾಗೂ ಸರ್ಕಾರೇತರ ಸಂಸ್ಥೆಗಳು ರಾಜ್ಯ ಮಟ್ಟದ ಹಾಗೂ ವಿಶ್ವವಿದ್ಯಾಲಯ ಮಟ್ಟದ ಪ್ರಶಸ್ತಿ ಪುರಸ್ಕಾರಗಳನ್ನು ನೀಡಿವೆ. ಅವುಗಳನ್ನು ತಮ್ಮ ಅವಗಾಹನೆಗೆ ತರುತ್ತಾ ನನ್ನ ಈ ಟಿಪ್ಪಣಿಯನ್ನು ಮುಕ್ತಾಯಗೊಳಿಸುತ್ತೇನೆ.